# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 147 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

## ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಅಣ್ಣಾ... ಮೂರು ದಿನದಿಂದ ಊಟ ಮಾಡಿಲ್ಲ, ಒಂದು ರೂಪಾಯಿ ಕೊಡಿ.

ಗುಂಡ : ಮೂರು ದಿನದಿಂದ ಊಟ ಮಾಡಿಲ್ಲ ಅಂತಿಯಾ, ಒಂದು ರೂಪಾಯಿ ತಗೊಂಡು ಏನ್ ಮಾಡ್ತೀಯಾ?

ಭಿಕ್ಷುಕ : ಎಷ್ಟು ಕೆಜಿ ಕಮ್ಮಿ ಆಗಿದ್ದೀನಿ ಅಂತಾ ನೋಡ್ತೀನಿ ಅಣ್ಣಾ....

ಮೈಸೂರು ಮಿತ್ರ

ಸೋಮವಾರ, 11 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ಜಗತ್ತಿನ ಅಗ್ಗದ ವಸ್ತುವೆಂದರೆ 'ಸಲಹೆ', ಒಬ್ಬರನ್ನು ಕೇಳಿದರೆ ಸಾವಿರ ಜನ ನೀಡುತ್ತಾರೆ. ಜಗತ್ತಿನ ದುಬಾರಿ ವಸ್ತುವೆಂದರೆ 'ಸಹಾಯ', ಸಾವಿರ ಜನರನ್ನು ಕೇಳಿದಾಗ, ಒಬ್ಬರು ಮಾಡುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅವರೆ ಮಾರಿ ಅವರಿಗೆ ಕೊಟ್ಟೆ, ನನಗೇನು ಉಳಿಯಿತು'

## ನಿಮ್ಮ ಪತ್ರಗಳು

### ವಿಶೇಷಚೇತನರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

'ಸರ್ವರಿಗೂ ಶಿಕ್ಷಣ' ಎಂಬುದು ಮಕ್ಕಳ ಸಂವಿಧಾನಬದ್ಧ ಹಕ್ಕು. ಈ ಶೀರ್ಷಿಕೆಯ ವ್ಯಾಪ್ತಿಯಲ್ಲಿ ವಿವಿಧ ಸಾಮರಸ್ಯ ಅಂದರೆ ವಿಕಲಚೇತನರು, ವಿಶೇಷ ಅಗತ್ಯವುಳ್ಳ ಮಕ್ಕಳೂ ಇದ್ದಾರೆ. ಈ ಮಕ್ಕಳೂ ಸಹ ಇತರೆ ಮಕ್ಕಳ ಜೊತೆಯಲ್ಲಿ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾಗಬೇಕು ಎಂಬುದು ಸಂವಿಧಾನದ ಆಶಯ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹಾಗೂ ಕಲಿಕೆಯಲ್ಲಿ ಭಿನ್ನತೆ ಇರುವ ಮಕ್ಕಳಿಗೆ ಶಿಕ್ಷಣದ ಅವಕಾಶ ಒದಗಿಸುವುದು ನಾಗರಿಕ ವ್ಯವಸ್ಥೆಯ ಜವಾಬ್ದಾರಿ. ಅವರಿಗೆ ಎರಡು ಸಂದರ್ಭಗಳಲ್ಲಿ ತೊಡಕಾಗುತ್ತದೆ.

ಒಂದು ಶಿಕ್ಷಣ ಪಡೆಯುವ ಸಮಯದಲ್ಲಿ, ಎರಡನೆಯದು ಪರೀಕ್ಷೆ ಸಮಯದಲ್ಲಿ. ಅವರು ಸಾಮಾನ್ಯರಂತೆ ಅವರೇ ಪರೀಕ್ಷೆ ಬರೆಯಲು ಸಾಧ್ಯವಿಲ್ಲ. ಅವರು ಮತ್ತೊಬ್ಬರ ಸಹಾಯ ಪಡೆದು ಪರೀಕ್ಷೆ ಬರೆಯಬೇಕಾಗುತ್ತದೆ. ಅಂಥ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಆಗದಿರುವ, ಕಾರಣ, ಅವರು ಮತ್ತೊಬ್ಬರ ನೆರವಿನಿಂದ ಪರೀಕ್ಷೆ ಬರೆಯಲು ಸಹಾಯಕರನ್ನು ಪಡೆದು ತಮ್ಮ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅದನ್ನು ಪೂರೈಸುವುದು ತುಂಬಾ ಕಷ್ಟ, ಕೆಲವು ಸಂಘ ಸಂಸ್ಥೆಗಳು, ಸ್ವಯಂ ಸೇವಕರು, ಸ್ವಯಂ ಪ್ರೇರಿತರಾಗಿ ಕಾಲೇಜು ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದು ಅವರ ಬಾಳಿಗೆ ಬೆಳಕಾಗಿ ನಿಮ್ಮೊಂದಿಗೆ ನಾವಿದ್ದೇವೆ ಎಂದು ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ. ಅಂತ ಅನೇಕ ಸಹಾಯಕ ಬರಹಗಾರರಿಗೆ ಈ ಮೂಲಕ ಧನ್ಯವಾದಗಳು. ನಮ್ಮ ಕ್ರಿಯಾ ಹ್ಯಾಂಡ್ ಎಂಬ ಸಂಸ್ಥೆಯು ಸಹಾಯಕ ಬರಹಗಾರರನ್ನು ಹೊಂದಿಸಿ ಕೊಡುತ್ತಿದೆ. ನಿಸ್ವಾರ್ಥ ಸ್ವಯಂಸೇವಕರ ಯುವಕರ ಪಡೆ ಸೇವೆ ಸಲ್ಲಿಸುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ/ಶಿಕ್ಷಣ ಇಲಾಖೆ ಕಾಲೇಜು ಆಡಳಿತ ಮಂಡಳಿ ಮತ್ತು ಸಂಬಂಧಪಟ್ಟವರು ಇದರ ಬಗ್ಗೆ ಸ್ವಲ್ಪವಾದರೂ ಗಮನಹರಿಸಬೇಕು, ಯಾವ ರೀತಿ ಎಂದರೆ ಸಹಾಯಕ ಬರಹಗಾರರು ಯಾವಾಗಲೂ ಸಿದ್ಧರಿರಬೇಕು., ಈ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ನನ್ನ ಮನವಿ, ಏಕೆಂದರೆ ನಾನು ಕೂಡ ಅನೇಕ ವಿಶೇಷಚೇತನ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಹಾಯಕ ಬರಹಗಾರರಾಗಿ ಕೆಲಸ ಮಾಡಿದ್ದೇನೆ. **–ಗೋವಿತ್ ಕಿರಣ್, ಮೈಸೂರು**

### ಕಾವೇರಿ ಕೊರಗು, ತಪ್ಪಲಿಲ್ಲ ಕನ್ನಡಿಗರ ನೋವು

ಮಾನ್ಯರೆ,

ಕಾವೇರಿಯ ಕೊರಗು ಕೇವಲ ಕನ್ನಡಿಗರ ನೋವಲ್ಲ, ಕಾವೇರಿಯೊಡಲ ಕಂದಮ್ಮಗಳ ನೋವು, ಕನ್ನಡಿಗರಿಗಾಗಿದೆ 1892 ಹಾಗೂ 1924ರ ಒಪ್ಪಂದಗಳಿಂದ ಅನ್ಯಾಯ. ಅದನ್ನು ಸರಿಪಡಿಸಬೇಕಿದೆ. ಅದೇ ಮುಂದಿನ ನಡೆಯಾಗಬೇಕಿದೆ. ಕಾವೇರಿ ಕೊರಗು. ಕಾವೇರಿ ಕಾವು ರಾಜಕಾರಣಿಗಳಿಗೆ ಮೇವು... ಜನಸಾಮಾನ್ಯರಿಗೆ ನೋವು. ಕಾವೇರಿ ಒಪ್ಪಂದ ಕನ್ನಡಿಗರಾಯ್ತು ಕರಬಂಧ. ಇಷ್ಟೆಲ್ಲಾ ಆದರೂ ಕಾವೇರಿ ನೋವು ಮಾತ್ರ ಕರಗಲಿಲ್ಲ, ಕನ್ನಡಿಗರ ಕೂಗು ಕೇಳಲಿಲ್ಲ, ಜಲಶೋಷಣೆ ನಿಲ್ಲಲಿಲ್ಲ, ಕರುನಾಡಿಗರಿಗೆ ನೆಮ್ಮದಿಯಿಲ್ಲ. ರದ್ದಾಗಲಿ ಸ್ವಾತಂತ್ರ್ಯಪೂರ್ವದ ಒಮ್ಮುಖ ಕಾವೇರಿ ಕರಾರು, ರೂಪುಗೊಳ್ಳಲಿ ಯೋಗ್ಯ ಜಲನೀತಿ ಜರೂರು. ಕಾವೇರಿ ನದಿಯೊಡಲ ಜನರಿಗೆ ಲಭಿಸಲಿ ಶಾಂತಿ–ಸಮೃದ್ಧಿಯ ಕಡಲು. ಅದೇ ಕಾವೇರಿಯ ಒಲವು, ಕಾವೇರಿ ಮಡಿಲ ಮಕ್ಕಳಿಗೂ ನಲಿವು, ಮಾನವೀಯತೆಗೂ ಗೆಲುವು.

**–ಕೇಶವ್, ಟೈರ್ ಪಾರ್ಕ್, ಮೈಸೂರು**

### ವರ್ಷದ 365 ದಿನಗಳೂ ಗ್ರಂಥಾಲಯಗಳು ತೆರೆದಿರಲಿ

ಮಾನ್ಯರೆ,

ರಾಜ್ಯ ಸರ್ಕಾರದ ಸಾರ್ವಜನಿಕ ಗ್ರಂಥಾಲಯಗಳೆಲ್ಲವೂ ವರ್ಷದ 365 ದಿನವೂ ಸಾರ್ವಜನಿಕರಿಗೆ ಸೇವೆ ಒದಗಿಸುವಂತಿರಬೇಕು. ಸಾರ್ವಜನಿಕ ಗ್ರಂಥಾಲಯಗಳಿಗೆ ಪ್ರತಿ ಸೋಮವಾರ, ತಿಂಗಳ ಎರಡನೇ ಮಂಗಳವಾರ ಮತ್ತು ಇತರೆ ಸಾರ್ವಜನಿಕ ರಜಾ ದಿನಗಳು ಸೇರಿದಂತೆ ವರ್ಷದಲ್ಲಿ ಸುಮಾರು 75 ದಿನಗಳು ಸಾರ್ವಜನಿಕ ಸೇವೆಗೆ ಲಭ್ಯವಿರುವುದಿಲ್ಲ.

ಸಾರ್ವಜನಿಕ ಗ್ರಂಥಾಲಯದಲ್ಲಿ ಎಲ್ಲಾ ದಿನಪತ್ರಿಕೆಗಳು, ನಿಯತಕಾಲಿಕೆಗಳು ಕಥೆ–ಕಾದಂಬರಿಗಳು ಓದುಗರಿಗೆ ಸಿಗುವುದರಿಂದ ಹಿರಿಯ ನಾಗರಿಕರು ಮತ್ತು ವಿದ್ಯಾರ್ಥಿಗಳು ಇದರ ಉಪಯೋಗ ಪಡೆಯುತ್ತಾರೆ. ಕೆಲವು ಹಿರಿಯ ನಾಗರಿಕರಿಗೆ ಗ್ರಂಥಾಲಯಗಳು ವರದಾನವಾಗಿವೆ. ಇವರು ಪ್ರತಿ ದಿನ ಹೋಗುವ ಅಭ್ಯಾಸ ಇರುವುದರಿಂದ, ಗ್ರಂಥಾಲಯಕ್ಕೂ ರಜಾ ಇರುವುದರಿಂದ ಸಮಯ ಕಳೆಯಲು ಕಷ್ಟವಾಗಿ ಒಂದು ರೀತಿಯ ಮಾನಸಿಕ ತೊಂದರೆ ಅನುಭವಿಸುತ್ತಾರೆ.

ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಮನೆಯಲ್ಲಿ ಪೂರಕ ವಾತಾವರಣ ಇಲ್ಲದ ಬಡ ವಿದ್ಯಾರ್ಥಿಗಳು ಸಾರ್ವಜನಿಕ ಲೈಬ್ರರಿಗಳನ್ನೇ ಅವಲಂಬಿಸಿದ್ದಾರೆ, ಸಾರ್ವಜನಿಕ ಗ್ರಂಥಾಲಯಗಳ ಸೇವೆ ಸಾಮಾನ್ಯ ಜನರಿಗೆ ಸಿಗುವಂತಾಗಬೇಕಾದರೆ ಸರ್ಕಾರ ಇದನ್ನು ಸಹ ಅಗತ್ಯ ಸೇವೆ ಎಂದು ಪರಿಗಣಿಸಿ ವರ್ಷದ 365 ದಿನವೂ ತೆರೆದಿರಲಿ.

**–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು**

### ಅಂಡರ್‌ಪಾಸ್‌ಗಳನ್ನು ನೀರು ನಿಲ್ಲದಂತೆ ನಿರ್ಮಿಸಿ

ಮಾನ್ಯರೆ,

ಮೈಸೂರಿನ ಕೆ.ಜಿ.ಕೊಪ್ಪಲ್ ಬಳಿಯ, ರೈಲ್ವೆ ಕೆಳಸೇತುವೆಯನ್ನು ನೂರು ಅಡಿಗೆ ವಿಸ್ತರಣೆ ಮತ್ತು ಕ್ರಾಫರ್ಡ್ ಹಾಲ್ ಬಳಿ ಅಂಡರ್‌ಪಾಸ್ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ ಎಂದು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಹೇಳಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇವೆರಡೂ ಅಂಡರ್‌ಪಾಸ್‌ಗಳು ಕಾರ್ಯರೂಪಕ್ಕೆ ಬಂದರೆ ನಾಗರಿಕರಿಗೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಈಗಿರುವ ಅಂಡರ್‌ಪಾಸ್‌ಗಳಲ್ಲಿ, ಮಳೆ ಬಂದಾಗ ಮೊಣಕಾಲುದ್ದ ನೀರು ತುಂಬಿಕೊಂಡು ವಾಹನ ಸಂಚಾರರು ಬಹಳ ಕಷ್ಟ ಪಡುವುದು ಸಾಮಾನ್ಯ. ಹಾಗಾಗಿ ಈಗ ಮಾಡಲು ಹೊರಟಿರುವ ಅಂಡರ್‌ಪಾಸ್‌ಗಳನ್ನು ನಿರ್ಮಿಸುವಾಗ, ಈ ವಿಷಯ ಗಮನದಲ್ಲಿಟ್ಟುಕೊಂಡು, ಮಳೆಗಾಲದಲ್ಲಿ ಅಂಡರ್‌ಪಾಸ್‌ಗಳಲ್ಲಿ ನೀರು ನಿಲ್ಲದಂತೆ ಕ್ರಮವಹಿಸುವುದು ಒಳ್ಳೆಯದು. ಸಂಸದ ಪ್ರತಾಪಸಿಂಹ ಅವರು ಈ ದಿಕ್ಕಿನಲ್ಲಿ ಯೋಚಿಸಿ, ಗುತ್ತಿಗೆ ಪಡೆಯುವ ಗುತ್ತಿಗೆದಾರರಿಗೆ ಸರಿಯಾದ ಸೂಚನೆ ಕೊಡಬೇಕು. **–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.**



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

# ಕಷ್ಟ ಕೊಂಡ್ಕೋಬಾರದು... ಸುಖ ಮಾರ್ಕೋಬಾರದು...!



> ವಯೋಸಹಜ ಕಷ್ಟ ಸುಖಗಳು ಮನುಷ್ಯನಾದಿಯಾಗಿ ಸಕಲ ಪ್ರಾಣಿಪಕ್ಷಿಗಳಿಗೂ ಬರುವುದು ಸಹಜ. ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಸುಭದ್ರ ಹಾಗೂ ಸುರಕ್ಷಿತವಾದ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾನೆ ಅಷ್ಟೆ. ಮನುಷ್ಯನಿಗೆ ನಿತ್ಯ ಬದುಕಿನಲ್ಲಿ ಕೊರಗಲು ಹತ್ತು ಕಾರಣಗಳಿದ್ದರೆ, ಖುಷಿ ಪಡಲು ಇಪ್ಪತ್ತು ಕಾರಣಗಳು ಸಿಗುತ್ತವೆ. ಖುಷಿ ಪಡುವ ಕಾರಣಗಳನ್ನು ಮನಗಾಣದೆ, ಸಂತೋಷಪಡದೆ, ಬರದೇ ಇರುವವರ, ಸಿಗದೇ ಇರುವುದರ ಕುರಿತು ವೃಥಾ ಕೊರಗುತ್ತಾ ಸ್ವರ್ಗದಂತಹ ಬದುಕನ್ನು ತಾನೇ ನರಕ ಮಾಡಿಕೊಳ್ಳುತ್ತಿದ್ದಾನೆ. ಮನುಷ್ಯನಿಗೆ ಅತಿಹೆಚ್ಚು ನೋವು ಕೊಡುವ ಸಂಗತಿ ಎಂದರೆ ನಿರೀಕ್ಷೆ. ಎಷ್ಟೋ ಮಂದಿ ಸಿಗದೇ ಇರುವ ಅಮೃತಕ್ಕೋಸ್ಕರ ಹಾತೊರೆಯುತ್ತಾ ಕೈಯಲ್ಲಿರುವ ಷರಬತ್ತನ್ನು ಕುಡಿಯದೇ ಅವಿವೇಕಿಗಳಾಗಿಬಿಡುತ್ತಾರೆ. ನಿರಾಕರಿಸಿದರೂ ಬದುಕನ್ನು ನಡೆಸಬೇಕು, ಒಪ್ಪಿಕೊಂಡರೂ ಬದುಕನ್ನು ನಡೆಸಲೇ ಬೇಕು. ಪಾಲಿಗೆ ಬಂದದ್ದು ಪಂಚಾಮೃತ, ಏನಾದರೂ ಆಗಲಿ ಮಹದೇವ ಮಾಡಿದಂತಾಗಲಿ ಎಂದು ಬದುಕನ್ನು ಬಂದಂತೆ ಸ್ವೀಕರಿಸಿ ನಡೆಯುವುದು ವಿವೇಕಿಯ ಗುಣ.

ಬದುಕು ಎಂದರೆ ಅನಿರೀಕ್ಷಿತ ತಿರುವುಗಳ ನಿಲ್ಲದ ಪಯಣ. ಈ ಪಯಣ ಹೆದ್ದಾರಿಯ ಪಯಣದಂತೆ ಇರುವುದಿಲ್ಲ, ಇಲ್ಲಿ ಏರಿಳಿತಗಳು ಸರ್ವೇಸಾಮಾನ್ಯ. ಅನೇಕ ಸಂತೋಷ ತರುವ ಆಶ್ಚರ್ಯಗಳು ಎದುರಾಗುವಂತೆ ನೋವು ನೀಡುವ ಆಘಾತಗಳು ಸಹ ಎದುರಾಗುತ್ತವೆ. ಆಶ್ಚರ್ಯಕ್ಕೆ ಹಿಗ್ಗದೆ, ಆಘಾತಕ್ಕೆ ಕುಗ್ಗದೆ ಮುನ್ನಡೆಯುತ್ತಿದ್ದರೆ ಅದುವೇ ಜೀವನ. ಅನೇಕರು ಜೀವನದಲ್ಲಿ ಬದುಕು ಹೀಗಿರಬೇಕು ಎಂದು ಊಹಿಸುತ್ತಾರೆ, ಅಂದರೆ ಅಂದುಕೊಳ್ಳುತ್ತಾರೆ. ಅಂದುಕೊಳ್ಳುವುದಕ್ಕಿಂತ ಪರಿಸ್ಥಿತಿಗೆ ತಕ್ಕ ಹಾಗೆ ಹೊಂದಿಕೊಳ್ಳುವುದು ಜೀವನ. ಬಾರದ್ದನ್ನು ನೆನೆಯದೆ, ಬಂದದ್ದನ್ನು ಬಿಡದೆ, ಇದ್ದದ್ದನ್ನು ಇರುವಂತೆ ಅನುಭವಿಸಿ ಬಿಡುವುದು ಜಾಣತನ. ಎಷ್ಟೋ ಜನರಿಗೆ ಸುಖ ತಮ್ಮ ಕಾಲ ಬುಡದಲ್ಲಿಯೇ ಇದ್ದರೂ, ಅದನ್ನು ಅಲಕ್ಷ್ಯ ಮಾಡಿ ಇಲ್ಲದ ಕಷ್ಟವನ್ನು ಕೊಂಡುಕೊಂಡು ಯಾತನೆ ಅನುಭವಿಸುವ ಜಾಯಮಾನ ಹೊಂದಿರುತ್ತಾರೆ. ಅವರಿಗೆ ಕಷ್ಟ ನೆನೆದು ನೋವು ಅರಿವಿಗೆ ಬರುವಷ್ಟು ಸುಖದಲ್ಲಿನ ಸಂತೋಷ ಅರಿವಿಗೆ ಬರುವುದೇ ಇಲ್ಲ. ಈ ಸ್ವಯಂ ದುರ್ದೈವಿಗಳು ಸುಖ ತಮ್ಮ ಪಾಲಿಗೆ ಇಲ್ಲ ಎಂದು ದೇವರನ್ನು ಶಪಿಸುತ್ತಾ, ತಮ್ಮ ಪರಿಸ್ಥಿತಿಗೆ ಯಾರಾರನ್ನೋ ಹೊಣೆ ಮಾಡಿ ಅವರಿಗೆ ಹಿಡಿಶಾಪ ಹಾಕುತ್ತಾ ದಿನ ದೂಡುತ್ತಿರುತ್ತಾರೆ. ಬದುಕು ಇರುವುದು ಸವೆಸುವುದಕ್ಕಲ್ಲ ಸವಿಯುವುದಕ್ಕೆ, ಈ ಸವಿಯನ್ನು ಬಲ್ಲವನು ಬದುಕಿನ ಪ್ರತಿನಿಮಿಷವನ್ನು ಆನಂದದಿಂದ ಅನುಭವಿಸುತ್ತಾನೆ.

ಕಷ್ಟಸುಖಗಳ ಮಿಶ್ರಣವೇ ಬದುಕಿನ ಸಾರ. ಸುಖ ನಿರೀಕ್ಷಿತವಾದರೂ ಕಷ್ಟವು ಅನಿರೀಕ್ಷಿತವಾಗಿ ಬಂದೊದಗಬಹುದು. ಬಹುಪಾಲು ಜನ ಕಷ್ಟಗಳು ನಮ್ಮನ್ನು ಮಾತ್ರ ಹುಡುಕಿಕೊಂಡು ಬರುತ್ತದೆ, ಅನ್ಯರೆಲ್ಲರೂ ಕಷ್ಟಗಳಿಂದ ಮುಕ್ತಿ ಹೊಂದಿರುತ್ತಾರೆ ಎಂದು ತಪ್ಪಾಗಿ ಭಾವಿಸಿರುತ್ತಾರೆ. ಆದರೆ ಕಷ್ಟ ಎನ್ನುವುದು ಸರ್ವರ ಜೀವನದ ಭಾಗ ಎಂದು ತಿಳಿಯಬೇಕು. ಐಷಾರಾಮವೇ ಆರಾಮ ಎಂದು ಭಾವಿಸುವವರು ಅನೇಕ. ಐಷಾರಾಮಕ್ಕೆ ಸುಖ ಕೊಡುವ ಶಕ್ತಿ ಇದೆ, ಆದರೆ ನೆಮ್ಮದಿ ಕೊಡುವ ಖಾತ್ರಿಯಿಲ್ಲ. ಸ್ಪರ್ಧೆಗೆ ಬಿದ್ದವರಂತೆ ಬದುಕನ್ನು ನಡೆಸುವ ಹಠ ಅದರಲ್ಲಿ ಇರುತ್ತದೆ. ಎಲ್ಲವೂ ಇದ್ದರೂ ಏನೋ ಒಂದು ಮಿಸ್ ಆಗಿದೆ ಎಂದು ಸದಾ ಕೊರಗುವ ಪರಿಸ್ಥಿತಿಯನ್ನು ಐಷಾರಾಮ ತಂದೊಡ್ಡಿರುತ್ತದೆ. ಎಲ್ಲರಿಗೂ ಕಷ್ಟವಿರುತ್ತದೆ, ಆದರೆ ಭಿನ್ನ ಭಿನ್ನವಾದ ಕಷ್ಟಗಳು ಇರುತ್ತವೆ ಅಷ್ಟೇ. ಈ ಭೂಮಿ ಮೇಲೆ ಕಷ್ಟವನ್ನೇ ಕಾಣದ ಮನುಜ ಇಲ್ಲ. ಯಾರಾದರೂ ಇದ್ದಾರೆ ಎಂದರೆ ಆತ ಮೃತ ವ್ಯಕ್ತಿಯಾಗಿರುತ್ತಾನೆ. ಎಲ್ಲರಿಗೂ ಒಂದಲ್ಲ ಒಂದು ಕೊರತೆ ಅಥವಾ ಕೋರಿಕೆ ಇದ್ದೇ ಇರುತ್ತದೆ. ಅದು ಒಬ್ಬರಿಗೆ ಕಂಡಂತೆ ಮತ್ತೊಬ್ಬರಿಗೆ ಕಾಣುವುದಿಲ್ಲ. ಆ ಕಾರಣಕ್ಕೆ ಎಷ್ಟೋ ಜನರಿಗೆ ತಮ್ಮನ್ನು ಬಿಟ್ಟು ಬೇರೆಯವರು ಆರಾಮಾಗಿ ಇದ್ದಾರೆ ಅನಿಸುವುದು.

ಅನೇಕರಿಗೆ ಕಷ್ಟವನ್ನು ಮತ್ತೆ ಮತ್ತೆ ನೆನೆದು ನೋವನ್ನು ಉಣ್ಣುವ ಗೀಳು ಇರುತ್ತದೆ. ಕುಟುಂಬದ ಸದಸ್ಯರೆಲ್ಲರೂ ಬಹಳ ಸಂತೋಷವಾಗಿ ಒಂದು ಕೂಟದಲ್ಲಿ ಸೇರಿ ಉತ್ಸಾಹದಿಂದ, ಆನಂದದಿಂದ ಆ ರಸ ಗಳಿಗೆಯನ್ನು ಅನುಭವಿಸುತ್ತಿದ್ದರೆ, ನೋವಿನ ಗೀಳಿನ ವ್ಯಕ್ತಿ ಎಷ್ಟೋ ವರ್ಷಗಳ ಹಿಂದೆ ತೀರಿ ಹೋದ ತಾತ ಇಂದು ಇರಬೇಕಿತ್ತು ಎಂದು ಕಣ್ಣೀರು ಹಾಕಿ ಆ ಅಮೃತ ಘಳಿಗೆಯನ್ನು ವಿಷಘಳಿಗೆ ಮಾಡಿ ಸಂತೋಷಕ್ಕೆ ತಣ್ಣೀರು ಎರಚಿ ಬಿಡುತ್ತಾರೆ. ಸಂತೋಷವನ್ನು ಅದುಮಿಟ್ಟು ನಗದೇ ಸುಮ್ಮನೆ ಇರುವ ಜನ, ದುಃಖವನ್ನು ಅದುಮಿಡಲು ಶಕ್ತರಾಗಿರುವುದಿಲ್ಲ. ಎಷ್ಟೋ ಜನ ತಮಗಾದ ಸಂತೋಷವನ್ನು ತಮ್ಮ ನಗುವಿನಿಂದ ವ್ಯಕ್ತಪಡಿಸುವುದೇ ಇಲ್ಲ. ನಗು ಬಂದರೂ ಅದನ್ನು ತಡೆದುಬಿಡುತ್ತಾರೆ. ಆದರೆ ನಗೆ ಹಬ್ಬದಲ್ಲಿ ಹೋಗಿ ಇಡೀ ಕಾರ್ಯಕ್ರಮ ಪೂರ್ತಿ ನಕ್ಕು ಬರುತ್ತಾರೆ. ಹಾಸ್ಯಪ್ರಜ್ಞೆಯನ್ನು ಮೈಗೂಡಿಸಿಕೊಂಡು ನಗು ಬಂದಾಗ ನಕ್ಕು ಬಿಟ್ಟರೆ ನಗಲು ನಗೆ ಹಬ್ಬ ಕಾರ್ಯಕ್ರಮವನ್ನೇ ಕಾಯಬೇಕಿಲ್ಲ, ಬದುಕು ಒಂದು ನಗೆ ಹಬ್ಬವಾಗಬೇಕು, ನಗೆಪಾಟಲು ಆಗಬಾರದು. ಅಂದ ಹಾಗೆ ನಕ್ಕಷ್ಟು ಆರೋಗ್ಯ ವೃದ್ಧಿ ಆಗುತ್ತದೆ. ಒತ್ತಡ ಕಡಿಮೆಯಾಗುತ್ತದೆ. ವೈದ್ಯರು ನಗೆ ಕ್ಲಬ್ ಸೇರಿ ಎಂದು ಹೇಳುವ ಅಗತ್ಯವೇ ಬರುವುದಿಲ್ಲ. ಆದ್ದರಿಂದ ನಗುವಿನ ಸುಖವನ್ನು ಸುಖಾ ಸುಮ್ಮನೇ ಮಾರುವ ಅಗತ್ಯವಿಲ್ಲ. ಅದೊಂದು ಸಂಪತ್ತು, ಅದರಿಂದ ಮತ್ತಷ್ಟು ಸಂಪತ್ತನ್ನು ಗಳಿಸಬಹುದು.

ಕೆಲವರು ಕಷ್ಟ ಎಂಬುದು ಜೀವನಪರ್ಯಂತ ನಮ್ಮೊಂದಿಗೆ ಇರುವ ಅಂಟುಜಾಡ್ಯ ಎಂದು ಭಾವಿಸಿರುತ್ತಾರೆ. ಎಷ್ಟೋ ಬಾರಿ ಕಷ್ಟ ಇವರಿಂದ ದೂರ ಹೋದರೂ ಇವರು ಕಷ್ಟವನ್ನು ಮತ್ತೆ ಹತ್ತಿರ ಮಾಡಿಕೊಂಡು ನೋವುಣ್ಣುವ ಮನೋಭಾವ ಹೊಂದಿರುತ್ತಾರೆ. ಎಲ್ಲದಕ್ಕೂ ಒಂದು ಕೊನೆ ಇರುವ ರೀತಿ ಕಷ್ಟಕ್ಕೂ ಒಂದು ಕೊನೆ ಇದೆ. ಕೊನೆ ಕಂಡುಕೊಳ್ಳು ಪ್ರಯತ್ನ ಹಾಗೂ ಮನಸ್ಥಿತಿ ಮನುಷ್ಯನಲ್ಲಿ ಇರಬೇಕು ಅಷ್ಟೇ. ಸುಮ್ಮನೆ ಸುಖವನ್ನು ಮಾರುವವರ ಕುರಿತು ಒಂದು ಕಥೆ ಹೀಗಿದೆ. ಒಮ್ಮೆ ತಾಯಿಯೊಬ್ಬಳು ತನ್ನ ಮಗುವಿನೊಂದಿಗೆ ಸಮುದ್ರ ತೀರದಲ್ಲಿ ಆಟವಾಡುತ್ತಿರುತ್ತಾಳೆ. ಸ್ವಲ್ಪ ಹೊತ್ತಿನ ನಂತರ ಒಂದು ದೊಡ್ಡ ಅಲೆ ಬಂದು ಮಗುವನ್ನು ಸಮುದ್ರದೊಳಕ್ಕೆ ಸೆಳೆದು ಒಯ್ಯುತ್ತದೆ. ತಾಯಿಯು ತನ್ನ ತಾಯಿಯನ್ನು ಬದುಕಿಸುವಂತೆ ಬೊಬ್ಬೆ ಇಡುತ್ತಾಳೆ. ತಾಯಿಯ ಆಕ್ರಂದನ ನೋಡಿದ ಇಬ್ಬರು ಯುವಕರು ತಮ್ಮ ಪ್ರಾಣದ ಹಂಗನ್ನು ತೊರೆದು ಸಮುದ್ರಕ್ಕೆ ಜಿಗಿದು ಮಗುವನ್ನು ಹುಡುಕಿ ಕಷ್ಟಪಟ್ಟು ದಡಕ್ಕೆ ತರುತ್ತಾರೆ. ಮಗುವು ಜೀವಂತವಾಗಿ ಸಿಕ್ಕಿತಲ್ಲ ಎಂದು ಖುಷಿ ಪಡುವ ಬದಲು ಆ ತಾಯಿ ಮತ್ತೆ ಚೀರಾಟ ಮಾಡುತ್ತಾಳೆ, 'ನನ್ನ ಮಗುವಿನ ಚಪ್ಪಲಿಗಳು ಸಮುದ್ರದಲ್ಲಿ ಕೊಚ್ಚಿ ಹೋಯಿತು' ಎಂದು. ಈಗ ತಿಳಿಯಿರಿ ಈ ತಾಯಿ ತನ್ನ ಕೈಯಲ್ಲಿನ ಸುಖವನ್ನು ಹೇಗೆ ಸಣ್ಣ ವಸ್ತುವಿನ ಕಾರಣಕ್ಕೆ ಮಾರಿಬಿಟ್ಟಳು ಎಂದು. ಈ ರೀತಿಯ ಜನ ಅನೇಕರು ಇದ್ದಾರೆ. ಕೈಯಲ್ಲಿ ವಜ್ರವೇ ಇದ್ದರೂ ಇದ್ದಿಲಿಗಾಗಿ ಪರಿತಪಿಸುತ್ತಾ ಕಷ್ಟವನ್ನು ಕೊಂಡುಕೊಳ್ಳುತ್ತಲೇ ಇರುತ್ತಾರೆ, ನೋವು ಉಣ್ಣುತ್ತಲೇ ಇರುತ್ತಾರೆ.

ಸುಖ ಅನುಭವಿಸುವ ಯೋಗ್ಯತೆ ಇದ್ದರೂ ಅನೇಕರಿಗೆ ಯೋಗ ಇರುವುದಿಲ್ಲ. ಮೂರು ತಲೆ ಮಾರು ಕುಳಿತು ತಿನ್ನುವಂತೆ ದುಡಿದು ಗುಡ್ಡೆ ಹಾಕಿದ್ದರೂ ಸರಿಯಾದ ಸಮಯಕ್ಕೆ ಊಟ ತಿಂಡಿ ಮಾಡುವ, ನಿದ್ರಿಸುವ ಯೋಗ ಇರುವುದಿಲ್ಲ. ಊಟ, ತಿಂಡಿ, ನಿದ್ರೆ ಇವುಗಳು ಸುಖದ ಪರಾಕಾಷ್ಠೆಗಳೆ. ಮನುಷ್ಯ ಹಸಿದಾಗ ಅನ್ನ ತಿನ್ನುವನೇ ಹೊರತು, ತನ್ನಲ್ಲಿರುವ ಚಿನ್ನ ತಿನ್ನಲು ಸಾಧ್ಯವಿಲ್ಲ. ಎಷ್ಟೋ ಮಂದಿ ರಾಜಕಾರಣಿಗಳು, ಉದ್ಯಮಿಗಳು ಸಿರಿವಂತಿಕೆ ಸುಪ್ಪತ್ತಿಗೆಯಲ್ಲಿ ಕುಳಿತಿದ್ದರೂ, ಮಧ್ಯಮ ವರ್ಗದ ಒಬ್ಬ ನೌಕರ ನನ್ನ ಕುಟುಂಬದೊಂದಿಗೆ ನಿತ್ಯವೂ ಊಟ, ತಿಂಡಿ, ವಿಹಾರ ಮಾಡುವ ಭಾಗ್ಯ ಹೊಂದಿರುವುದನ್ನು ಅವರುಗಳು ಹೊಂದಿರುವುದಿಲ್ಲ. ಹಣ, ಖ್ಯಾತಿಯ ಹಿಂದೆ ಓಡಿ ಹೋಗುವವರಿಗೆ ವಯಸ್ಸಾದ ಮೇಲೆ ಏನೆಲ್ಲಾ ಬೆಲೆ ಕಟ್ಟಲಾಗದ ಕ್ಷಣಗಳನ್ನು ಕಳೆದುಕೊಂಡೆವಲ್ಲಾ ಎನಿಸತ್ತದೆ. ಆದರೆ ಅಷ್ಟೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ. ಆದ್ದರಿಂದ ಕುಟುಂಬದೊಂದಿಗೆ ಸಮಯ ಕಳೆಯಲು ಅವಕಾಶವಿದ್ದವರು, ಆರೋಗ್ಯವಿದ್ದವರು, ಕಷ್ಟಸುಖ ವಿಚಾರಿಸಲು ಬಂಧುಬಳಗ–ಸ್ನೇಹಿತರು ಇರುವವರು ಇವೆಲ್ಲವೂ ದೊಡ್ಡ ಸೌಭಾಗ್ಯ ಎಂದು ನೆನೆದು ಖುಷಿ ಪಡಬೇಕು. ಲಗೇಕಿ ಕಡಿಮೆ ಇದ್ದಷ್ಟು ಪ್ರಯಾಣ ಸುಖಕರ ಎನ್ನುವಂತೆ ಕಡಿಮೆ ಸಂಪತ್ತಿದ್ದಷ್ಟು ಜೀವನ ಹಿತಕರ ಎಂದು ಭಾವಿಸಿ ಸಂತೋಷದಿಂದ ಬದುಕು ನಡೆಸಬೇಕು.

ಹಿಂದಿನ ನೋವನ್ನು ನೆನೆದು ನಿತ್ಯ ಸಾಯುವ ಬದಲು, ಇಂದಿನ ನಲಿವನ್ನು ಕಂಡು ನಿತ್ಯ ಲವಲವಿಕೆಯಿಂದ ಬದುಕುವುದು ಲೇಸು. ಸಾವು ಎಂದರೆ ದೇಹ ಉಸಿರನ್ನು ನಿಲ್ಲಿಸಿದಾಗ ಎಂದು ಎಲ್ಲರ ಭಾವನೆ, ಆದರೆ ಎಷ್ಟೋ ಜನ ಬದುಕಿದ್ದಾಗಲೇ ಸತ್ತು ಹೋಗಿರುತ್ತಾರೆ. ಅವರ ಬದುಕಿನಲ್ಲಿ ಜೀವಂತಿಕೆಯೇ ಇರುವುದಿಲ್ಲ. ಅವರುಗಳೇ ಯಾವಾಗಲೂ ಋಣಾತ್ಮಕವಾಗಿ ಮಾತನಾಡುತ್ತಿರುತ್ತಾರೆ. ಇಲ್ಲದ ವೇದಾಂತಗಳನ್ನು ಸುಖದಿಂದ, ನೆಮ್ಮದಿಯಿಂದ ಇರುವವರಿಗೆ ಬೋಧಿಸುತ್ತಿರುತ್ತಾರೆ. ಸುಖವಾಗಿರುವವರನ್ನು ಕಂಡು ಈರ್ಷೆ ಪಟ್ಟು ಅವರ ಸುಖಕ್ಕೆ ಪೆಟ್ಟು ನೀಡುವ ಮಾತುಗಳನ್ನು ಆಡುತ್ತಿರುತ್ತಾರೆ. ಒಂದು ಕುಟುಂಬ ಅನ್ಯೋನ್ಯವಾಗಿ ಸಂತೋಷವಾಗಿ ಇದ್ದರೆ, ಅದನ್ನು ಸಹಿಸದ ವಿಘ್ನ ಸಂತೋಷಿಗಳು ಆ ಕುಟುಂಬದ ಹಾಲಿನಂತಹ ಆನಂದಕ್ಕೆ ಹುಳಿ ಹಿಂಡಿಬಿಟ್ಟು ತಮ್ಮ ಸಾಲಿಗೆ ಮತ್ತೊಬ್ಬರು ಸೇರಿದರು ಎಂದು ಸುಖಿಸುತ್ತಾರೆ. ಇದೊಂದು ವಿಕೃತಾನಂತವಲ್ಲದೆ ಮತ್ತೇನು ಅಲ್ಲ.

ಬದುಕು ನರಕ, ಸಾವೇ ಸುಖ ಎಂದು ಆತ್ಮಹತ್ಯೆಗೆ ಶರಣಾಗುವವರಿಗೆ ಕಠಿಣ ಪರಿಸ್ಥಿತಿಗಿಂತ ಅತಿಯಾಗಿ ಬಾಧಿಸುವುದು ಅವರ ಹಾಳಾದ ಮನಸ್ಥಿತಿ. ಬರೀ ದೇಹವನ್ನು ಸುಸ್ಥಿತಿಯಲ್ಲಿ ಇರಿಸಿಕೊಂಡರೆ ಸಾಲದು, ಮನಸ್ಸನ್ನು ಸಹ ಸುಸ್ಥಿತಿಯಲ್ಲಿ ಇರಿಸಿಕೊಳ್ಳಬೇಕಾದ ಅಗತ್ಯವಿದೆ. ಕಷ್ಟ ಎದುರಾದಾಗ ಚಿಂತನೆ ನಡೆಸಿ ಮುಂದಡಿ ಇಡಬೇಕೇ ವಿನಃ ಚಿಂತೆ ಎಂಬ ಚಿತೆಯಲ್ಲಿ ಬೇಯುತ್ತಾ ಬದುಕಬಾರದು.

ವಯೋಸಹಜ ಕಷ್ಟ ಸುಖಗಳು ಮನುಷ್ಯನಾದಿಯಾಗಿ ಸಕಲ ಪ್ರಾಣಿಪಕ್ಷಿಗಳಿಗೂ ಬರುವುದು ಸಹಜ. ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಸುಭದ್ರ ಹಾಗೂ ಸುರಕ್ಷಿತವಾದ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೂ ಒಮ್ಮೆ ಅಗತ್ಯವಿದ್ದಾಗಲೇ ಹತ್ತಿರದವರು ಸಹಾಯಕ್ಕೆ ಬರುವುದಿಲ್ಲ. ಆಗ ತಾನು ಪಾಪಿ ಎಂದು ಎಷ್ಟೋ ಜನ ಶಪಿಸುವುದು ಉಂಟು. ಆದರೆ ಜಗತ್ತಿನಲ್ಲಿ ಅವರಿಗಿಂತಲೂ ಕಡುಕಷ್ಟವನ್ನು ಕಂಡವರು ಇದ್ದಾರೆ. ಮನುಷ್ಯನಿಗೆ ನಿತ್ಯ ಬದುಕಿನಲ್ಲಿ ಕೊರಗಲು ಹತ್ತು ಕಾರಣಗಳಿದ್ದರೆ, ಖುಷಿ ಪಡಲು ಇಪ್ಪತ್ತು ಕಾರಣಗಳು ಇರುತ್ತವೆ. ಖುಷಿ ಪಡುವ ಕಾರಣಗಳನ್ನು ಮನಗಾಣದೆ, ಸಂತೋಷ ಪಡದೆ ಬರದೇ ಇರುವವರ, ಬಾರದೇ ಇರುವುದರ ಕುರಿತು ವೃಥಾ ಕೊರಗುತ್ತಾ ಸ್ವರ್ಗದಂತಹ ಬದುಕನ್ನು ತಾನೇ ನರಕ ಮಾಡಿಕೊಳ್ಳುತ್ತಿದ್ದಾನೆ. ಮನುಷ್ಯನಿಗೆ ಅತಿಹೆಚ್ಚು ನೋವು ಕೊಡುವ ಸಂಗತಿ ಎಂದರೆ ನಿರೀಕ್ಷೆ. ಎಷ್ಟೋ ಮಂದಿ ಸಿಗದೇ ಇರುವ ಅಮೃತಕ್ಕೋಸ್ಕರ ಹಾತೊರೆಯುತ್ತಾ ಕೈಯಲ್ಲಿರುವ ಷರಬತ್ತನ್ನು ಕುಡಿಯದೇ ಅವಿವೇಕಿಗಳಾಗಿ ಬಿಡುತ್ತಾರೆ. ನಿರಾಕರಿಸಿದರೂ ಬದುಕನ್ನು ನಡೆಸಬೇಕು, ಒಪ್ಪಿಕೊಂಡರೂ ಬದುಕನ್ನು ನಡೆಸಲೇಬೇಕು. ಪಾಲಿಗೆ ಬಂದದ್ದು ಪಂಚಾಮೃತ, ಏನಾದರೂ ಆಗಲಿ ಮಹದೇವ ಮಾಡಿದಂತಾಗಲಿ ಎಂದು ಬದುಕನ್ನು ಬಂದಂತೆ ಸ್ವೀಕರಿಸಿ ನಡೆಯುವುದು ವಿವೇಕಿಗ ಗುಣ. ಏನಂತೀರಿ?

**ಪದ ತಾಂಬೂಲ :**

ಅನೇಕ ಸಮಸ್ಯೆಗಳಿಗೆ ಹಣ ಪರಿಹಾರ ಎಂಬುದು ಹಲವರ ಅಂಬೋಣ,
ಹಣವಿದ್ದವರಿಗೂ ಅನೇಕ ಸಮಸ್ಯೆಗಳಿವೆ ಅದಕ್ಕೇನನ್ನೋಣ !

# ಆರೋಗ್ಯ ಸೇವೆಗೆ ಕಾಯಕಲ್ಪ ಕುರಿತು ಎಂಜಿಪಿಯಲ್ಲಿ ಗಂಭೀರ ಚರ್ಚೆ

## ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆಗೆ ಹೊಸ ಯೋಜನೆ ಜಾರಿ ಅಗತ್ಯ

ಮೈಸೂರು, ಸೆ.10 (ಎಸ್‌ಪಿಎನ್)– ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ..., ಸಾರ್ವತ್ರಿಕವಾಗಿ ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ನೀಡುವ ಕುರಿತು ರಾಜ್ಯ ಸರ್ಕಾರ ನೂತನ ಯೋಜನೆ ರೂಪಿಸುವ ಕುರಿತು.., ಆರೋಗ್ಯ ಇಲಾಖೆಗೆ ಕಾಯಕಲ್ಪ ನೀಡುವ ಕುರಿತು ಸರ್ಕಾರದ ಮೇಲೆ ಒತ್ತಡ ತರಬೇಕು ಎಂಬ ವಿಷಯ ಸೇರಿದಂತೆ ಇತರೆ ಆರೋಗ್ಯ ಸೇವೆಗಳ ಸುಧಾರಣೆ ಕುರಿತು ಮೈಸೂರು ಗ್ರಾಹಕ ಪರಿಷತ್‌ನಲ್ಲಿ ಭಾನುವಾರ ಬಿಸಿಬಿಸಿ ಚರ್ಚೆ ನಡೆಯಿತು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ಮೈಗ್ರಾಪ ಮಾಸಿಕ ಸಾಮಾನ್ಯ ಸಭೆಯಲ್ಲಿ ಹಿರಿಯ ವೈದ್ಯರಾದ ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್, ಡಾ.ಜಯರಾಮ್, ಡಾ.ನರಸಿಂಹನ್, ಕಾಮಾಕ್ಷಿ ಆಸ್ಪತ್ರೆಯ ಡಾ.ಕಾಮತ್ ಅವರ ನೇತೃತ್ವದಲ್ಲಿ ನಡೆದ ಸಾರ್ವತ್ರಿಕ ಆರೋಗ್ಯ ಸೇವೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟ ಚಿಕಿತ್ಸೆ ಕುರಿತಾದ ವಿಷಯದ ಕುರಿತು ಮಾತನಾಡಿದರು.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ 1980ರವರೆಗೂ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯುತ್ತಿತ್ತು. ಕಾರಣ ಆಗಿನ ಜನಸಂಖ್ಯೆ ಅನುಗುಣವಾಗಿ ಸಿಬ್ಬಂದಿ, ನುರಿತ ವೈದ್ಯರನ್ನು ಸರ್ಕಾರ ನೇಮಿಸಿತ್ತು. ಅಲ್ಲದೆ, ಇತರೆ ಆಸ್ಪತ್ರೆ ಸಿಬ್ಬಂದಿ ಮೇಲೆ ಕೆ.ಆರ್. ಆಡಳಿತ ಮಂಡಳಿ ನಿಯಂತ್ರಣದಲ್ಲಿತ್ತು. ಅದಕ್ಕಾಗಿ ಉತ್ತಮ ಸೇವೆ ನೀಡಲು ಸಾಧ್ಯವಾಗಿತ್ತು ಎಂದು ವೈದ್ಯರೊಬ್ಬರು ಮೈಗ್ರಾಪ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.



ಮೈಗ್ರಾಪ ಮಾಸಿಕ ಸಾಮಾನ್ಯ ಸಭೆಯಲ್ಲಿ ತಜ್ಞ ವೈದ್ಯರೊಂದಿಗೆ ಮೈಗ್ರಾಪ ಸದಸ್ಯರು ಚರ್ಚೆ ನಡೆಸಿದರು.

**ಕೆ.ಆರ್.ಆಸ್ಪತ್ರೆಯಲ್ಲಿ ನುರಿತ ಸಿಬ್ಬಂದಿಗಳ ಕೊರತೆ:** ಪ್ರಸ್ತುತ ಸಂದರ್ಭದಲ್ಲಿ ಮೈಸೂರು ಸೇರಿದಂತೆ ಇತರೆ ಜಿಲ್ಲೆಗಳಿಂದ ಬರುವ ರೋಗಿಗಳನ್ನು ಆಯಾಯ ತಾಲೂಕು ಮತ್ತು ಜಿಲ್ಲೆಗಳಲ್ಲಿ ಉತ್ತಮ ಚಿಕಿತ್ಸೆ ನೀಡಿದರೆ ಸಾಕು, ಕೆ.ಆರ್.ಆಸ್ಪತ್ರೆಯಲ್ಲಿ ಮೇಲೆ ಅವಲಂಬನೆಯಾಗಿರುವ ಅನಗತ್ಯ ಒತ್ತಡ ಕಡಿಮೆ ಮಾಡಬಹುದು. ಪ್ರಸ್ತುತ ಕೆ.ಆರ್. ಆಸ್ಪತ್ರೆಯಲ್ಲಿ ನುರಿತ ವೈದ್ಯರ ಕೊರತೆ, ಇತರೆ ಸಿಬ್ಬಂದಿಗಳ ಕೊರತೆ ಎದುರಾಗಿದೆ. ಅಲ್ಲದೆ, ಹಾಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಆಡಳಿತ ಮಂಡಳಿಯ ಹಿಡಿತ ತಪ್ಪಿರುವುದೇ ಗುಣಮಟ್ಟ ಸೇವೆ ರೋಗಿಗಳಿಗೆ ಲಭ್ಯವಾಗುತ್ತಿಲ್ಲ ಎಂದು ವೈದ್ಯರೊಬ್ಬರು ಸದಸ್ಯರೊಬ್ಬರಿಗೆ ಉತ್ತರಿಸಿದರು.

**ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆಗೆ ಆಗ್ರಹ:** ಇತ್ತೀಚಿನ ದಿನಗಳಲ್ಲಿ ಜಗತ್ತು ಬದಲಾಗಿ, ಆಧುನಿಕತೆಯತ್ತ ಬದಲಾಗುತ್ತಿದೆ. ಇದು ಹಿರಿಯ ನಾಗರಿಕ ಜೀವನ ಶೈಲಿ ಮೇಲೂ ಪರಿಣಾಮ ಬೀರುತ್ತಿದೆ. ಅಸಹಾಯಕ ಸ್ಥಿತಿಯಲ್ಲಿರುವ ಹಿರಿಯ ನಾಗರಿಕ ಆರೋಗ್ಯ ಸೇವೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಗಮನಹರಿಸುವ ಅಗತ್ಯತೆ ಇದ್ದು, ಇದಕ್ಕಾಗಿ ಹೊಸ ಪಾಲಿಸಿ ಜಾರಿಗೆ ತರುವಂತೆ ಆಗ್ರಹಿಸಿ ಐಎಂಎ(ಇಂಡಿಯನ್ ಮೆಡಿಕಲ್ ಅಸೋಸಿಯೇಷನ್) ಮೂಲಕ ಪತ್ರ ಬರೆಯಲಾಗುವುದು. ಇದರ ಜೊತೆಗೆ ಸಾರ್ವಜನಿಕರ ಪರವಾಗಿ ಮೈಗ್ರಾಪ ಸದಸ್ಯರೂ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಬೇಕು ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

**ಭ್ರಷ್ಟಾಚಾರ ಮಿತಿ ಮೀರಿದೆ:** ಆರೋಗ್ಯ ಸೇವೆ ಎಂಬುದು ಎಲ್ಲಾ ವಯೋಮಾನದವರೆಗೂ ಅಗತ್ಯವಿದೆ. ಇದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾವಿರಾರು ಕೋಟಿ ವ್ಯಯಿಸುತ್ತಿದೆ. ಇದಕ್ಕಾಗಿ ಹತ್ತಾರು ಹೊಸಹೊಸ ಪಾಲಿಸಿಗಳನ್ನು ಜನರಿಗೆ ಪರಿಚಯಿಸಿದೆ. ಆದರೆ, ಇದನ್ನು ಅನುಷ್ಠಾನಗೊಳಿಸಬೇಕಾದ ಇಲಾಖೆಯಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮಿತಿಮೀರಿರುವುದರಿಂದ ಸಾರ್ವಜನಿಕವಾಗಿ ಚಿಕಿತ್ಸಾ ಗುಣಮಟ್ಟ ಕಡಿಮೆಯಾಗುತ್ತಿದೆ. ಅಲ್ಲದೆ ವೈದ್ಯಕೀಯ ಕೋರ್ಸ್ ಅಧ್ಯಯನ ನಡೆಸಲು ಕೋಟಿ ಹಣ ವ್ಯಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಮಾನವೀಯತೆ ರೂಢಿಸಿಕೊಂಡು ಈಗಿನ ವೈದ್ಯಕೀಯ ವಿದ್ಯಾರ್ಥಿಗಳು ಹೇಗೆ ಕೆಲಸ ಮಾಡುತ್ತಾರೆ ಎಂದು ಡಾ.ಚಂದ್ರಶೇಖರ್ ಸದಸ್ಯರನ್ನೇ ಪ್ರಶ್ನಿಸಿದರು.

ಆರೋಗ್ಯ ಕ್ಷೇತ್ರದಲ್ಲಿ ಉಚಿತ ಯೋಜನೆಗಳಿಗಿಂತ ಗುಣಮಟ್ಟದ ಉಚಿತ ಆರೋಗ್ಯ ಸೇವೆಯನ್ನು ಪ್ರತಿ ಮನೆಗೂ ತಲುಪಿಸಬೇಕು. ಅದರಲ್ಲೂ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ಸೇವೆ ನೀಡುವ ಯೋಜನೆ ತುರ್ತಾಗಿ ಬೇಕಾಗಿದೆ. ಈ ಕುರಿತು ಸಾರ್ವತ್ರಿಕವಾಗಿ ಜನರು ಒತ್ತಾಯಿಸಬೇಕು ಎಂದ ಅವರು, ಗುಣಮಟ್ಟದ ಸರ್ಕಾರಿ ಸೇವೆಯನ್ನು ಸಾರ್ವಜನಿಕರು ಪಡೆಯಬೇಕಾದರೆ, ಉತ್ತಮ ಸರ್ಕಾರ ಆಡಳಿತಕ್ಕೆ ತರಬೇಕು. ಅದರಲ್ಲೂ ಆರೋಗ್ಯ ಇಲಾಖೆ ವಹಿಸುವ ಜನಪ್ರತಿನಿಧಿಗಳು ಸಾಮಾಜಿಕ ಸ್ಥಿತಿ–ಗತಿಗಳ ಬಗ್ಗೆ ಅರಿವು ಹೊಂದಿರುವವರಾಗಿರಬೇಕು ಎಂದು ಸಲಹೆ ನೀಡಿದರು. ಈ ವೇಳೆ ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣ, ಬಾಮಿ ವಿ. ಶಣೈ, ಶೋಭಾ ಸಾಂಬಶಿವನ್ ಸೇರಿದಂತೆ ಇತರರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಸೋಮವಾರ 2023

ಸಂಪುಟ: 44 | ಸಂಚಿಕೆ: 147 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಜಿ–20 ಶೃಂಗಸಭೆಗೆ ತೆರೆ: ಭದ್ರತಾ ಮಂಡಳಿ ಕಾಯಂ ಸ್ಥಾನಕ್ಕೆ ಆಗ್ರಹ




ನವದೆಹಲಿ,ಸೆ.10–ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆ, ಜಾಗತಿಕ ಮತ್ತು ಎಲ್ಲ ಜಾಗತಿಕ ಸಂಸ್ಥೆಗಳ ಸುಧಾರಣೆಗೆ ಬಲವಾದ ಸಂದೇಶ ರವಾನಿಸಿರುವ ಪ್ರಧಾನಿ ನರೇಂದ್ರ ಮೋದಿ, ಈ ಸಂಸ್ಥೆಗಳು ಜಗತ್ತಿನ ಹೊಸ ವಾಸ್ತವವನ್ನು ಪ್ರತಿಬಿಂಬಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ. ಈ ಮೂಲಕ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ದೊರೆಯಬೇಕು ಎಂಬ ಆಗ್ರಹವನ್ನು ಭಾರತವು ಪರೋಕ್ಷವಾಗಿ ಪುನರುಚ್ಚರಿಸಿದೆ.

ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಮಾನವ ಕೇಂದ್ರಿತ ನಿರ್ವಹಣೆಗಾಗಿ ರೂಪುರೇಷೆ ತಯಾರಿಸಲು ಅಂತರ ಸರ್ಕಾರಿ ಒಕ್ಕೂಟ ರಚಿಸಲು ಮೋದಿ ಸಲಹೆ ನೀಡಿದ್ದಾರೆ. ಸಮಯದೊಂದಿಗೆ ಬದಲಾಗದವರು ಪ್ರಸ್ತುತತೆ ಕಳೆದುಕೊಳ್ಳುತ್ತಾರೆ ಎಂಬುದು ನೈಸರ್ಗಿಕ ನಿಯಮ ಎಂದು ಅವರು ಎಚ್ಚರಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಎರಡು ದಿನ ನಡೆದ 18ನೇ ಜಿ–20 ಶೃಂಗಸಭೆಯು ●6ನೇ ಪುಟಕ್ಕೆ

## ವಿಶ್ವಕ್ಕೆ ಭಾರತದ ಶಾಂತಿ ಪಾಠ: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಪ್ರಶಂಸೆ



**ನವದೆಹಲಿ:** ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮುಂದುವರಿಸಿರುವ ಬೆನ್ನಲ್ಲೇ ಶಾಂತಿ ಮತ್ತು ಏಕತೆಯ ಮಹತ್ವ ಕುರಿತು ಜಿ–20 ಅಧ್ಯಕ್ಷತೆ ಮೂಲಕ ಭಾರತವು ವಿಶ್ವಕ್ಕೆ ಸಂದೇಶ ನೀಡಿದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಸಭೆಯ ಬಳಿಕ ಮಾಧ್ಯಮಗಳಿಗೆ ವಿವರಣೆ ನೀಡಿದ ಮ್ಯಾಕ್ರನ್, ದ್ವಿಪಕ್ಷೀಯ ಸಂಬಂಧದ ಹೊರತಾಗಿಯೂ ಭಾರತ ಮತ್ತು ಫ್ರಾನ್ಸ್ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಒಟ್ಟಾಗಿ ಕಾರ್ಯತಂತ್ರ ರೂಪಿಸಲಿವೆ ಎಂದರು.

ಉಭಯ ದೇಶಗಳ ರಕ್ಷಣೆ ಒಪ್ಪಂದ ಕುರಿತು ನಿರ್ದಿಷ್ಟ ವಿವರ ನೀಡಿದ ಅವರು, ಮುಂದಿನ ವರ್ಷಗಳಲ್ಲಿ ಮತ್ತಷ್ಟು ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದರು. ಉಕ್ರೇನ್ ಮೇಲೆ ರಷ್ಯಾ ನಡೆಸಿದ ದಾಳಿಯನ್ನು ಜಿ–20 ಗುಂಪಿನ ಬಹುಪಾಲು ರಾಷ್ಟ್ರಗಳು ಖಂಡಿಸಿವೆ. ಅಲ್ಲದೆ, ಈ ಶೃಂಗಸಭೆಯು ರಾಜಕೀಯ ವಿಷಯ ಕುರಿತು ಚರ್ಚಿಸುವ ವೇದಿಕೆಯಲ್ಲ. ಯುದ್ಧ ಸಂಘರ್ಷ ವಿಷಯಕ್ಕಷ್ಟೇ ಸೀಮಿತಗೊಳ್ಳಲು ಆಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಬ್ರೆಜಿಲ್‌ಗೆ 2024ರ ಶೃಂಗಸಭೆ ಅಧ್ಯಕ್ಷತೆ ಜವಾಬ್ದಾರಿ: ಅಧ್ಯಕ್ಷರಿಗೆ ಬ್ಯಾಟನ್ ಹಸ್ತಾಂತರ



**ನವದೆಹಲಿ:** 2024ರ ಜಿ–20 ಶೃಂಗಸಭೆಯ ಅಧ್ಯಕ್ಷತೆಯನ್ನು ಬ್ರೆಜಿಲ್ ದೇಶ ವಹಿಸಿಕೊಂಡಿದೆ. ನವದೆಹಲಿಯಲ್ಲಿ ನಡೆಯುತ್ತಿರುವ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ಜಿ–20 ಶೃಂಗಸಭೆಯ ಅಧ್ಯಕ್ಷತೆ ಜವಾಬ್ದಾರಿಯನ್ನು ಬ್ರೆಜಿಲ್ ದೇಶದ ಅಧ್ಯಕ್ಷರಿಗೆ ಹಸ್ತಾಂತರಿಸಿದ್ದಾರೆ. ●6ನೇ ಪುಟಕ್ಕೆ

## ಬೆಂಗಳೂರಿನಲ್ಲಿ ಜೆಡಿಎಸ್ ಕಾರ್ಯಕರ್ತರ ಸಮಾವೇಶ

# ಪಕ್ಷದ ಉಳಿವಿಗಾಗಿ ಬಿಜೆಪಿ ಜೊತೆ ಮೈತ್ರಿ

- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಪ್ರಕಟ
- ಸೀಟು ಹಂಚಿಕೆ ಬಗ್ಗೆ ಬಿಜೆಪಿಯ ನಾಯಕರೊಂದಿಗೆ ಕುಮಾರಸ್ವಾಮಿ ಚರ್ಚೆ
- ಪಕ್ಷಕ್ಕಾಗಿ ವ್ಹೀಲ್‌ಚೇರ್‌ನಲ್ಲಿ ಹೋಗಿ ಪ್ರಚಾರ ಮಾಡುತ್ತೇನೆ
- ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಮತ್ತೆ ಗೆದ್ದು ಬರಲಿದೆ

**ಬೆಂಗಳೂರು,ಸೆ.10–ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗಿನ ಮೈತ್ರಿ ಕುರಿತು ಜೆಡಿಎಸ್ ವರಿಷ್ಠ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಖಚಿತಪಡಿಸಿದ್ದು, ಸೀಟು ಹಂಚಿಕೆ ಕುರಿತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ಹೇಳಿದರು.**

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ತಾವು 40 ವರ್ಷಗಳಿಂದ ಪಕ್ಷಕ್ಕಾಗಿ ಹೋರಾಟ ನಡೆಸಿಕೊಂಡು ಬಂದಿದ್ದು, ಈ ಪ್ರಾದೇಶಿಕ ಪಕ್ಷವನ್ನು ಉಳಿಸಿಕೊಳ್ಳುವ ಸಲುವಾಗಿ ಬಿಜೆಪಿಯೊಂದಿಗಿನ ಮೈತ್ರಿ ಅನಿವಾರ್ಯ ಎಂದರು. ನಮಗೆ ಎಷ್ಟು ಸೀಟು ಸಿಗುತ್ತದೋ ಏನೋ ಗೊತ್ತಿಲ್ಲ. ಆದರೆ ತಮಗೆ ವ್ಹೀಲ್‌ಚೇರ್‌ನಲ್ಲಿ ಹೋಗುವ ಶಕ್ತಿ ಇದ್ದು, ರಾಜ್ಯಾದ್ಯಂತ ಸಂಚರಿಸಿ ವ್ಹೀಲ್‌ಚೇರ್‌ನಲ್ಲಿ ಕುಳಿತು ಪಕ್ಷದ ಉಳಿವಿಗಾಗಿ ಹೋರಾಟ ನಡೆಸುವುದಾಗಿ ಅವರು ಹೇಳಿದರು.

ಬಿಜೆಪಿಯೊಂದಿಗಿನ ಮೈತ್ರಿ ವಿಚಾರ ಕುರಿತು ಕದ್ದು–ಮುಚ್ಚಿ ಚಟುವಟಿಕೆ ನಡೆಸಿಲ್ಲ ಎಂದ ಅವರು, ದೆಹಲಿಯಲ್ಲಿ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತುಕತೆ ನಡೆಸಿರುವುದಾಗಿ ಹೇಳಿದರು. ಮಾತುಕತೆ ವೇಳೆ ನಾವು ಯಾವ ಸೀಟನ್ನೂ ಕೇಳಿಲ್ಲ. ಹಾಸನ, ಮಂಡ್ಯ, ರಾಮನಗರ, ಕೋಲಾರ, ತುಮಕೂರಿನಲ್ಲಿ ಬಿಜೆಪಿಗೆ ಓಟ್ ಇಲ್ಲವೇ?



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಮಾವೇಶವನ್ನು ಜೆಡಿಎಸ್ ವರಿಷ್ಠರೂ ಆದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಉದ್ಘಾಟಿಸಿದರು. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಸಿ.ಎಂ.ಇಬ್ರಾಹಿಂ, ಜಿ.ಟಿ.ದೇವೇಗೌಡ, ಸಿ.ಎಸ್.ಪುಟ್ಟರಾಜು ಇತರರಿದ್ದಾರೆ.

> “ಮಮತಾ ಬ್ಯಾನರ್ಜಿ ವಿರುದ್ಧ ಕಾಂಗ್ರೆಸ್, ಕಮ್ಯುನಿಸ್ಟ್ ಒಟ್ಟಾಗಿ ಹೋರಾಟ ಮಾಡುತ್ತಿವೆ. ಇದಕ್ಕೆ ಯಾವ ನೀತಿ ಇದೆ. ಕರುಣಾನಿಧಿ ಮನೆಗೆ ನೀವು ಹೋಗುತ್ತೀರಿ. ಇದ್ಯಾವ ರಾಜಕಾರಣ. ಲೋಕಸಭೆಯಲ್ಲಿ ಮಹಿಳಾ ಮೀಸಲು ಬಿಲ್ ತಂದಿದ್ದೆ. ಅದರ ಪ್ರಯೋಜನ ಪಡೆಯುತ್ತಿರುವುದು ಕಾಂಗ್ರೆಸ್ ಹಾಗೂ ಬಿಜೆಪಿ. ಈ ಚುನಾವಣೆಯಲ್ಲಿ ಜೆಡಿಎಸ್ ಉಳಿಯುತ್ತದೆ. ಕುಮಾರಸ್ವಾಮಿ ನೇತೃತ್ವದ ಪಕ್ಷ ಮತ್ತೆ ಮತ್ತೆ ಗೆದ್ದು ಬರಲಿದೆ. **–ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ**

ಹಾಗೆಂದ ಮಾತ್ರಕ್ಕೆ ಜೆಡಿಎಸ್‌ಗೆ ಓಟ್ ಇಲ್ಲ ಎಂದು ಬಿಜೆಪಿ ಭಾವಿಸಬಾರದು ಎಂಬ ಮಾತನ್ನು ಅವರಿಗೆ ಹೇಳಿದ್ದೇನೆ. ವಿಜಯಪುರ, ಬೀದರ್ ಮುಂತಾದೆಡೆ ನಮ್ಮ ಪಕ್ಷ ಬೆಂಬಲ ಕೊಟ್ಟರೆ ಬಿಜೆಪಿ ಗೆಲ್ಲುತ್ತದೆ ಎಂಬುದನ್ನು ತಿಳಿಸಿದ್ದೇನೆ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲೂ ಕೂಡ ನಮ್ಮ ಮತಗಳಿವೆ. ಈ ಎಲ್ಲಾ ವಿಷಯಗಳನ್ನು ಬಿಜೆಪಿ ವರಿಷ್ಠರಿಗೆ ತಿಳಿಸಿದ್ದೇನೆ. ಅಂತಿಮವಾಗಿ ಕುಮಾರಸ್ವಾಮಿ ಬಿಜೆಪಿ ವರಿಷ್ಠರೊಂದಿಗೆ ಚರ್ಚೆ ಮಾಡಿ ಕ್ಷೇತ್ರ ಹಂಚಿಕೆ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು. ●6ನೇ ಪುಟಕ್ಕೆ

## ಸಿದ್ದರಾಮಯ್ಯರ ವರ್ತನೆಗೆ ಕಾಂಗ್ರೆಸ್ ನಾಯಕರಿಂದಲೇ ತರಾಟೆ; ಜಿಟಿಡಿ



ಬೆಂಗಳೂರಿನಲ್ಲಿ ನಡೆದ ಜೆಡಿಎಸ್ ಸಮಾವೇಶದಲ್ಲಿ ‘ಮೈಸೂರು ಮಿತ್ರ’ ಪತ್ರಿಕೆಯೊಂದಿಗೆ ಶಾಸಕ ಜಿಟಿಡಿ.

**ಬೆಂಗಳೂರು:** ಸಮಾಜವಾದಿ ಎಂದು ಬಿಂಬಿಸಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವರ್ತನೆ ಬಗ್ಗೆ ಕಾಂಗ್ರೆಸ್ ಪಕ್ಷದ ನಾಯಕರೇ ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡರು ಸಮಾವೇಶದಲ್ಲಿ ವಾಗ್ದಾಳಿ ನಡೆಸಿದರು.

ನಿನ್ನೆ ಬೆಂಗಳೂರಿನಲ್ಲಿ ನಡೆದ ಅತೀ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರು ಸಿದ್ದರಾಮಯ್ಯನವರ ಹೆಸರೇಳದೇ ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡ ಬಗ್ಗೆ ಸಮಾವೇಶದಲ್ಲಿ ‘ಮೈಸೂರು ಮಿತ್ರ’ನನ್ನು ಪ್ರದರ್ಶಿಸಿ, ವರದಿ ಉಲ್ಲೇಖಿಸಿ ಮಾತನಾಡಿದ ಅವರು, ‘ಪಂಚೆ ಹಾಕೊಂಡು, ಹ್ಯೂಬ್ಲೋಟ್ ವಾಚ್ ಕಟ್ಟಿಕೊಂಡರೆ ಸಮಾಜವಾದಿ ಆಗೋದಿಲ್ಲ. ದೇವರಾಜ ಅರಸು ಅವರ ಕಾರಿನಲ್ಲಿ ಕೂತರೆ ದೇವ ರಾಜ ಅರಸು ಆಗುವುದಿಲ್ಲ’ ಎಂದು ಬಿ.ಕೆ. ಹರಿಪ್ರಸಾದ್ ಅವರು ಹೇಳಿ ದ್ದಾರೆ. ಸಿದ್ದರಾಮಯ್ಯನವರಿಗೆ ಕಾಂಗ್ರೆಸ್ ಮೇಲೂ ಕಾಳಜಿ ಇಲ್ಲ. ಅವರಲ್ಲಿ ಸ್ವಾರ್ಥ ತುಂಬಿದೆ ಎಂಬುದನ್ನು ಅವರದೇ ಪಕ್ಷದ ನಾಯಕರು ಹೇಳುತ್ತಿದ್ದಾರೆ ಎಂದರು.

ಒಕ್ಕಲಿಗ ಸಮಾಜದ ಎಸ್.ಎಂ. ಕೃಷ್ಣ, ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾರೆ. ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದು ಮುಖ್ಯಮಂತ್ರಿ ಆಗಲು ಸದಾವಕಾಶ ಒದಗಿ ಬಂದಿದೆ ಎಂದು ಡಿ.ಕೆ.ಶಿವಕುಮಾರ್ ಕೋರಿದ ಪರಿಣಾಮ ಅವರಿಗೆ ಮುಖ್ಯಮಂತ್ರಿ ಪಟ್ಟ ದೊರೆಯುತ್ತದೆ ಎಂಬ ವಿಶ್ವಾಸದಿಂದ ಜೆಡಿಎಸ್‌ನ ಭಾಗಶಃ ಮತಗಳು ಕಾಂಗ್ರೆಸ್‌ಗೆ ಹೋದವು. ಇದರ ಪರಿಣಾಮ ●6ನೇ ಪುಟಕ್ಕೆ

## ಇಂದು ಬಿಜಿಎಸ್ ಸಾಂಸ್ಕೃತಿಕ ಭವನ ಉದ್ಘಾಟನೆ

## ‘ಭೈರವ ಜ್ಯೋತಿ’ಗೆ ವೈಭವದ ಸ್ವಾಗತ



ಮೈಸೂರು,ಸೆ.10(ಎಸ್‌ಬಿಡಿ)– ಮೈಸೂರಿನ ಹೆಬ್ಬಾಳು ಶ್ರೀ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನ ಆವರಣದಲ್ಲಿ ನಿರ್ಮಿಸಿರುವ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಮೈಸೂರು ಶಾಖೆ, ಶ್ರೀ ಆದಿಚುಂಚನಗಿರಿ ಶಾಖಾ ಮಠದ ನೂತನ ಕಟ್ಟಡ ಹಾಗೂ ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿನಿಲಯದ ಲೋಕಾರ್ಪಣೆ ಹಿನ್ನೆಲೆಯಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರದಿಂದ ಆಗಮಿಸಿದ ‘ಭೈರವ ಜ್ಯೋತಿ’ಯನ್ನು ಭಾನುವಾರ ಸಂಜೆ ಅತ್ಯಂತ ವೈಭವದಿಂದ ಸ್ವಾಗತಿಸಲಾಯಿತು.

ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಬಳಿಗೆ ಸುಮಾರು ಸಂಜೆ 6.45ರ ವೇಳೆಗೆ ಭವ್ಯ ರಥದಲ್ಲಿ ಆಗಮಿಸಿದ ಭೈರವ ಜ್ಯೋತಿಯನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಬರಮಾಡಿಕೊಂಡರು. ಮಂಗಳ ವಾದ್ಯ ನಿನಾದದ ನಡುವೆ ಶ್ರೀ ಸೋಮನಾಥೇಶ್ವರ ಸ್ವಾಮೀಜಿ ಭೈರವ ಜ್ಯೋತಿಯನ್ನು ರಥದಿಂದ ಇಳಿಸಿಕೊಂಡು ಚಂಡಿಕಾ ಹೋಮ ಆಯೋಜಿಸಿದ್ದ ಸ್ಥಳದಲ್ಲಿ ಪ್ರತಿಷ್ಠಾಪಿಸಿದರು. ಲೋಕ ಕಲ್ಯಾಣಾರ್ಥವಾಗಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಚಂಡಿಕಾ ಹೋಮದ ಸಂಕಲ್ಪ ಮಾಡಿದರು. ಶ್ರೀ ಸೋಮನಾಥೇಶ್ವರ(ಸೋಮನಾಥ), ಮಂಡ್ಯ ಶಾಖಾ ಮಠದ ಶ್ರೀ ಪುರುಷೋತ್ತಮನಾಥ ಸ್ವಾಮೀಜಿ, ಬೆಂಗಳೂರು ವಿಜಯನಗರದ ಶ್ರೀ ಸೌಮ್ಯನಾಥ ಸ್ವಾಮೀಜಿ, ಮಂಗಳೂರಿನ ಶ್ರೀ ಧರ್ಮಪಾಲನಾಥ ಸ್ವಾಮೀಜಿ, ಹಾಸನದ ಶ್ರೀ ಶಂಭುನಾಥ ಸ್ವಾಮೀಜಿ, ●6ನೇ ಪುಟಕ್ಕೆ



## ಹೆಚ್.ಡಿ.ದೇವೇಗೌಡರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದ್ದೇ ಕಾಂಗ್ರೆಸ್

### ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತೀವ್ರ ವಾಗ್ದಾಳಿ





ಬೆಂಗಳೂರು,ಸೆ.10(ಪಿಎಂ)–ಕಾಂಗ್ರೆಸ್ ಎಂದೂ ನಂಬಿಕೆಗೆ ಅರ್ಹವಾದ ಪಕ್ಷವಲ್ಲ. ಕಾಂಗ್ರೆಸ್ಸಿಗರಿಗೆ ಎಂದೂ ಮೈತ್ರಿಯಲ್ಲಿ ನಂಬಿಕೆ ಇಲ್ಲ. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ, ಇದೇ ಕಾಂಗ್ರೆಸ್ಸಿಗರು 1996ರಲ್ಲಿ ಹೆಚ್.ಡಿ. ದೇವೇಗೌಡರನ್ನು ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು. ಇದು ಕಾಂಗ್ರೆಸ್‌ನ ಚಾಳಿ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತೀವ್ರ ವಾಗ್ದಾಳಿ ನಡೆಸಿದರು.

ಬೆಂಗಳೂರಿನ ಅರಮನೆ ಮೈದಾನದ ನಲಪಾಡ್ ಪೆವಿಲಿಯನ್‌ನಲ್ಲಿ ಜೆಡಿಎಸ್ ಪಕ್ಷವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜೆಡಿಎಸ್ ಬೃಹತ್ ಸಮಾವೇಶದಲ್ಲಿ ಅವರು ಮಾತನಾಡಿದರು. ಶಿವಸೇನೆ ಕಟ್ಟರ್ ಹಿಂದುತ್ವವಾದಿ ಪಕ್ಷ. ಆದರೂ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನವರು ಅವರೊಂದಿಗೆ ಅಧಿಕಾರದ ಹೊಂದಾಣಿಕೆ ಮಾಡಿಕೊಂಡಿಲ್ಲವೇ? ಕಾಂಗ್ರೆಸ್ ಅಧಿಕಾರಕ್ಕಾಗಿ ಯಾರ ಜೊತೆಯಲ್ಲಾದರೂ ಮೈತ್ರಿ ಮಾಡಿಕೊಳ್ಳುತ್ತದೆ. ನಿಜವಾಗಲೂ ಕೋಮುವಾದಿ ಪಕ್ಷ ಎಂದರೆ ಅದು ಕಾಂಗ್ರೆಸ್ ಎಂದು ಕುಟುಕಿದರು.

2004ರಲ್ಲಿ ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಗಳಾಗಿದ್ದಾಗ, ಜೆಡಿಎಸ್ ಪಕ್ಷದಲ್ಲಿದ್ದುಕೊಂಡೆ ಅಹಿಂದ ಸ್ಥಾಪಿಸಿ, ಪಿತೂರಿ ನಡೆಸಿ ಪಕ್ಷ ಹಾಗೂ ನಾಯಕರನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರು. ಅಂದು ಕಾಂಗ್ರೆಸ್‌ನ ಸೋನಿಯಾ ಗಾಂಧಿಯವರ ರಾಜಕೀಯ ಕಾರ್ಯದರ್ಶಿಗಳಾದ ಅಹಮದ್ ಪಟೇಲ್ ಅವರೊಂದಿಗೆ ಸಂಪರ್ಕದಲ್ಲಿರುವ ಮೂಲಕ ಜೆಡಿಎಸ್ ಮತ್ತು ನಾಯಕರಿಗೆ ಮುಜುಗರ ಉಂಟು ಮಾಡಿದರು. ಇದನ್ನರಿತ ಎಂ.ಪಿ.ಪ್ರಕಾಶ್, ಪಿ.ಜಿ.ಆರ್.ಸಿಂಧ್ಯಾ ಸೇರಿದಂತೆ ಅನೇಕ ನಾಯಕರು ಸಿದ್ದರಾಮಯ್ಯರನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು. ●6ನೇ ಪುಟಕ್ಕೆ

# ಬೆಂಗಳೂರಲ್ಲಿ ಖಾಸಗಿ ಸಾರಿಗೆ ಬಂದ್

- ಸೋಮವಾರ ಆಟೋ, ಟ್ಯಾಕ್ಸಿ, ಓಲಾ, ಊಬರ್, ಖಾಸಗಿ ಬಸ್, ಗೂಡ್ಸ್ ವಾಹನ, ಖಾಸಗಿ ಶಾಲಾ ಬಸ್, ಏರ್‌ಪೋರ್ಟ್ ಟ್ಯಾಕ್ಸಿ ಸಂಚಾರವಿರಲ್ಲ
- ಕೆಂಪೇಗೌಡ ರೈಲು ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ಬೃಹತ್ ಮೆರವಣಿಗೆ
- ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಭೆ ನಡೆಸಿ ಶಕ್ತಿ ಪ್ರದರ್ಶನ

ಬೆಂಗಳೂರು, ಸೆ.10–ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಒದಗಿಸಿರುವ ‘ಶಕ್ತಿ’ ಯೋಜನೆ ವಿರೋಧಿಸಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಖಾಸಗಿ ಸಾರಿಗೆ ಸಂಘಟನೆಗಳು ಬೆಂಗಳೂರು ಬಂದ್ ಆರಂಭಿಸಿದೆ.

ಇಂದು (ಭಾನುವಾರ) ಮಧ್ಯರಾತ್ರಿ 12 ಗಂಟೆಯಿಂದ ಆರಂಭವಾಗಿರುವ ಖಾಸಗಿ ಸಾರಿಗೆ ಬಂದ್ ಸೋಮವಾರ ಮಧ್ಯರಾತ್ರಿ 12 ಗಂಟೆಯವರೆಗೆ ಮುಂದುವರೆಯಲಿದೆ. ಇದರ ಪರಿಣಾಮವಾಗಿ ರಾಜಧಾನಿ ಬೆಂಗಳೂರಿನಲ್ಲಿ ಸೋಮವಾರವಿಡೀ ಆಟೋ, ಕ್ಯಾಬ್, ಗೂಡ್ಸ್ ವಾಹನಗಳು, ಖಾಸಗಿ ಬಸ್‌ಗಳು, ಶಾಲಾ ವಾಹನಗಳು, ಏರ್‌ಪೋರ್ಟ್ ಟ್ಯಾಕ್ಸಿಗಳು, ಓಲಾ, ಊಬರ್, ಕಾರ್ಪೊರೇಟ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿರುವ ಖಾಸಗಿ ವಾಹನಗಳ ಸಂಚಾರವಿರುವುದಿಲ್ಲ. ಖಾಸಗಿ ಸಾರಿಗೆ ಸಂಘಟನೆಗಳು ಸೋಮವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಕೆಂಪೇಗೌಡ ರೈಲು ನಿಲ್ದಾಣದಿಂದ ಫ್ರೀಡಂಪಾರ್ಕ್‌ವರೆಗೆ ಬೃಹತ್ ಮೆರವಣಿಗೆ ನಡೆಸಿ, ನಂತರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಭೆ ನಡೆಸುವ ಮೂಲಕ ಶಕ್ತಿ ಪ್ರದರ್ಶನ ಮಾಡಲಿದೆ. ಬೆಂಗಳೂರಿನಲ್ಲಿ 3 ಲಕ್ಷ ಆಟೋ, 1.5 ಲಕ್ಷ ಟ್ಯಾಕ್ಸಿ, 20 ಸಾವಿರ ಗೂಡ್ಸ್ ವಾಹನಗಳು, 5 ಸಾವಿರಕ್ಕೂ ಹೆಚ್ಚು ಖಾಸಗಿ ಶಾಲಾ ವಾಹನಗಳು, 80 ಸಾವಿರ ಸಿಟಿ ಟ್ಯಾಕ್ಸಿ, ಏರ್‌ಪೋರ್ಟ್ ಟ್ಯಾಕ್ಸಿ, ಕಾರ್ಪೊರೇಟ್ ಕಂಪನಿ ಬಸ್‌ಗಳು ಸೇರಿದಂತೆ 5 ಲಕ್ಷಕ್ಕೂ ಹೆಚ್ಚು ವಾಹನಗಳ ಸಂಚಾರ ಸ್ತಬ್ಧವಾಗುವ ಸಾಧ್ಯತೆ ಇದೆ. ಶಕ್ತಿ ಯೋಜನೆಯಿಂದ ತಮಗೆ ನಷ್ಟವಾಗಿದೆ ●6ನೇ ಪುಟಕ್ಕೆ

> “ಖಾಸಗಿ ಸಾರಿಗೆ ಬಂದ್ ಹಿನ್ನೆಲೆಯಲ್ಲಿ ಸೋಮವಾರ ಹೆಚ್ಚುವರಿ ಬಸ್‌ಗಳನ್ನು ಸಂಚರಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ಈ ಸಂಬಂಧ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಖಾಸಗಿ ಸಾರಿಗೆ ಬಂದ್‌ನಿಂದ ಜನರಿಗೆ ಯಾವುದೇ ರೀತಿ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ. ಪ್ರಯಾಣಿಕರ ಅವಶ್ಯಕತೆಗೆ ತಕ್ಕಂತೆ ವಿವಿಧ ಸ್ಥಳಗಳಿಂದ ಸುಮಾರು 4 ಸಾವಿರ ಹೆಚ್ಚುವರಿ ಬಸ್‌ಗಳನ್ನು ಓಡಿಸಲು ಬಿಬಿಎಂಪಿ ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐದನೇ ಪುಟದಿಂದ

## ಭದ್ರತಾ ಮಂಡಳಿ ಕಾಯಂ ಸ್ಥಾನಕ್ಕೆ ಆಗ್ರಹ

ಭಾನುವಾರ ತೆರೆ ಕಂಡಿತು. ವಿಶ್ವ ನಾಯಕರ ಶೃಂಗಸಭೆಯ ನಿರ್ಣಯಗಳು ಹಾಗೂ ಸಲಹೆಗಳನ್ನು ಪರಿಶೀಲಿಸಲು ನವೆಂಬರ್ ಅಂತ್ಯದಲ್ಲಿ ಒಂದು ವರ್ಚುವಲ್ ಸಮ್ಮೇಳನ ನಡೆಸುವ ಪ್ರಸ್ತಾವನೆಯನ್ನು ಮೋದಿ ಮುಂದಿಟ್ಟಿದ್ದಾರೆ.

ಮುಂದಿನ ಜಿ–20 ಶೃಂಗಸಭೆ ಬ್ರೆಜಿಲ್‌ನಲ್ಲಿ ನಡೆಯಲಿದೆ. ಬ್ರೆಜಿಲ್ ಈ ವರ್ಷದ ಡಿಸೆಂಬರ್ 1ರಂದು ಜಿ–20 ಗುಂಪಿನ ಅಧ್ಯಕ್ಷ ಸ್ಥಾನವನ್ನು ಅಧಿಕೃತವಾಗಿ ವಹಿಸಿಕೊಳ್ಳಲಿದೆ. ಸಮಾರೋಪ ಅಧಿವೇಶನದಲ್ಲಿ ಮೋದಿ ಅವರು ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೊ ಲುಲಾ ಡ ಸಿಲ್ವ ಅವರಿಗೆ ಅಧಿಕಾರ ದಂಡವನ್ನು ಹಸ್ತಾಂತರಿಸಿದರು. ಬಳಿಕ ಮೋದಿ ಅವರು ಬ್ರೆಜಿಲ್‌ಗೆ ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಬ್ರೆಜಿಲ್ ಅಧ್ಯಕ್ಷರು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ರಾಜಕೀಯ ಸಬಲತೆಯನ್ನು ಮರಳಿ ಪಡೆಯಲು ಹೊಸ ಅಭಿವೃದ್ಧಿಶೀಲ ದೇಶಗಳನ್ನು ಕಾಯಂ ಹಾಗೂ ಕಾಯಂ ಅಲ್ಲದ ಸದಸ್ಯರನ್ನಾಗಿ ಸೇರಿಸುವ ಅಗತ್ಯ ಇದೆ ಎಂದು ಸಲಹೆ ನೀಡಿದರು. ಈ ಮೂಲಕ ನರೇಂದ್ರ ಮೋದಿ ಅವರ ಮಾತಿಗೆ ಬೆಂಬಲ ನೀಡಿದರು. 'ವಿಭಜಿತ ಜಿ–20ಯಲ್ಲಿ ನಮಗೆ ಯಾವುದೇ ಆಸಕ್ತಿಯಿಲ್ಲ. ನಮಗೆ ಸಂಘರ್ಷದ ಬದಲಿಗೆ ಶಾಂತಿ ಮತ್ತು ಸಹಕಾರ ಬೇಕು ಎಂದು ಅವರು ಹೇಳಿದರು. ಭೌಗೋಳಿಕ ರಾಜಕೀಯ ಸಮಸ್ಯೆಗಳು ತನ್ನ ಉದ್ದೇಶದ ದಿಕ್ಕು ತಪ್ಪಿಸಲು ಜಿ–20 ಅನುವು ಮಾಡಿಕೊಡುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

## ಅಧ್ಯಕ್ಷರಿಗೆ ಬ್ಯಾಟನ್ ಹಸ್ತಾಂತರ

ಜಿ20 ಶೃಂಗಸಭೆಯ ಭಾಗವಾಗಿ ಭಾನುವಾರ ಬೆಳಗ್ಗೆ ವಿಶ್ವ ನಾಯಕರು ದೆಹಲಿಯಲ್ಲಿರುವ ರಾಜ್‌ಘಾಟ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧಿ ಅವರಿಗೆ ಪುಷ್ಪನಮನ ಸಲ್ಲಿಸಿದರು. ಸೆಪ್ಟೆಂಬರ್ 9ರಂದು ನವದೆಹಲಿಯ ಭಾರತ್ ಮಂಟಪಂ ಇಂಟರ್‌ನ್ಯಾಷನಲ್ ಎಕ್ಸಿಬಿಷನ್–ಕನ್ವೆನ್ಷನ್ ಸೆಂಟರ್‌ನಲ್ಲಿ ಜಿ–20 ನಾಯಕರ ಶೃಂಗಸಭೆಗೆ ಚಾಲನೆ ನೀಡಲಾಗಿತ್ತು. ಜಿ–20 ನಾಯಕರು ಆಫ್ರಿಕಾ ಒಕ್ಕೂಟವನ್ನು ಕಾಯಂ ಸದಸ್ಯರನ್ನಾಗಿ ತಮ್ಮ ಗುಂಪಿಗೆ ಸ್ವಾಗತಿಸಿದರು. ಜಿ–20 ಅಧ್ಯಕ್ಷ ಸ್ಥಾನವನ್ನು ಹೊಂದಿರುವ ಭಾರತವು 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಧ್ಯೇಯವಾಕ್ಯ ಈ ವರ್ಷದ ಶೃಂಗಸಭೆಯ ವಿಷಯ ಎಂದು ಪ್ರತಿಪಾದಿಸಿದೆ.

## ಬಿಜೆಪಿ ಜೊತೆ ಮೈತ್ರಿ

ನಾನು ಬಿಜೆಪಿ ನಾಯಕರನ್ನು ಸಂಪರ್ಕಿಸಿದ್ದು, ಅನೈತಿಕ ಎಂದು ಕೆಲವರು ಹೇಳುತ್ತಿದ್ದಾರೆ. ಅದು ಹೌದಾದರೆ ನೈತಿಕತೆ ಯಾರಿಗೆ ಇದೆ ಎಂದು ನಾನು ವಿಶ್ಲೇಷಣೆ ಮಾಡುವುದಿಲ್ಲ. 90ನೇ ವಯಸ್ಸಿನಲ್ಲಿ ಈ ವಿಚಾರವನ್ನು ಬೆಳೆಸುವುದಿಲ್ಲ ಎಂದ ಅವರು, ಕುಮಾರಸ್ವಾಮಿಗೆ ಆರೋಗ್ಯ ಹದಗೆಟ್ಟಿತ್ತು. ಏನು ಮಾಡುವುದು ಎಂದು ಯೋಚಿಸಿ ಇಂದು ಸಭೆ ಕರೆಯುವ ನಿರ್ಧಾರ ಮಾಡಿದೆವು. ಇಲ್ಲಿಗೆ ಬಂದಿರುವ ಕಾರ್ಯಕರ್ತರಿಗೆ ಮಾತ್ರ ಪಕ್ಷವನ್ನು ಉಳಿಸುವ ಶಕ್ತಿ ಇದೆ. ಕುಮಾರಸ್ವಾಮಿಯೇ ಬಿಜೆಪಿ ಜೊತೆ ಹೋರಾಡಲು ನಾನು ಪಕ್ಷವನ್ನು ಉಳಿಸಿದ್ದೇನೆ ಎಂದು ಅವರು ಹೇಳಿದರು.

**ಭಾವುಕರಾದ ದೇವೇಗೌಡರು:** ನನಗೆ ನೋವಿದೆ. ಈ ಪಕ್ಷವನ್ನು ಉಳಿಸಬೇಕಾಗಿದೆ. ಕುಮಾರಸ್ವಾಮಿಗೆ ಆರೋಗ್ಯ ಸರಿ ಇಲ್ಲ ಎಂದು ಹೇಳುತ್ತಾ ದೇವೇಗೌಡರು ಭಾವುಕರಾದರು. ಈ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಉಳಿಯಬೇಕೆಂದು ಮನವಿ ಮಾಡುತ್ತೇನೆ. ಕಾವೇರಿ, ಮಹದಾಯಿ, ಕೃಷ್ಣ ಯಾವುದೇ ವಿಚಾರವಾಗಲೀ ನಾಡಿನ ವಿಚಾರ ಬಿಟ್ಟು ರಾಜಕಾರಣ ಮಾಡಲ್ಲ ಎಂದು ಕಣ್ಣೀರು ಹಾಕಿದರು. ಈ ಹಿಂದೆ ಕಾಂಗ್ರೆಸ್ ಸರ್ಕಾರ ಆ ಭಾಗ್ಯ–ಈ ಭಾಗ್ಯ, ಇಂದಿರಾ ಕ್ಯಾಂಟೀನ್ ಎಂದು ಹಲವಾರು ಯೋಜನೆಗಳನ್ನು ಮಾಡಿತ್ತು. ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಆ ಯೋಜನೆಗಳಿಗೆ ಹಣ ನೀಡಿದ್ದಲ್ಲದೇ 28 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದರು. ಹಿಂದೂಸ್ತಾನದಲ್ಲಿ ಇಂತಹ ಮುಖ್ಯಮಂತ್ರಿ ಯಾರಿದ್ದಾರೆ ಹೇಳಿ ಎಂದು ತಮ್ಮ ಪುತ್ರನನ್ನು ಪ್ರಶಂಸಿಸಿದರು. ದೇವೇಗೌಡರನ್ನು ಮುಗಿಸುತ್ತೀರಾ? ಎಂದು ಪ್ರಶ್ನಿಸಿದ ಅವರು, ಇಂದು ಯಾವ ರಾಜಕೀಯ ಪಕ್ಷಗಳಿಗೆ ತತ್ವ ಸಿದ್ಧಾಂತ ಇದೆ? ಈ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರು ಬೆಂಬಲ ಕೊಡುತ್ತೇನೆ ಎಂದರೂ ಕೂಡ ಪ್ರಧಾನಮಂತ್ರಿ ಸ್ಥಾನ ಬೇಡ, ಮನೆಗೆ ಹೋಗುತ್ತೇನೆ ಎಂದವನು ನಾನು. ಅಂತಹ ನನ್ನ ನೈತಿಕತೆ ಬಗ್ಗೆ ಮಾತನಾಡುತ್ತೀರಾ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

## ಕೆಳಗಿಳಿಸಿದ್ದೇ ಕಾಂಗ್ರೆಸ್

ಬಳಿಕ ಎಂ.ಪಿ.ಪ್ರಕಾಶ್ ಉಪಮುಖ್ಯಮಂತ್ರಿಯಾದರು ಎಂದರು. ಸಿದ್ದರಾಮಯ್ಯನವರು ಕಾಂಗ್ರೆಸ್‌ಗೆ ಸೇರಿದಾಗ ವಿರೋಧ ಪಕ್ಷ ಸ್ಥಾನ ನೀಡಲಿಲ್ಲವೆಂದು ಬಿಜೆಪಿಯ ಹಿರಿಯ ನಾಯಕ ಅಡ್ವಾಣಿಯವರ ಮನೆಗೆ ಭೇಟಿ ನೀಡಿ ಪಕ್ಷ ಸೇರ್ಪಡೆ ಬಗ್ಗೆ ಅವರೊಂದಿಗೆ ಚರ್ಚಿಸಿದ್ದರು. ಅಲ್ಲದೆ, ಕಾಗಿನೆಲೆ ಮಠದಿಂದ ಹೆಲಿಕ್ಯಾಪ್ಟರ್ ಮೂಲಕ ಮೈಸೂರಿನ ಸುತ್ತೂರು ಜಾತ್ರೆಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಜೊತೆ ಪ್ರಯಾಣ ಬೆಳೆಸಿ ಅವರೊಂದಿಗೆ ಕಾಂಗ್ರೆಸ್ ಪಕ್ಷ ಬಿಟ್ಟು ಬರುತ್ತೇನೆ, ಬೇರೆ ಪಕ್ಷ ಕಟ್ಟೋಣ ಎಂದಿದ್ದರು. ಆಗ ಯಡಿಯೂರಪ್ಪನವರು ಕಾಂಗ್ರೆಸ್ ತೊರೆದು ಬಂದರೆ ಹಣಕಾಸು ಸಚಿವರನ್ನಾಗಿ ಮಾಡುವುದಾಗಿ ಹೇಳಿದ್ದರು. ಆಗ ಸಿದ್ದರಾಮಯ್ಯರ ಜೊತೆಯಲ್ಲಿದ್ದ ಡಾ.ಹೆಚ್.ಸಿ.ಮಹದೇವಪ್ಪ, ಕೋದಂಡರಾಮಯ್ಯ, ಸಿ.ಎಂ.ಇಬ್ರಾಹಿಂ ಹಾಗೂ ಹೆಚ್.ಎಸ್.ಮಹದೇವ ಪ್ರಸಾದ್ ಅವರ ಪೈಕಿ ಕೋದಂಡರಾಮಯ್ಯ ಹಾಗೂ ಸಿ.ಎಂ.ಇಬ್ರಾಹಿಂ ವಿರೋಧ ವ್ಯಕ್ತಪಡಿಸಿದ್ದರು ಎಂದು ತಿಳಿಸಿದರು.

ಈ ವಿಷಯ ತಿಳಿದ ಸೋನಿಯಾ ಗಾಂಧಿಯವರು ಸಿದ್ದರಾಮಯ್ಯರನ್ನು ದೆಹಲಿಗೆ ಕರೆಸಿಕೊಂಡು, ಮಲ್ಲಿಕಾರ್ಜುನ ಖರ್ಗೆಯವರನ್ನು ವಿರೋಧ ಪಕ್ಷ ಸ್ಥಾನದಿಂದ ಕೆಳಗಿಳಿಸಿ ಸಿದ್ದರಾಮಯ್ಯರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡುವ ತೀರ್ಮಾನ ತಿಳಿಸಿದ್ದರು ಎಂದರು. 2019ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರ ಪತನವಾಗಿ ಬಿಜೆಪಿ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯನವರೇ ಮುಖ್ಯ ಪಾತ್ರಧಾರಿ. ಇವರೆಂದೂ ಕಾಂಗ್ರೆಸ್‌ನವರೊಂದಿಗೆ ಬೆರೆತಿಲ್ಲ. ಇವರದು ಸ್ವಾರ್ಥ ಸ್ವಭಾವ. ತಮಗಿಲ್ಲವಾದರೆ ಬೇರೆಯವರಿಗೂ ಸಿಗಬಾರದು ಎಂಬ ಮನೋಭಾವದವರು ಎಂದು ಕುಟುಕಿದರು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನಿಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರಂತಹ ಸಮರ್ಥ ನಾಯಕರು ಪಕ್ಷದಲ್ಲಿದ್ದಾರೆ. ಬಿಜೆಪಿಗೆ ನರೇಂದ್ರ ಮೋದಿಯವರಂತಹ ನಾಯಕತ್ವವಿದೆ. ಪರಸ್ಪರ ಸಹಕಾರದ ತತ್ವದೊಂದಿಗೆ ಬಿಜೆಪಿ ಮತ್ತು ಜೆಡಿಎಸ್ ಮುಂದುವರೆಯಬೇಕಿದ್ದು, ರಾಜಕೀಯ ಸಹಜೀವನ ನಮ್ಮ ಗುರಿಯಾಗಬೇಕಾಗಿದೆ. ಈಗ ಲೋಕಸಭಾ ಚುನಾವಣೆ ನಮ್ಮ ಮುಂದಿದ್ದು, ಅವರ ಜೊತೆ ಮೈತ್ರಿ ಮಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮ ನಾಯಕರು ಕಾರ್ಯೋನ್ಮುಖರಾಗಿದ್ದಾರೆ. ಯಾರಿಗೆ ಎಷ್ಟು ಪಾಲು ಎಂಬುದನ್ನು ನಮ್ಮ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನಿರ್ಧಾರ ಮಾಡಲಿದ್ದಾರೆ ಎಂದು ತಿಳಿಸಿದರು.

ರಾಜ್ಯದ 28 ಕ್ಷೇತ್ರಗಳಲ್ಲಿ ಕಾಂಗ್ರೆಸ್ಸನ್ನು ಸೋಲಿಸಲೇಬೇಕಾಗಿದೆ. ಕಾಂಗ್ರೆಸ್ ಸೋತರೆ ನಮ್ಮ ಇರುವಿಕೆಯನ್ನು ಸಾಬೀತುಪಡಿಸಿದಂತಾಗುತ್ತದೆ. ಈ ತಳಹದಿಯ ಮೇಲೆ ನಾವು ಮುಂದಿನ ದಿನಗಳಲ್ಲಿ ಮತ್ತು ಮುಂಬರುವ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸೇರಿದಂತೆ ಯಾವುದೇ ಚುನಾವಣೆಗಳಲ್ಲಿ ನಮ್ಮ ಪ್ರಬಲವಾದ ಪೈಪೋಟಿ ನೀಡಲು ಸಾಧ್ಯವಾಗುತ್ತದೆ ಎಂದು ಅವರು ನುಡಿದರು.

## ನಾಯಕರಿಂದಲೇ ತರಾಟೆ; ಜಿಟಿಡಿ

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಬಂದಿದೆ. ಆದರೆ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಪಟ್ಟ ತಪ್ಪಿಸಿ ತಾವೇ ಮುಖ್ಯ ಮಂತ್ರಿ ಆಗುವ ಮೂಲಕ ಸ್ವಾರ್ಥ ಮೆರೆದಿದ್ದಾರೆ ಎಂದರು. ಮೋದಿಯವರು 2024ರಲ್ಲಿ ಮತ್ತೆ ಪ್ರಧಾನಿಯಾಗುವುದು ಎಷ್ಟು ಸತ್ಯವೋ 130 ವರ್ಷ ಇತಿಹಾಸವಿರುವ ಕಾಂಗ್ರೆಸ್ ಧೂಳಿಪಟವಾಗುವುದು ಅಷ್ಟೇ ಸತ್ಯ ಎಂದು ಜಿ.ಟಿ.ದೇವೇಗೌಡ ಹೇಳಿದರು. ಮಾತೆತ್ತಿದರೆ ನುಡಿದಂತೆ ನಡೆದಿದ್ದೇವೆ ಎನ್ನುವ ಸಿದ್ದರಾಮಯ್ಯ, ಚುನಾವಣೆ ವೇಳೆ 200 ಯೂನಿಟ್ ವಿದ್ಯುತ್ ಕೊಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ ಈಗ ಸರಾಸರಿ ಲೆಕ್ಕದಷ್ಟು ಉಚಿತ ವಿದ್ಯುತ್ ಎಂದು ಹೇಳುತ್ತಿದ್ದಾರೆ. ಇದು ಅವರು ಕೊಟ್ಟ ಮಾತಿನಂತೆ ನಡೆದಿರುವ ಲಕ್ಷಣವೇ ಎಂದು ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗುತ್ತಿಲ್ಲ. ಈಗ ಬರಗಾಲವಿದ್ದು, ಕುಡಿಯಲು ಹಾಗೂ ಬೆಳೆಗಳಿಗೆ ನೀರಿಲ್ಲ. ಇಂತಹ ಸ್ಥಿತಿಯಲ್ಲಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವ ಮೂಲಕ ರೈತರಿಗೆ ದ್ರೋಹ ಎಸಗಲಾಗಿದೆ ಎಂದು ಅವರು ಕಿಡಿಕಾರಿದರು.

## ಖಾಸಗಿ ಸಾರಿಗೆ ಬಂದ್

ಎಂದು ಹೇಳುತ್ತಿರುವ ಖಾಸಗಿ ಸಾರಿಗೆ ವಾಹನ ಒಕ್ಕೂಟದವರು ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. **ಆಟೋಗಳಿಗೆ ಸಂಬಂಧಿಸಿದ ಬೇಡಿಕೆಗಳು:** ಸರ್ಕಾರದಿಂದ ಆಟೋ ಚಾಲಕರಿಗೆ ಮಾಸಿಕ 10 ಸಾವಿರ ರೂ. ಪರಿಹಾರ ನೀಡಬೇಕು. ಅಸಂ ಘಟಿತ ಚಾಲಕರಿಗೆ ಸಾರಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಸರ್ಕಾರದಿಂದಲೇ ಅಗ್ರಿಗೇಟರ್ ಆ್ಯಪ್ ಸಿದ್ಧಪಡಿಸಬೇಕು. ಏರ್‌ಪೋರ್ಟ್‌ನಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಬೇಕು. ಎಲೆಕ್ಟ್ರಿಕ್ ಆಟೋಗಳಿಗೆ ರಹದಾರಿ ನೀಡಬೇಕು.

**ಟ್ಯಾಕ್ಸಿಗಳಿಗೆ ಸಂಬಂಧಿಸಿದ ಬೇಡಿಕೆಗಳು:** ಜೀವಾವಧಿ ತೆರಿಗೆಯನ್ನು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಬೇಕು. ಚಾಲಕರಿಗೆ ವಸತಿ ಯೋಜನೆ ಕಲ್ಪಿಸಬೇಕು. ಚಾಲಕರ ಮಕ್ಕಳಿಗೆ ವಿದ್ಯಾರ್ಥಿವೇತನ ಹಾಗೂ ವಿದ್ಯಾಭ್ಯಾಸಕ್ಕೆ ಧನಸಹಾಯ ನೀಡಬೇಕು.

**ಖಾಸಗಿ ಬಸ್‌ಗಳಿಗೆ ಸಂಬಂಧಿಸಿದ ಬೇಡಿಕೆಗಳು:** ಶಕ್ತಿ ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು. ರಸ್ತೆ ತೆರಿಗೆ ಸಂಪೂರ್ಣವಾಗಿ ರದ್ದು ಮಾಡಬೇಕು. ಖಾಸಗಿ ಬಸ್‌ಗಳನ್ನು ಕಿಲೋಮೀಟರ್ ಬಾಡಿಗೆ ಆಧಾರದಲ್ಲಿ ಸರ್ಕಾರವೇ ಬಾಡಿಗೆಗೆ ಪಡೆಯಬೇಕು.

# ಅನೇಕರ ಸಹಕಾರದಿಂದ ಆದಿಚುಂಚನಗಿರಿ ಮಠದ ಮೈಸೂರು ಕ್ಷೇತ್ರ ಅಭಿವೃದ್ಧಿ

### ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ

ಮೈಸೂರು, ಸೆ.10(ಎಸ್‌ಬಿಡಿ)– ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೈಸೂರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದರು.

ಮೈಸೂರಿನ ಹೆಬ್ಬಾಳು ಶ್ರೀ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನ ಆವರಣದಲ್ಲಿ ನಿರ್ಮಿಸಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರು ಶಾಖಾ ಮಠದ ನೂತನ ಕಟ್ಟಡ ಹಾಗೂ ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿ ನಿಲಯದ ಲೋಕಾರ್ಪಣೆ ಸಮಾರಂಭದಲ್ಲಿ ಭಾನುವಾರ ಪಾಲ್ಗೊಂಡು ಅವರು ಮಾತನಾಡಿದ ಅವರು, ಈ ಕ್ಷೇತ್ರದ ಅಭಿವೃದ್ಧಿಗೆ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರು ಸೇರಿದಂತೆ ಅನೇಕರು ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಎಲ್ಲರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ಆದಿಚುಂಚನಗಿರಿಯಿಂದ ಭೈರವ ಜ್ಯೋತಿ ಆಗಮಿಸುವ ವೇಳೆಗೆ ತಾವೂ ಬರಬೇಕು ಎಂದು ಶ್ರೀಗಳು ಆದೇಶಿಸಿದ್ದರು. ಗುರುವಿನ ಗುಲಾಮನಾಗುವ ತನಕ ಮುಕುತಿ ದೊರಕುವುದಿಲ್ಲ. ಲಿಂಗೈಕ್ಯರಾಗಿರುವ ಪದ್ಮಭೂಷಣ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರು ಬಹಳ ಮುಂದಾಲೋಚನೆಯಿಂದ ಹೊರದೇಶದಲ್ಲಿ ವಿದ್ಯಾಭ್ಯಾಸ ಮಾಡಿ, ಡಾಕ್ಟರೇಟ್ ಪದವಿ ಪಡೆಯುವುದರ ಜೊತೆಗೆ ಆಧ್ಯಾತ್ಮಿಕ ಲೋಕದಲ್ಲಿ ತಮ್ಮದೇ ಆದ ಶಕ್ತಿ ಗಳಿಸಿಕೊಂಡಿರುವ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಗುರುತಿಸಿ ಪೀಠಕ್ಕೆ ನೇಮಿಸಿದರು. ಇಂದು ಅವರ ಪಕ್ಕದಲ್ಲಿ ಕುಳಿತುಕೊಳ್ಳುವ ಅವಕಾಶ ನೀಡಿ, ಆಶೀರ್ವದಿಸಿದ್ದಾರೆ. ಶ್ರೀ ಭೈರವ ದೇವರಿಗೆ ಪುಷ್ಪಾರ್ಚನೆ ಮಾಡುವ ಅವಕಾಶ ನೀಡಿದ್ದಾರೆ ಎಂದು ಭಾವುಕವಾಗಿ ಹೇಳಿದರು.



ಮೈಸೂರಿನ ಹೆಬ್ಬಾಳು ಶ್ರೀ ಲಕ್ಷ್ಮಿಕಾಂತಸ್ವಾಮಿ ದೇವಸ್ಥಾನ ಆವರಣದಲ್ಲಿ ನಿರ್ಮಿಸಿರುವ ಬಿಜಿಎಸ್ ಸಾಂಸ್ಕೃತಿಕ ಭವನದಲ್ಲಿ ಭಾನುವಾರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪ್ರತಿಮೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಆರತಿ ಬೆಳಗಿದರು. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಮತ್ತಿತರರಿದ್ದರು.

**ಒಂದು ರೂ. ದೋಖಾ ಮಾಡಿಲ್ಲ:** ನನಗೆ 91 ವರ್ಷ, ಇಬ್ಬರು ಎತ್ತಿಕೊಂಡು ಬರಬೇಕು. ಆದರೆ ಪ್ರತಿಯೊಂದು ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ, ಮಾತನಾಡುವ ಶಕ್ತಿಯನ್ನು ಚೌಡೇಶ್ವರಿ ಹಾಗೂ ಚಾಮುಂಡೇಶ್ವರಿ ಕಲ್ಪಿಸಿದ್ದಾರೆ. ಒಬ್ಬ ಸಾಮಾನ್ಯ ರೈತನ ಮಗನಾದ ನಾನು ಹತ್ತೂವರೆ ತಿಂಗಳು ದೇಶದ ಪ್ರಧಾನಿಯಾಗಿ ಕೆಲಸ ಮಾಡಿದ್ದೇನೆ. ಸಮಾಜಕ್ಕೆ ಒಂದೇ ಒಂದು ಸಣ್ಣ ಕಪ್ಪುಚುಕ್ಕೆ ತರದಂತೆ ಆಡಳಿತ ನಡೆಸಿದ್ದೇನೆ. ನಾನೇನಾದರೂ ರಾಷ್ಟ್ರದ ಬೊಕ್ಕಸಲ್ಲೆ ಒಂದೇ ಒಂದು ರೂಪಾಯಿ ದೋಖಾ ಮಾಡಿದ್ದರೆ, ದ್ರೋಹ ಮಾಡಿದ್ದರೆ ನೇಣು ಹಾಕಿ ಎಂದು ಹೇಳಿದ್ದು ಹರದನಹಳ್ಳಿಯ ಸಾಮಾನ್ಯ ರೈತನ ಮಗ. ರಾಷ್ಟ್ರಕ್ಕಾಗಿ ತೆಗೆದುಕೊಂಡ ನಿರ್ಣಯಗಳು ಸಾಕ್ಷಿವೆ. ಸುಗತ ಶ್ರೀನಿವಾಸ್ ಹಾಗೂ ಅವರ ಪತ್ನಿ ಪುಸ್ತಕ ಬರೆದಿದ್ದಾರೆ. ನೀವೆಲ್ಲಾ ಓದಬೇಕು ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ತಿಳಿಸಿದರು.

**ಧಾರ್ಮಿಕ ಕ್ಷೇತ್ರವಾಗಲಿದೆ:** ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಮಾತನಾಡಿ, ಬಹಳ ವರ್ಷಗಳಿಂದಲೂ ಲಕ್ಷ್ಮಿಕಾಂತ ಸ್ವಾಮಿ ದೇವಾಲಯದ ಅಭಿವೃದ್ಧಿಗೆ ಪ್ರಯತ್ನ ನಡೆದಿದೆ. ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರು ಮೈಸೂರಿನ ಅಪೋಲೋ ಆಸ್ಪತ್ರೆ ನಿರ್ಮಾಣದ ಸಂದರ್ಭದಲ್ಲೂ ಈ ಬಗ್ಗೆ ತಮ್ಮ ಆಶಯ ವ್ಯಕ್ತಪಡಿಸಿದ್ದರು. ಸದ್ಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು ಅತೀವ ಆಸಕ್ತಿಯಿಂದ ನೂತನ ಕಟ್ಟಡಗಳನ್ನು ನಿರ್ಮಿಸಿದ್ದು, ಇದು ಧಾರ್ಮಿಕ ಕ್ಷೇತ್ರವಾಗಿ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ದೇವಸ್ಥಾನವನ್ನು ಮುಜರಾಯಿ ಇಲಾಖೆಯವರು ಸುಪರ್ದಿಗೆ ಪಡೆಯಲು ಪ್ರಯತ್ನಿಸಿದ ಸಂದರ್ಭವನ್ನು ಸ್ಮರಿಸಿಕೊಂಡ ಅವರು, ಕಾನೂನಾತ್ಮಕವಾಗಿ ಈ ಜಾಗ ಸಂಪೂರ್ಣವಾಗಿ ಆದಿಚುಂಚನಗಿರಿ ಮಹಾಸಂಸ್ಥಾನಕ್ಕೆ ಸೇರಿದ್ದಾಗಿದೆ. ಚಾಮುಂಡೇಶ್ವರಿ, ಭೈರವೇಶ್ವರ ಸ್ವಾಮೀಜಿ ಕೃಪಾಶೀರ್ವಾದ, ಗುರುಭಕ್ತಿ, ದೈವಭಕ್ತಿಯಿಂದ ಹಿರಿಯರಾದ ಹೆಚ್.ಡಿ.ದೇವೇಗೌಡರು ಈ ಸಮಾರಂಭದಲ್ಲಿ ಭಾಗಿಯಾಗಿದ್ದಾರೆ. ಇದನ್ನು ಯುವ ಪೀಳಿಗೆ ಅರಿತು, ಅನುಸರಿಸಬೇಕು. ಶಿಕ್ಷಣ, ಆರೋಗ್ಯ, ದಾಸೋಗ ಸೇವೆಗೆ ತಮ್ಮ ಕೈಲಾದ ಸಹಕಾರ ನೀಡಬೇಕು. ಇಲ್ಲಿನ ಹಾಗೂ ಸಮೀಪದಲ್ಲಿ ಸುಧಾಮೂರ್ತಿಯವರು ಅಭಿವೃದ್ಧಿಪಡಿಸಿದ ಹೆಬ್ಬಾಳು ಕೆರೆಯ ಸ್ವಚ್ಛತೆಯನ್ನು ಕಾಪಾಡಬೇಕು ಎಂದು ಸಲಹೆ ನೀಡಿದರು.

**ಅವಿಸ್ಮರಣೀಯ ಕೊಡುಗೆ:** ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಶ್ರೀ ಆದಿಚುಂಚನಗಿರಿ ಮಠ ಹಾಗೂ ಅರಮನೆ ಸಂಬಂಧವನ್ನು ಸ್ಮರಿಸಿಕೊಂಡರಲ್ಲದೆ, ಹಿಂದಿನವರ ಮಾರ್ಗದಲ್ಲಿ ನಾನು ಮುಂದುವರೆದು ಈ ಸಮಾರಂಭದಲ್ಲಿ ಭಾಗಿಯಾಗಿರುವುದು ನನ್ನ ಸೌಭಾಗ್ಯ. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ರಾಜ್ಯಕ್ಕೆ ನೀಡಿರುವ ಕೊಡುಗೆ ಅವಿಸ್ಮರಣೀಯ ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಶ್ರೀ ಮಠದ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಮೈಸೂರು ಶಾಖಾಮಠದ ಪೀಠಾಧಿಪತಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಕಾಗಿನೆಲೆ ಪೀಠದ ಮೈಸೂರು ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು, ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಮುಖಂಡ ಸಿ.ಬಸವೇಗೌಡರು, ವಿವಿಧ ಶಾಖಾ ಮಠದ ಶ್ರೀಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ನನ್ನ ಜೀವವಿರುವವರೆಗೂ ಪುಟ್ಟರಾಜು ಪಕ್ಷ ಬಿಡಲ್ಲ

**ಮೈಸೂರು:** ನನ್ನ ಜೀವನದ ಕಡೇವರೆಗೂ ಸಿ.ಎಸ್.ಪುಟ್ಟರಾಜು ನನ್ನನ್ನು ಬಿಟ್ಟು ಹೋಗಲು ಸಾಧ್ಯವೇ ಇಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹೇಳಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಸಮಾರಂಭದಲ್ಲಿ ಭಾಷಣದ ಆರಂಭದಲ್ಲಿ ವೇದಿಕೆಯಲ್ಲಿದ್ದ ಗಣ್ಯರ ಹೆಸರೇಳುವಾಗ, ಸಿ.ಬಸವೇಗೌಡರು, ಕೆ.ಹರೀಶ್‌ಗೌಡರು ಎಲ್ಲರೂ ನಮ್ಮೊಟ್ಟಿಗೆ ಇದ್ದವರು. ಆದರೆ ಕಾಲ ಬದಲಾದಾಗ ರಾಜಕಾರಣದಲ್ಲಿ ಏರುಪೇರಾಗುವುದು ಸಹಜ. ಇನ್ನು ಮೇಲುಕೋಟೆ ಮಾಜಿ ಶಾಸಕ ಸಿ.ಎಸ್. ಪುಟ್ಟರಾಜು ದೇವೇಗೌಡರನ್ನು ಬಿಟ್ಟು ಹೋಗುತ್ತಾರೆ ಎಂದು ಬಹಳಷ್ಟು ಜನ ಹೇಳಿದ್ದಾರೆ. ಆದರೆ ನನ್ನ ಜೀವನದ ಅಂತ್ಯದವರೆಗೂ ಪುಟ್ಟರಾಜು ನನ್ನನ್ನು ಬಿಟ್ಟು ಹೋಗಲು ಸಾಧ್ಯವೇ ಇಲ್ಲ. ನನ್ನ ಅವರ ಸಂಬಂಧ ಅಷ್ಟು ಗಟ್ಟಿಯಾಗಿದೆ ಎಂದರು.

## 'ಭೈರವ ಜ್ಯೋತಿ'ಗೆ ವೈಭವದ ಸ್ವಾಗತ

ಐದನೇ ಪುಟದಿಂದ

ದಸರಿಘಟ್ಟದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ, ಆದಿಚುಂಚನಗಿರಿಯ ಶ್ರೀ ನಾರಾಯಣಸ್ವಾಮಿ, ಚಾಮುಂಡಿಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಸೇರಿದಂತೆ ಸಂತರು ಭಾಗಿಯಾದರು.

ಸಂಜೆ ಸುಮಾರು 7.15ಕ್ಕೆ ಆಗಮಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಹೋಮದ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಮಹಾಗಣಪತಿ, ದುರ್ಗಾ, ಲಕ್ಷ್ಮಿ, ಸರಸ್ವತಿ, ಲಕ್ಷ್ಮೀಕಾಂತ ಸ್ವಾಮಿ, ಮಹಾವಿಷ್ಣು ಸ್ವಾಮಿ, ಭೈರವೇಶ್ವರ ದೇವರಿಗೆ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ಬ್ಯಾಟರಿ ಚಾಲಿತ ವಾಹನದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಮೈಸೂರು ಶಾಖಾ ಮಠದ ನೂತನ ಕಟ್ಟಡಕ್ಕೆ ತೆರಳಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡರು, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಹಂಗಾಮಿ ಮೇಯರ್ ಶಿವಕುಮಾರ್, ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಅಪ್ಪಾಜಿಗೌಡ, ಶ್ರೀಕಂಠೇಗೌಡ, ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ತುಮಕೂರು ವೀರನಗುಡಿ ವೀರಭದ್ರೇಶ್ವರ ದೇವಸ್ಥಾನದ ಅರ್ಚಕರಾದ ವಿನೋದ್ ದೀಕ್ಷಿತ್ ನೇತೃತ್ವದಲ್ಲಿ 25 ಅರ್ಚಕರ ತಂಡ ಧಾರ್ಮಿಕ ಕೈಂಕರ್ಯಗಳನ್ನು ನಡೆಸುತ್ತಿದ್ದು, ಭಾನುವಾರ ಬೆಳಗ್ಗೆ ಕಳಶಾರ್ಚನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಸಂಜೆ ನವಾಕ್ಷರಿ ಹೋಮ ನೆರವೇರಿತು. ಸೋಮವಾರ ಬೆಳಗ್ಗೆ 7.30ರಿಂದ ಚಂಡಿಕಾ ಹೋಮ, ಪೂರ್ಣಾಹುತಿ ಹಾಗೂ ಮಹಾದೀಪಾರಾಧನೆ ನೆರವೇರಲಿದೆ.

## ಭಾರತೀಯ ಪರಂಪರೆಯ ಭಾಗ ಭರತನಾಟ್ಯ ದೇಶ–ವಿದೇಶಗಳಲ್ಲಿ ಜನಪ್ರಿಯ



ಮೈಸೂರು, ಸೆ.10(ಎಸ್‌ಪಿಎನ್)– ಭಾರತೀಯ ಪರಂಪರೆಯ ಭಾಗವಾದ ಭರತನಾಟ್ಯವು ದೇಶ–ವಿದೇಶಗಳಲ್ಲಿ ಜನಪ್ರಿಯವಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಚಿದಂಬರನಟೇಶ ನಾಟ್ಯ ಶಾಲೆ ಟ್ರಸ್ಟ್ ವತಿಯಿಂದ 2023–24ನೇ ಸಾಲಿನ 'ನೃತ್ಯ ಆರಾಧಾನಾ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತೀಯ ಪರಂಪರೆಗಳಲ್ಲಿ ಭರತ ನಾಟ್ಯ ಶಾಸ್ತ್ರೀಯ ನೃತ್ಯ ಪ್ರಕಾರವಾಗಿದ್ದು, ಇದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಪ್ರಸಿದ್ಧಿ ಪಡೆದಿದೆ. ಭರತಮುನಿಯಿಂದ ನಾಟ್ಯಶಾಸ್ತ್ರ ಎಂಬ ಹೆಸರು ಬಂದಿದೆ ಎಂದು ಅನೇಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲೂ ನಮ್ಮ ದೇಶಕ್ಕೆ ಭಾರತ ಎಂಬ ಹೆಸರು ಬಂದಿದೆ ಎಂದರು.

ಭರತನಾಟ್ಯ ಪರಂಪರೆಯನ್ನು ದಕ್ಷಿಣ ಭಾರತದ ಹಿಂದೂ ದೇವಾಲಯಗಳ ಚಿತ್ರಕಲೆಗಳಲ್ಲಿ ಕಾಣಬಹುದು. ಭರತನಾಟ್ಯ ಪ್ರದರ್ಶನದಲ್ಲಿ ಮೃದಂಗ, ಪಿಟೀಲು ವಿಶಿಷ್ಟ ವಾದ್ಯವಾಗಿದ್ದು, ಗಾಯನ ಸಂಗೀತದೊಂದಿಗೆ ಇರುತ್ತವೆ. ಮೃದಂಗವು ನೃತ್ಯಕ್ಕೆ ಲಯಬದ್ಧವಾದ ಪಕ್ಕವಾದ್ಯವಾಗಿದೆ ಎಂದ ಶಾಸಕರು, ಇವುಗಳ ಸಮ್ಮಿಳಿತವಾಗಿ ಚಿದಂಬರನಟೇಶ ನಾಟ್ಯ ಶಾಲೆ ವಿದ್ಯಾರ್ಥಿಗಳು ಪ್ರದರ್ಶಿಸಿದ 'ಮಹಿಷಾಸುರ ಮರ್ದಿನಿ' ನೃತ್ಯ ರೂಪಕ ನೋಡುಗರ ಗಮನ ಸೆಳೆದಿದೆ ಎಂದರು.

ಈ ವೇಳೆ ಮಂಡ್ಯ ಮತ್ತು ಮೈಸೂರು ಗುರುದೇವ ಲಲಿತ ಕಲಾ ಅಕಾಡೆಮಿ ನಿರ್ದೇಶಕ ವಿದ್ವಾನ್ ಪಿ.ಎಂ. ಚೇತನರಾಧಾಕೃಷ್ಣ, ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಮೇಯರ್ ಶಿವಕುಮಾರ್(ಹಂಗಾಮಿ), ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಈ.ಸಿ.ನಿಂಗರಾಜು ಇತರರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**11.9.2023 ಸೋಮವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ**

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ–ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಮೈಸೂರು ಆಕಾಶವಾಣಿಗೆ–89– "ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ", 9.40 ನಮ್ಮ ಆರೋಗ್ಯ–ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾನಸಿಕ ಆರೋಗ್ಯ ವಿಭಾಗದ ಮನೋವೈದ್ಯರಾದ ಡಾ.ಸುಧಾನಾಯಕ್ ಮತ್ತು ಮನೋಚಿಕಿತ್ಸಕರಾದ ಡಾ.ಬಾನು ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ –ಪ್ರಭುಸ್ವಾಮಿ ಮಳಿಮಠ, 10.00 ಮೈಸೂರು ಆಕಾಶವಾಣಿಗೆ–89–"ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ, 10.30 ಮಕ್ಕಳ ಮಂಟಪ–ಸತ್ಯ ಸಾಯಿಬಾಬಾ ವಿದ್ಯಾ ಸಂಸ್ಥೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 "ಮೈಸೂರು ಆಕಾಶವಾಣಿಗೆ–89–"ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ" **ಮಧ್ಯಾಹ್ನ:** 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 "ಮೈಸೂರು ಆಕಾಶವಾಣಿಗೆ–89–"ನುಡಿ ಸೇವೆಯ ನಿತ್ಯ ನಡಿಗೆಗೆ ಹೊಸ ಹೆಜ್ಜೆ", 2.35 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ–ಪಶುರಂಗ–ಪ್ರಾಯೋಜಿತ ಕಾರ್ಯಕ್ರಮ. ಹೈನುಗಾರಿಕೆ ಹಾಗೂ ಸೈಲೇಜ್ ತಯಾರಿಕೆ ಕುರಿತು ಪಿರಿಯಾಪಟ್ಟಣ ತಾಲೂಕು ಹುಣಸವಾಡಿಯ ಪಿ.ಡಿ.ರಾಜಾರಾಮ ಪೈ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲೊಂಬೋದಲ್ಲಿ ನಡೆಯಲಿರುವ ಏಷಿಯಾ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಭೇರುಂಡ ಫೌಂಡೇಶನ್, ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್:** ಉದ್ಯಮಶೀಲತೆ ಮತ್ತು ಕುಟುಂಬ ವ್ಯವಹಾರಕ್ಕಾಗಿ ಉತ್ಕೃಷ್ಟತೆಯ ಕೇಂದ್ರ ಉದ್ಘಾಟನೆ, ಸ್ಥಳ: ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್, ಬೆಳಗ್ಗೆ 10 ಗಂಟೆಯಿಂದ.

■ **ಮಾಜಿ ಶಾಸಕ ಎಲ್.ನಾಗೇಂದ್ರ ಅಭಿಮಾನಿಗಳ ಬಳಗ:** ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಜನುಮ ದಿನದ ಅಂಗವಾಗಿ ವಿವಿಧ ಸೇವಾ ಕಾರ್ಯಗಳು, ಬೆಳಗ್ಗೆ 9.30ಕ್ಕೆ, ತಿಲಕ್‌ನಗರದ ಅಂದರ ಶಾಲೆಯ ಮಕ್ಕಳಿಗೆ ತಿಂಡಿ ವಿತರಣೆ, 10.30ಕ್ಕೆ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ರಕ್ತದಾನ ಶಿಬಿರ, 11.30ಕ್ಕೆ ಮಂಡಿ ಮೊಹಲ್ಲಾದ ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಮೈಸೂರು ಶಾಖಾ ಮಠ:** ಶ್ರೀ ಆದಿಚುಂಚನಗಿರಿ ಶಾಖಾ ಮಠದ ನೂತನ ಕಟ್ಟಡ ಹಾಗೂ ಬಿಜಿಎಸ್ ಸಾಂಸ್ಕೃತಿಕ ಭವನ ಮತ್ತು ಉಚಿತ ವಿದ್ಯಾರ್ಥಿನಿಲಯ ಲೋಕಾರ್ಪಣೆ, ದಿವ್ಯ ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ.ನಿರ್ಮಲಾ ನಂದನಾಥ ಮಹಾಸ್ವಾಮೀಜಿಗಳು, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಾಜೀ, ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ಸುದರ್ಶನ ನರಸಿಂಹ ಕ್ಷೇತ್ರದ ಸಂಸ್ಥಾಪಕ ಪ್ರೊ. ಡಾ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜಿಎಸ್ ಸಾಂಸ್ಕೃತಿಕ ಭವನ ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಉಚಿತ ವಿದ್ಯಾರ್ಥಿನಿಲಯ ಉದ್ಘಾಟನೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜಿಎಸ್ ಅತಿಥಿಗೃಹ ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, **ಗ್ರಂಥಗಳ ಬಿಡುಗಡೆ:** ಗೋರಕ್ಷನಾಥರ ಸಿದ್ಧ ಸಿದ್ಧಾಂತ ಪದ್ಧತಿ: ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಗೋರಕ್ಷನಾಥರ ತತ್ವದರ್ಶನ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಸಾಹುಕಾರ್ ಚನ್ನಯ್ಯ: ಶಾಸಕ ಜಿ.ಟಿದೇವೇಗೌಡ, ಕೆದಂಬಾಡಿ ರಾಮೇಗೌಡರು: ಲೋಕಸಭಾ ಸದಸ್ಯ ಪ್ರತಾಪ್‌ಸಿಂಹ, ಮುಖ್ಯ ಅತಿಥಿಗಳು: ಸಂಸದ ವಿ.ಶ್ರೀನಿವಾಸ ಪ್ರಸಾದ್, ಮೇಯರ್ ಶಿವಕುಮಾರ್, ಶಾಸಕರುಗಳಾದ ತನ್ವೀರ್ ಸೇಠ್, ಶ್ರೀವತ್ಸ, ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ರಮೇಶ್‌ಬಾಬು ಬಂಡಿಸಿದ್ದೇಗೌಡ, ದರ್ಶನ್ ಧ್ರುವನಾರಾಯಣ್, ದರ್ಶನ್ ಪುಟ್ಟಣ್ಣಯ್ಯ, ಸ್ಥಳ: ಶ್ರೀ ಆದಿಚುಂಚನಗಿರಿ ಶಾಖಾ ಮಠ, ಲಕ್ಷ್ಮಿಕಾಂತ ಸ್ವಾಮಿ ದೇವಸ್ಥಾನ, ಹೆಬ್ಬಾಳು, ಬೆಳಗ್ಗೆ 11 ಗಂಟೆಯಿಂದ.

■ **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು:** ಪ್ರಥಮ ವರ್ಷದ ಬಿಎ, ಬಿಕಾಂ, ಬಿಬಿಎ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ, ಉದ್ಘಾಟನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ. ಪುಟ್ಟಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಮತ್ತು ಮಹಿಳೆಯರಲ್ಲಿ ಋತುಬಂಧನ ಸಮಸ್ಯೆಗಳು ಕುರಿತು ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘ, ಕರ್ನಾಟಕ ರಾಜ್ಯ ಶಾಮಿಯಾನ ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘ, ಆಲ್ ಇಂಡಿಯಾ ಟೆಂಟ್ ಅಂಡ್ ಡೆಕೋರೇಟರ್ಸ್ ವೆಲ್‌ಫೇರ್ ಅಸೋಸಿಯೇಷನ್:** ಸಾಂಸ್ಕೃತಿಕ ನಗರ ಮೈಸೂರು ವೈಭವ ರಾಜ್ಯ ಮಟ್ಟದ 3ನೇ ಮಹಾ ಅಧಿವೇಶನ, ಅಧ್ಯಕ್ಷತೆ: ರಾಜ್ಯ ಶಾಮಿಯಾನ ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆರ್.ಲಕ್ಷ್ಮಣ್, ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ಅಧ್ಯಕ್ಷ ಶಿವಕುಮಾರ್, ಸ್ಥಳ: ದಸರಾ ವಸ್ತುಪ್ರದರ್ಶನಾಲಯ, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್, ಗೀತಾ ಶಿಶು ಶಿಕ್ಷಣ ಸಂಘ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮನ್:** ಪ್ರಥಮ ವರ್ಷ ಬಿಇ ವಿದ್ಯಾರ್ಥಿಗಳ ತರಗತಿ ಉದ್ಘಾಟನಾ ಕಾರ್ಯಕ್ರಮ, ಮುಖ್ಯ ಅತಿಥಿ: ಉಡುಪಿಯ ಪೇಜಾವರ ಮಠದ ಜಗದ್ಗುರು ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಸ್ಥಳ: ರಂಗಮಂಟಪ, ಶ್ರೀ ಬಿ.ಎಸ್.ಪಂಡಿತ್ ಮೆಮೋರಿಯಲ್ ಬ್ಲಾಕ್, ಬೆಳಗ್ಗೆ 10.30ಕ್ಕೆ

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ:** ಸಿದ್ಧಸಮಾಧಿ ಯೋಗ ಶಿಬಿರ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ರಿಂದ.

■ **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಧನ್ವಂತರಿ ಜಯಂತಿ ಅಂಗವಾಗಿ, ಸಪ್ತರಾತ್ರೋತ್ಸವ ಪ್ರಯುಕ್ತ ಶ್ರೀ ಭಗವದ್ಗೀತಾ ಅಭಿಯಾನ, ಸುಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ ಬಾದರಾಯಣಾಚಾರ್ಯ ಅವರಿಂದ ಭಗವದ್ಗೀತೆ ಅಧ್ಯಾಯ–11 ಕುರಿತು ಪ್ರವಚನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿದನ, ಉತ್ತರಾದಿ ಮಠ, ಸಂಜೆ 6 ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ:** ಯಶಸ್ವಿನಿ ಆರೋಗ್ಯ ಯೋಜನೆ ಲೋಕಾರ್ಪಣೆ, ಹೊಸ ಕಾರ್ಪೊರೇಟ್ ಆಫೀಸ್ ಉದ್ಘಾಟನೆ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶನ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ವಿದ್ವಾನ್ ಕೃ.ರಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸಂಜೆ 6 ಗಂಟೆ, ಪ್ರವಚನ ಸಂಜೆ 6.30ಕ್ಕೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು.

# ಗಾರ್ಮೆಂಟ್ ಸೇಲ್ಸ್ ಮೂರು ದಿನ ಮಾತ್ರ



ಮೈಸೂರು, ಸೆ. 10– ಇಲ್ಲಿಯ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಆಯೋಜಿಸಿರುವ ರಾಷ್ಟ್ರೀಯ ಮತ್ತು ಅಂತಾ ರಾಷ್ಟ್ರೀಯ ಗುಣಮಟ್ಟದ ಬ್ರ್ಯಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೇಳವು ಮೂರು ದಿನ ಮಾತ್ರ ಇರಲಿದೆ.

ಮಹಿಳೆಯರು, ಪುರುಷರು ಹಾಗೂ ಮಕ್ಕಳ ರೆಡಿಮೇಡ್ ಬಟ್ಟೆಗಳ ಮೇಲೆ ಭಾರೀ ರಿಯಾಯಿತಿ ನೀಡಲಾಗಿದೆ. 10 ಸಾವಿರಕ್ಕಿಂತಲೂ ಮಿಗಿಲಾದ ವಿವಿಧ ಪ್ರಕಾರದ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್ಸ್, ಟಿ–ಶರ್ಟ್ಸ್, ಲೋವರ್ ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೋಗಳು ಕೇವಲ 150 ರೂ.ನಿಂದ 350 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ ಹೆಸರಾಂತ ಕಂಪನಿಗಳ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್, ಇಂಡಿಯನ್ ಟೆರೆನ್, ಇಂಡಿಗೋ ನೇಷನ್, ಡ್ಯಾನಿಯಲ್ ಹೆಕ್ಟರ್, ಬಫೆಲೋ, ಇಜೋಡ್, ಸೆಲ್ಯೂ ಲರ್‌ಗಳ ಜೀನ್ಸ್ ಪ್ಯಾಂಟ್ಸ್, ಕಾಟನ್ ಪ್ಯಾಂಟ್ಸ್, ಫಾರ್ಮಲ್ ಶರ್ಟ್ಸ್, ಟಿ–ಶರ್ಟ್ಸ್, ಲೋವರ್ ಇತ್ಯಾದಿಗಳು ಕೇವಲ 499 ರೂ.ನಿಂದ 999 ರೂ.ವರೆಗೆ ಲಭ್ಯವಿದೆ. ಬ್ರ್ಯಾಂಡೆಡ್ ಲೇಡಿಸ್ ಕುರ್ತಾ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು ಬಿಬಾ, ಜ್ಯಾಕ–ಜೋನಸ್, ವಿರೋಮೋಡಾ, ಎಬಾಪ್ ಕಂಪನಿಗಳ ಉತ್ಪನ್ನಗಳು ಕೇವಲ 200, 400 ಮತ್ತು 600 ರೂ.ಗಳಲ್ಲಿ ದೊರೆಯುತ್ತಿವೆ ಆಕರ್ಷಕ ರಾಜಾಸ್ಥಾನ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಪಿಲ್ಲೋ ಕವರ್, ಸೋಫಾ ಕವರ್ ಕೈಗೆಟಕುವ ದರದಲ್ಲಿ ದೊರೆಯುತ್ತವೆ. ಲೇಡಿಸ್ ಮತ್ತು ಜೆಂಟ್ಸ್ ಅಂಡರ್ ಕಾರ್ಮೆಂಟ್ಸ್ ಕೇವಲ 60 ರೂ.ನಿಂದ 125 ರೂ.ವರೆಗೆ ಸಿಗುತ್ತವೆ ಮೇಳಕ್ಕೆ ಮಂಗಳವಾರ ಕೊನೆಯ ದಿನವಾಗಿದ್ದು, ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಲು ವ್ಯವಸ್ಥಾಪಕ ಗಜೇಂದ್ರ ಜಾಜಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಇಂಡೋ-ಪಾಕ್ ಪಂದ್ಯಕ್ಕೆ ಮಳೆ ಅಡ್ಡಿ

# ಮೀಸಲು ದಿನ ಸೋಮವಾರಕ್ಕೆ ಪಂದ್ಯ ಮುಂದೂಡಿಕೆ

ಕೊಲಂಬೊ, ಸೆ.10– ಸೂಪರ್ 4 ಹಂತದ ಭಾರತ–ಪಾಕಿಸ್ತಾನ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಪಂದ್ಯವನ್ನು ಮೀಸಲು ದಿನವಾದ ಸೋಮವಾರ(ಸೆ.11)ಕ್ಕೆ ಮುಂದೂಡಲಾಗಿದೆ.

ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 24.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿದ್ದ ವೇಳೆ ಭಾರೀ ಮಳೆ ಸುರಿದ ಪರಿಣಾಮ ಪಂದ್ಯ ಸ್ಥಗಿತಗೊಳಿಸಲಾಯಿತು. ಮಳೆ ನಿಂತ ಬಳಿಕ ಅಂಪೈರ್‌ಗಳು ಸಾಕಷ್ಟು ಪರಿಶೀಲನೆ ನಡೆಸಿದರೂ ಮೈದಾನ ಸಂಪೂರ್ಣ ತೇವಾಂಶದಿಂದ ಕೂಡಿದ್ದರಿಂದ ಮೀಸಲು ದಿನವಾದ ಸೋಮವಾರಕ್ಕೆ ಪಂದ್ಯವನ್ನು ಮುಂದೂಡಲಾಯಿತು.

ಸೋಮವಾರ (ಸೆ.11) ಪಂದ್ಯ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಲಿದ್ದು, ಮಳೆಯಾಗದೇ ಇದ್ದರೆ ಸಂಪೂರ್ಣ 50 ಓವರ್‌ಗಳ ಆಟ ನಡೆಯಲಿದೆ. ಭಾರತ ತಂಡ 24.1 ಓವರ್‌ಗಳಿಂದಲೇ ತನ್ನ ಇನಿಂಗ್ಸ್ ಮುಂದುವರಿಸಲಿದೆ. ಸೋಮವಾರವೂ ಮಳೆಯಾದರೆ ಓವರ್‌ಗಳಿಗೆ ಕೊಕ್ಕೆ ಹಾಕಿ ಪಂದ್ಯ ಆಯೋಜಿಸುವ ಕಡೆಗೆ ಪಂದ್ಯದ ಅಧಿಕಾರಿಗಳು ಲೆಕ್ಕಾಚಾರ ಮಾಡಿದ್ದಾರೆ. ಇದಕ್ಕೂ ಮುನ್ನಾ ಪಲ್ಲಕೆಲೆಯಲ್ಲಿ ನಡೆದ ಭಾರತ ಹಾಗೂ ಪಾಕಿಸ್ತಾನ ಲೀಗ್ ಹಂತದ ಪಂದ್ಯ ಮಳೆಯಿಂದ ರದ್ದಾಗಿತ್ತು ಹೀಗಾಗಿ ಸೂಪರ್ 4 ಹಂತದ ಪಂದ್ಯಗಳನ್ನು ಪಲ್ಲಕೆಲೆಯಿಂದ ಕೊಲೊಂಬೊಗೆ ಸ್ಥಳಾಂತರಿಸಲಾಗಿತ್ತು ಇದೀಗ ಕೊಲೊಂಬೊದಲ್ಲೂ ಮಳೆ ಅಡ್ಡಿಯಾಗಿದೆ.

ಮಳೆ ಆರ್ಭಟಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಆರಂಭಿಕರಾದ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 121 ರನ್‌ಗಳ ಜೊತೆಯಾಟವಾಡುವ ಮೂಲಕ ಭರ್ಜರಿ ಆರಂಭ ಒದಗಿಸಿದರು. ಈ ವೇಳೆ ಅರ್ಧಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ರೋಹಿತ್ 49 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಒಳಗೊಂಡ 56ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ ಶುಭ್‌ಮನ್ ಗಿಲ್ ಕೂಡ 10 ಬೌಂಡರಿ ಒಳಗೊಂಡ 58 ರನ್ ಗಳಿಸಿ ಔಟಾದರು. ಭಾರತ 24.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿದ್ದ ವೇಳೆ ಭಾರೀ ಮಳೆ ಸುರಿದಿದ್ದು ಆ ಬಳಿಕ ಪಂದ್ಯ ಮುಂದುವರಿಸಲು ಸಾಧ್ಯವಾಗಲೇ ಇಲ್ಲ. ಹೀಗಾಗಿ ಪಂದ್ಯವನ್ನು ನಾಳೆಗೆ ಮುಂದೂಡಲಾಯಿತು. ವಿರಾಟ್ ಕೊಹ್ಲಿ 8, ಕನ್ನಡಿಗ ಕೆ.ಎಲ್. ರಾಹುಲ್ 17ರನ್ ಗಳಿಸಿದ್ದು, ಸೋಮವಾರ ಆಟ ಆರಂಭಿಸಲಿದ್ದಾರೆ.















# ಕೊಡಗಲ್ಲಿ ಆನೆಗಳ ಹಿಂಡು ಪ್ರತ್ಯಕ್ಷ

## ಬಾಡಗ ಬಾಣಂಗಾಲ ಸುತ್ತಮುತ್ತ ತೋಟಗಳಲ್ಲಿ ಓಡಾಡಿಕೊಂಡಿರುವ 30ಕ್ಕೂ ಹೆಚ್ಚು ಆನೆಗಳು, ಜನರಲ್ಲಿ ಆತಂಕ



ಸಿದ್ದಾಪುರ, ಸೆ.10– ಬಾಡಗ ಬಾಣಂಗಾಲ ಕಾಫಿ ತೋಟದಲ್ಲಿ ಹಾಡಹಗಲಿನಲ್ಲೇ 30ಕ್ಕೂ ಹೆಚ್ಚು ಕಾಡಾನೆಗಳು ಪ್ರತ್ಯಕ್ಷಗೊಂಡಿದ್ದು, ಕಾರ್ಮಿಕರು ಮತ್ತು ನಿವಾಸಿಗಳು ಆತಂಕಗೊಂಡಿದ್ದಾರೆ.

ಕಳೆದ ಕೆಲ ದಿನಗಳಿಂದ ಮಾಲ್ದಾರೆ, ಮೈಲಾಪುರ, ಕರಡಿಗೋಡು, ಬಾಡಗ ಬಾಣಂಗಾಲ,ಹುಂಡಿ,ಮಟ್ಟಂ, ಬಜಕೊಲ್ಲಿ ಸೇರಿದಂತೆ ಹಲವಡೆ ಕಾಡಾನೆಗಳ ಹಿಂಡು ದಿನನಿತ್ಯ ಕಾಣಿಸಿಕೊಳ್ಳುತ್ತಿದ್ದು, ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ನೆಮ್ಮದಿ ಯಾಗಿ ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣ ವಾಗಿದೆ. ಬಾಣಂಗಾಲ ಆರ್ಗನಿಕ್ ತೋಟದಲ್ಲಿ ಪ್ರತ್ಯಕ್ಷಗೊಂಡ ಮೂವತ್ತಕ್ಕೂ ಹೆಚ್ಚು ಕಾಡಾನೆಗಳನ್ನು ಕಂಡ ಕಾರ್ಮಿಕರು ಭಯಭೀತ ರಾಗಿ ಮನೆಗೆ ಹಿಂತಿರುಗಿದ್ದಾರೆ. ಕಾಫಿ ತೋಟಗಳಲ್ಲಿ ಮರಿಯಾನೆ ಗಳೊಂದಿಗೆ ಬೀಡು ಬಿಟ್ಟಿರುವ ಕಾಡಾನೆಗಳ ಹಿಂಡಿನಿಂದ ಅಪಾರ ಪ್ರಮಾಣದ ಕೃಷಿ ಫಸಲುಗಳು ನಾಶವಾಗುವುದರ ಮೂಲಕ ಕಾರ್ಮಿಕರು, ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡಿವೆ.

ಸುತ್ತಮುತ್ತಲ ಭಾಗದ ವಿದ್ಯಾರ್ಥಿಗಳು ಶಾಲೆಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದ ಶಿಕ್ಷಣದಿಂದ ವಂಚಿತರಾಗಿ ಮನೆಯಲ್ಲಿ ಉಳಿದುಕೊಳ್ಳಬೇಕಾದ ಪರಿಸ್ಥಿತಿಯು ನಿರ್ಮಾಣವಾಗಿದೆ. ಹೊಟ್ಟೆಪಾಡಿನ ಜೀವನಕ್ಕಾಗಿ ತೋಟದ ಕೆಲಸಕ್ಕೆ ತೆರಳುವ ಕಾರ್ಮಿಕರು ಕಾಡುಪ್ರಾಣಿಗಳ ಭಯದ ನಡುವೆ ಕೆಲಸ ನಿರ್ವಹಿಸಬೇಕಾಗಿದೆ. ಇತ್ತೀಚೆಗಷ್ಟೇ ಹಾಡಹಗಲಿನಲ್ಲಿಯೇ ಮಟ್ಟ ಗ್ರಾಮದಲ್ಲಿ ಮಹಿಳೆಯೊಬ್ಬಳನ್ನು ಬಲಿ ತೆಗೆದುಕೊಂಡ ನಂತರ ಇದೀಗ ಕಾಡಾನೆಗಳು ಗುಂಪುಗಳಾಗಿ ಕಾಣಿಸಿಕೊಳ್ಳುತ್ತಿವೆ.

ಕಾಡಾನೆಗಳ ಗುಂಪು ಒಂದು ತೋಟದಿಂದ ಮತ್ತೊಂದು ತೋಟ, ಒಂದು ಊರಿನಿಂದ ಮತ್ತೊಂದು ಊರಿಗೆ ರಾಜಾರೋಷವಾಗಿ ರಸ್ತೆಯನ್ನು ದಾಟಿಕೊಂಡು ಓಡಾಡುತ್ತಿದೆ. ಜೊತೆಗೆ ಆನೆಗಳ ಘೀಳಿಡುವ ಶಬ್ದವೂ ಕೂಡ ಕೇಳಿ ಜನರು ಆತಂಕಗೊಂಡಿದ್ದಾರೆ. ಇದರಿಂದ ಫಸಲುಗಳು ಮತ್ತು ಜನರ ಜೀವಕ್ಕೆ ರಕ್ಷಣೆ ಇಲ್ಲದಂತಾಗಿದೆ.

ಕೆಲ ದಿನಗಳಿಂದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಯುತ್ತಿದೆಯಾದರೂ ಆನೆಗಳು ಕಾಡಿಗೆ ಹೋದರು ಮತ್ತೆ ವಾಪಸ್ ಬರುತ್ತಿವೆ. ಕಾಡಾನೆಗಳ ಹಾವಳಿ ಶಾಶ್ವತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

# ಕತ್ತಿಯಿಂದ ಕಡಿದು ಪತ್ನಿ ಕೊಂದ ಪತಿ ಬಂಧನ

## ಕ್ಷುಲ್ಲಕ ವಿಚಾರಕ್ಕೆ ನಡೆದ ಜಗಳ ಕೊಲೆಯಲ್ಲಿ ಅಂತ್ಯ

ಮಡಿಕೇರಿ, ಸೆ.10– ಪತಿ ಪತ್ನಿ ನಡುವೆ ಕ್ಷುಲ್ಲಕ ವಿಚಾರಕ್ಕೆ ನಡೆದ ಜಗಳ ಪತ್ನಿಯ ಕೊಲೆಯಲ್ಲಿ ಅಂತ್ಯವಾದ ಘಟನೆ ನಗರದ ಹೃದಯ ಭಾಗದಲ್ಲಿ ಶನಿವಾರ ರಾತ್ರಿ ನಡೆದಿದೆ.

ನಗರದ ಕೈಗಾರಿಕಾ ಬಡಾವಣೆಯಲ್ಲಿ ವಾಸವಿದ್ದ ಪಶ್ಚಿಮ ಬಂಗಾಳ ರಾಜ್ಯದ ಚಾರ್ಮುಡಿ ಬಜಾರ್ ಮೂಲದ ರಾಧಿಕ ಸುಬ್ಬ(34) ಹತ್ಯೆಯಾದ ಮಹಿಳೆಯಾಗಿದ್ದು, ಆಕೆಯ ಪತಿ ರೋಷನ್ ಚೆತ್ರಿ(28) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಮಡಿಕೇರಿ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

**ಘಟನೆ ವಿವರ:** ಈ ದಂಪತಿ ನಗರದ ಹೊರ ವಲಯದ ರೆಸಾರ್ಟ್ ಒಂದರಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದು, ಪ್ರತಿ ದಿನ



ಜಗಳವಾಡುತ್ತಿದ್ದರು ಎನ್ನಲಾಗಿದೆ. ಬಳಿಕ ಇವರು ನಗರದ ಪ್ರತಿಷ್ಠಿತ ಹೋಟೆಲ್ ಮತ್ತು ಲಾಡ್ಜ್ ಒಂದರಲ್ಲಿ ಕೆಲಸಕ್ಕೆ ಸೇರಿದ್ದು, ಕೈಗಾರಿಕಾ ಬಡಾವಣೆಯಲ್ಲಿ ವಾಸವಾಗಿದ್ದರು.

ಶನಿವಾರ ರಾತ್ರಿ 11 ಗಂಟೆಯ ವೇಳೆಗೆ ಮನೆಯಲ್ಲಿಯೇ ಪತಿ ಪತ್ನಿಯ ನಡುವೆ ಕ್ಷುಲ್ಲಕ ವಿಚಾರಕ್ಕೆ ಜಗಳ ಪ್ರಾರಂಭವಾಗಿದೆ. ಈ ವೇಳೆ ಪತಿ ರೋಷನ್ ಚೆತ್ರಿ ಕತ್ತಿಯಿಂದ ಪತ್ನಿ ರಾಧಿಕ ಸುಬ್ಬ ಅವರ ಕುತ್ತಿಗೆಯ ಹಿಂಭಾಗಕ್ಕೆ ಕಡಿದಿದ್ದಾನೆ. ಈ ವೇಳೆ ಅಲ್ಲಿ ಕೆಲಸ ಮಾಡುತ್ತಿದ್ದ ಕೆಲ ಯುವಕರು ಲಾಡ್ಜ್ ಮಾಲೀಕರಿಗೆ ಮಾಹಿತಿ ತಿಳಿಸಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಂಭೀರವಾಗಿ ಗಾಯಗೊಂಡು ತೀವ್ರ ರಕ್ತಸ್ರಾವದಿಂದ ರಾಧಿಕ ಸುಬ್ಬ ಅವರು ಚಿಕಿತ್ಸೆ ಫಲಿಸದೆ ಜಿಲ್ಲಾಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ನಗರ ಠಾಣೆ ಪೊಲೀಸರು ಭೇಟಿ ನೀಡಿ ಮಹಜರು ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಸಾರ್ವಜನಿಕರಿಗೆ ತೊಂದರೆಯಾಗದಂತೆ ಗೌರಿ–ಗಣೇಶ ಹಬ್ಬ ಆಚರಿಸಿ



ಸುಂಟಿಕೊಪ್ಪ, ಸೆ.10– ಶ್ರೀಗೌರಿ ಗಣೇಶ ಹಬ್ಬ ಆಚರಣೆಯ ಸಂದರ್ಭ ಆಯೋಜಕರು ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕು. ಅದೇ ರೀತಿ ಹಬ್ಬದ ಸಂಸ್ಕೃತಿಯನ್ನು ಎತ್ತಿ ಹಿಡಿಯುವುದು ಮುಖ್ಯ ಎಂದು ಕುಶಾಲನಗರ ವೃತ್ತ ನಿರೀಕ್ಷಕ ರಾಜೇಶ್‌ಕೋಟ್ಯಾನ್ ಹೇಳಿದರು.

ಇಲ್ಲಿನ ಗುಂಡುಗುಟ್ಟಿ ಮಂಜುನಾಥಯ್ಯ ಮೀನಾಕ್ಷಮ್ಮ ಕಲ್ಯಾಣ ಮಂಟಪದಲ್ಲಿ ಸುಂಟಿಕೊಪ್ಪ ಹೋಬಳಿ ವ್ಯಾಪ್ತಿಯ ಶ್ರೀಗೌರಿ ಗಣೇಶ ಆಚರಣಾ ಸಮಿತಿಗಳ ಪೂರ್ವ ನಿಯೋಜಿತ ಸಭೆಯಲ್ಲಿ ರಾಜೇಶ್ ಕೋಟ್ಯಾನ್ ಮಾತನಾಡಿ, ಸರಕಾರ ನೀಡಿರುವ ಮಾರ್ಗ ಸೂಚಿಯಂತೆ ಗ್ರಾಮಗಳಲ್ಲಿ ಗೌರಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಆಯೋಜಕ ಸಮಿತಿಗಳು ಪೊಲೀಸ್ ಠಾಣೆ ಸೇರಿದಂತೆ ವಿವಿಧ ಇಲಾಖೆಗಳಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಂಡಿರಬೇಕು. ಮುಂಜಾಗ್ರತಾ ಕ್ರಮವಾಗಿ ಶ್ರೀ ಗೌರಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಸ್ಥಳದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವುದರಿಂದ ಮುಂದಾಗಬಹುದಾದ ಅಹಿತಕರ ಘಟನೆಗಳು ಸಂಭವಿಸದಂತೆ ತಡೆಯಲು ಸಹಕಾರಿಯಾಗಲಿದೆ ಎಂದರು. ವಿದ್ಯುತ್ ಸಂಪರ್ಕವನ್ನು ಅಳವಡಿಸಿಕೊಳ್ಳುವಾಗ ಸೂಕ್ಷ್ಮತೆಯನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಶ್ರೀ ಗೌರಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಸ್ಥಳದಲ್ಲಿ ಸಮಿತಿಯ ಇಬ್ಬರು ಪದಾಧಿಕಾರಿಗಳು ಕಾವಲು ಇರಿಸುವಂತೆ ಸೂಚಿಸಿದರು. ಸ್ಥಳದ ಪೂರ್ವದ ಮಾಹಿತಿಯನ್ನು ಪಡೆದಿರಬೇಕು. ಮೂರ್ತಿಗಳ ವಿಸರ್ಜನೆಯ ವೇಳೆ ಅಲಂಕೃತ ಮಂಟಪ ಮೆರವಣಿಗೆ ತೆರಳುವ ಮಾರ್ಗಗಳ ಮಾಹಿತಿ ನಿಗದಿಗೊಂಡಿರುವ ಸಮಯವನ್ನು ಪೊಲೀಸ್ ಠಾಣೆಗೆ ತಿಳಿಸುವಂತೆ ಅವರು ಸೂಚಿಸಿದರು. ಈ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಶ್ರೀಧರ್ ಸರಕಾರದಿಂದ ಹೊರಡಿಸಿರುವ ಕಾನೂನು ಅನುಮತಿ ಪತ್ರಗಳ ಬಗ್ಗೆ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಎಸ್‌ಐ ಸ್ವಾಮಿ, ಎಎಸ್‌ಐ ಶ್ರೀನಿವಾಸ್, ಪಂಚಾಯಿತಿ ಸದಸ್ಯರಾದ ಸೋಮನಾಥ್, ಕೊಡಗರಹಳ್ಳಿ ಸುನಿಲ್, ಪೊಲೀಸ್ ಸಿಬ್ಬಂದಿಗಳು ಹಾಗೂ ವಿವಿಧ ಗ್ರಾಮಗಳ ಉತ್ಸವ ಆಯೋಜಕರು ಹಾಜರಿದ್ದರು.

# ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ; ಕಾರಿನಲ್ಲಿದ್ದವರು ಸಣ್ಣ–ಪುಟ್ಟ ಗಾಯಗಳಿಂದ ಪಾರು




ಮಡಿಕೇರಿ, ಸೆ.10– ನಗರದ ಚೇನ್ ಗೇಟ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಒಂದು ಟ್ಯಾಕ್ಸಿ ಕಾರಿಗೆ ಡಿಕ್ಕಿಯಾದ ಘಟನೆ ಭಾನುವಾರ ಸಂಜೆ ನಡೆದಿದೆ. ಅಪಘಾತದಲ್ಲಿ ಕಾರಿಗೆ ತೀವ್ರ ಹಾನಿಯಾಗಿದ್ದು, ಕಾರು ಚಾಲಕ ಮತ್ತು ಅದರಲ್ಲಿದ್ದ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಡಿಕೇರಿಯಿಂದ ಹಾಸನಕ್ಕೆ ತೆರಳುತ್ತಿದ್ದ ಸರ್ಕಾರಿ ಬಸ್ ಚೇನ್ ಗೇಟ್ ಬಳಿ ಕಾರ್(ಕೆ.ಎ.12–ಎ–2750) ಮುಂಭಾಗಕ್ಕೆ ಡಿಕ್ಕಿ ಹೊಡೆದಿದೆ. ಬಸ್ ಚಾಲಕನ ಅಜಾಗರೂಕತೆಯ ಚಾಲನೆಯಿಂದಾಗಿ ಅಪಘಾತ ಸಂಭವಿಸಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಘಟನಾ ಸ್ಥಳಕ್ಕಾಗಮಿಸಿದ ಸಂಚಾರಿ ಪೊಲೀಸರು ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮಕೈಗೊಂಡಿದ್ದಾರೆ.

# ವಿದ್ಯುತ್ ಸ್ಪರ್ಶದಿಂದ ಚೆಸ್ಕಾಂ ಸಿಬ್ಬಂದಿ ಸಾವು



ಮಡಿಕೇರಿ, ಸೆ.10– ವಿದ್ಯುತ್ ಸ್ಪರ್ಶಗೊಂಡು ಚೆಸ್ಕಾಂ ಸಿಬ್ಬಂದಿಯೊಬ್ಬರು ಮೃತಪಟ್ಟಿರುವ ಘಟನೆ ವಿರಾಜಪೇಟೆಯ ಕುಟ್ಟಂದಿ ಗ್ರಾಮದಲ್ಲಿ ನಡೆದಿದೆ. ಬಾಗಲಕೋಟೆ ಜಿಲ್ಲೆಯ ಮಾರ್ನಾಲು ಮೂಲದ ಬಸವರಾಜ್ ತೆಗ್ಗಿ(27) ಎಂಬವರೇ ಮೃತ ದುರ್ದೈವಿಯಾಗಿದ್ದಾರೆ. ಭಾನುವಾರ ಬೆಳಗ್ಗೆ ಕುಟ್ಟಂದಿ ಗ್ರಾಮದಲ್ಲಿ ಮನೆಯೊಂದಕ್ಕೆ ವಿದ್ಯುತ್ ಕಂಬದಿಂದ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ಲೈನ್ ಸ್ಪರ್ಶ ಗೊಂಡಿದೆ. ಘಟನೆಯಿಂದ ಬಸವರಾಜ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸವರಾಜ್ ಅವರು ಕಳೆದ 5 ವರ್ಷಗಳಿಂದ ವಿರಾಜಪೇಟೆ ಚೆಸ್ಕಾಂನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಸ್ಥಳ ಮಹಜರು ನಡೆಸಿದ ಬಳಿಕ ಮೃತದೇಹವನ್ನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

# ವಿಜೃಂಭಣೆಯ ಶ್ರೀಬೋಳಾರೆ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ, ಸೆ.10– ತಾಲೂಕಿನ ಬೆಟ್ಟದಹೊಸೂರು ಗ್ರಾಮದ ಶ್ರೀಬೋಳಾರೆ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಕಡೇ ಶ್ರಾವಣ ಶನಿವಾರ ಹಿನ್ನೆಲೆಯಲ್ಲಿ ಚಿಕ್ಕ ತಿರುಪತಿ ಎಂದೇ ಈ ಭಾಗದಲ್ಲಿ ಖ್ಯಾತಿ ಪಡೆದಿರುವ ಶ್ರೀಬೋಳಾರೆ ರಂಗನಾಥಸ್ವಾಮಿಯವರ 9ನೇ ವರ್ಷದ ಬ್ರಹ್ಮ ರಥೋತ್ಸವಕ್ಕೆ ಶಾಸಕ ಹೆಚ್.ಟಿ. ಮಂಜು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ದೇವಾಲಯಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆ. ಕಳೆದ 9 ವರ್ಷಗಳಿಂದ ಸುತ್ತಮುತ್ತು ಗ್ರಾಮಗಳ ಗ್ರಾಮಸ್ಥರು ಶ್ರೀ ಬೋಳಾರೆ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಇದೇ ವೇಳೆ ಶ್ರೀ ಕ್ಷೇತ್ರದಲ್ಲಿ ನಿರ್ಮಿಸುತ್ತಿರುವ ಸಮುದಾಯ ಭವನಕ್ಕೆ ಸೂಕ್ತ ಅನುದಾನ ಕೊಡಿಸುವ ಭರವಸೆ ನೀಡಿದರು.

ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಟ್ರಸ್ಟ್ ಅಧ್ಯಕ್ಷ ವೆಂಕಟೇಶ್ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀಬೋಳಾರೆ ರಂಗನಾಥ ಸ್ವಾಮಿ ಬ್ರಹ್ಮ ರಥೋತ್ಸವ ನಡೆಯುತ್ತಿದ್ದು, ಲಕ್ಷಾಂತರ ಭಕ್ತರು ದೇವರ ದರ್ಶನ ಪಡೆದು ಪುನೀತರಾಗಿದ್ದಾರೆ ಎಂದರು.

ಈ ವೇಳೆ ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಕೆಎಂಎಫ್ ಹಾಗೂ ಮೈಸೂರು ಮಿಲ್ಕ್ ಫೆಡರೇಶನ್ ನಿರ್ದೇಶಕ ಎಸ್.ಸಿ.ಅಶೋಕ್, ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಟಿ.ವೆಂಕಟೇಶ್, ಗೌರವಾಧ್ಯಕ್ಷ ಬಿ.ಪುಟ್ಟಸ್ವಾಮಿ, ಉಪಾಧ್ಯಕ್ಷ ರಂಗಸ್ವಾಮಿ, ಬೆಟ್ಟೇಗೌಡ, ವೆಂಕಟರಮಣೇಗೌಡ, ಕಾರ್ಯದರ್ಶಿ ಸುದರ್ಶನ್, ಸಹ ಕಾರ್ಯದರ್ಶಿ ಮಹೇಶ್, ಸಂಘಟನಾ ಕಾರ್ಯದರ್ಶಿ ಜವರೇಗೌಡ, ರಂಗಸ್ವಾಮಿ, ಪಾಪಯ್ಯ, ರಾಮಕೃಷ್ಣಸ್ವಾಮಿ, ಬಿ.ಟಿ.ಕೃಷ್ಣೇಗೌಡ, ಹಾಲೇಗೌಡ, ಕುಂಟೀಗೌಡ, ದೇವರಾಜು, ಜಿಪಂ ಮಾಜಿ ಸದಸ್ಯೆ ಸರ್ವಮಂಗಳಾ, ತಾಪಂ ಮಾಜಿ ಸದಸ್ಯೆ ಮೀನಾಕ್ಷಿ, ಜಯಮ್ಮ, ಯಳವೇಗೌಡ, ಬೂಕನಕೆರೆ ಗ್ರಾಪಂ ಅಧ್ಯಕ್ಷ ಶ್ಯಾಂ ಪ್ರಸಾದ್, ಐಚನಹಳ್ಳಿ ಗ್ರಾಪಂ ಅಧ್ಯಕ್ಷೆ ಪ್ರಕೃತಿ, ಗ್ರಾಪಂ ಸದಸ್ಯ ಪ್ರಕಾಶ್, ಜವರಾಯಿಗೌಡ, ಸೋಮಣ್ಣ, ರಾಜೇಗೌಡ, ರೇವಣ್ಣ ಆರಕ್ಷಕ ನಿರೀಕ್ಷಕರಾದ ಜಗದೀಶ್, ಆರಕ್ಷಕ ಉಪ ನಿರೀಕ್ಷಕ ಪ್ರಮೋದ್, ಸುಬ್ಬಯ್ಯ, ರಾಜಸ್ವ ನಿರೀಕ್ಷಕಿ ಚಂದ್ರಕಲಾ ಸೇರಿದಂತೆ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

# ಯಾವುದೇ ಧರ್ಮದ ಬಗ್ಗೆ ಕೀಳಾಗಿ ಮಾತಾಡುವುದು ತಪ್ಪು



ಮಂಡ್ಯ, ಸೆ.10– ಸನಾತನ ಧರ್ಮ ಸೇರಿದಂತೆ ಯಾವುದೇ ಧರ್ಮದ ಬಗ್ಗೆ ಕೀಳಾಗಿ ಮಾತನಾಡುವುದು ತಪ್ಪು. ಎಲ್ಲಾ ಧರ್ಮಕ್ಕೂ ಒಂದು ಗೌರವ, ಮರ್ಯಾದೆ ಇದೆ. ದೇಶದಲ್ಲಿ ಸನಾತನ ಧರ್ಮ ಎಲ್ಲದಕ್ಕೂ ಮೂಲ. ಆದ್ದರಿಂದ ಧರ್ಮಕ್ಕೆ ಗೌರವ ಕೊಡಬೇಕೆನ್ನುವ ಮೂಲಕ ತಮಿಳುನಾಡು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆಗೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಸಮಾಧಾನ ವ್ಯಕ್ತಪಡಿಸಿದರು.

ಭಾನುವಾರ ಖಾಸಗಿ ಕಾರ್ಯಕ್ರಮ ನಿಮಿತ್ತ ನಗರಕ್ಕೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸನಾತನ ಧರ್ಮದ ಬಗೆಗಿನ ಉದಯನಿಧಿ ಸ್ಟಾಲಿನ್ ಹೇಳಿಕೆ ಒಪ್ಪುವುದಿಲ್ಲ. ಧರ್ಮದ ಬಗ್ಗೆ ಯಾರೇ ಆದರೂ ಮಾತನೋಡೋದು ತಪ್ಪು ಎಂದರು.

**ಚುನಾವಣೆಗೆ ಸ್ಪರ್ಧೆ ಮಾಡಲ್ಲ:** ನನಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ. ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ. ರಾಜಕೀಯದಲ್ಲಿ ನಮ್ಮ ಪಾತ್ರ ಏನೂ ಇಲ್ಲ. ನಾವು ಸಮಾಜದ ಕಾರ್ಯಕ್ರಮದಲ್ಲಿ ಸದಾ ಭಾಗವಹಿಸುತ್ತೇವೆ. ಸಮಾಜದ ಹಿತರಕ್ಷಣೆಗಾಗಿ ರಾಜಕೀಯದ ಮೂಲಕ ಸೇವೆ ಮಾಡುವ ಅವಶ್ಯಕತೆ ಇಲ್ಲ. ಬೇರೆ ರೀತಿಯಲ್ಲೂ ಜನ ಸೇವೆ ಮಾಡಬಹುದು. ಅದನ್ನು ಮಾಡಲು ನಾವು ಪ್ರಯತ್ನಿಸುತ್ತೇವೆ ಎಂದರು.

**ದಸರಾ ಆಚರಣೆಯಲ್ಲಿ ಯಾವುದೇ ಬದಲಾವಣೆ ಇಲ್ಲ:** ಪ್ರತಿ ವರ್ಷದಂತೆ ಈ ವರ್ಷವೂ ಮೈಸೂರು ದಸರಾ ನಡೆಯಲಿದ್ದು, ಯಾವುದೇ ಬದಲಾವಣೆ ಆಗಲ್ಲ. ಈ ಬಾರಿಯೂ ವಿಧಿ ವಿಧಾನಗಳ ಪ್ರಕಾರ ದಸರಾ ನಡೆಯಲಿದೆ. ಮಹಿಷಾ ದಸರಾ ಬಗ್ಗೆ ನನ್ನ ಅಭಿಪ್ರಾಯ ಏನು ಇಲ್ಲ. ಸಂವಿಧಾನದ ಪ್ರಕಾರ ಯಾರು, ಏನು ಬೇಕಾದರೂ ಅನುಸರಿಸಬಹುದು ಎಂದರು.

**ಕಾವೇರಿ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಬೇಕು:** ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಟ್ಟ ವಿಚಾರದ ಬಗ್ಗೆ ಮಾತನಾಡಿ, ಈ ಹಿಂದೆ ನಡೆದಿರುವ ಕಾವೇರಿ ನದಿ ನೀರು ಹಂಚಿಕೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಯಾವ ನಿರ್ಧಾರ ತೆಗೆದುಕೊಂಡಿದೆಯೋ ಅದನ್ನು ನೋಡಿ ರಾಜ್ಯ ಸರ್ಕಾರ ನಿರ್ಧರಿಸಬೇಕು. ಜೊತೆಗೆ ಸಮಸ್ಯೆ ಬಗೆಹರಿಸುವ ಬಗ್ಗೆ ತೀರ್ಮಾನ ಮಾಡಬೇಕು. ಸಂಪೂರ್ಣವಾಗಿ ರಾಜ್ಯ ಹಾಗೂ ರೈತರ ಜೊತೆ ನಮ್ಮ ಬೆಂಬಲ ಇದೆ. ಅಧಿಕಾರದಲ್ಲಿರುವವರನ್ನು ರೈತರು ಪ್ರಶ್ನೆ ಮಾಡಬೇಕು ಅವರ ಬೆಂಬಲಕ್ಕೆ ನಾವಿದ್ದೇವೆ ಎಂದರು.

## ರಾಜಕಾರಣಿಗಳ ಬದಲು ರಾಜಮನೆತನದವರೇ ಬಾಗಿನ ಅರ್ಪಿಸಲಿ: ರೈತ ಮುಖಂಡರ ಮನವಿ

**ಮಂಡ್ಯ:** ಕೆಆರ್‌ಎಸ್ ಭರ್ತಿಯಾದಾಗ ವಾಡಿಕೆಯಂತೆ ಮುಖ್ಯಮಂತ್ರಿಗಳು ಸೇರಿದಂತೆ ರಾಜಕಾರಣಿಗಳು ಕಾವೇರಿಗೆ ಬಾಗಿನ ಅರ್ಪಿಸುತ್ತಾರೆ. ಆ ಸಂಪ್ರದಾಯ ಕೈಬಿಟ್ಟು ಇನ್ನು ಮುಂದೆ ಅಣೆಕಟ್ಟೆಗೆ ಮೈಸೂರು ರಾಜಮನೆತನದವರೇ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಲಿ ಎಂದು ಜಿಲ್ಲಾ ರೈತ ಮುಖಂಡರು, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಸಲ್ಲಿಸಿದರು.

ನಗರದ ಕಲಾಮಂದಿರ ಬಳಿ ಯದುವೀರ್ ಭೇಟಿ ಮಾಡಿದ ರೈತ ಮುಖಂಡರು ಕೆಲವು ಪಾಪಿಷ್ಟರು, ಪುಡಾರಿಗಳು ಪೂಜೆ ಮಾಡಿ ಕಟ್ಟೆ ಬರಿದಾಗಿದೆ. ಆ ಮೂಲಕ ನಮ್ಮ ಮಹಾರಾಜರು ಕಟ್ಟಿದಂತಹ ಕಟ್ಟೆಗೆ ಕಳಂಕ ತರುತ್ತಿದ್ದಾರೆ. ಮಹಾರಾಜರು ಕೊಟ್ಟ ಕೊಡುಗೆಗೆ ಗೋಮುಖ ವ್ಯಾಘ್ರವಾಗಿ ನಡೆದುಕೊಳ್ಳುತ್ತಿದ್ದಾರೆ. ಹೀಗಾಗಿ ನೀವೆ ಕನ್ನಂಬಾಡಿ ಕಟ್ಟೆಗೆ ಬಾಗಿನ ಅರ್ಪಿಸಬೇಕು ಎಂದು ಮನವಿ ಮಾಡಿದರು. ರಾಜ್ಯದ ಜನರಿಗಾಗಿ ಮಹಾರಾಜರು ಕಟ್ಟಿದಂತ ಕಟ್ಟೆ ಇದಾಗಿದ್ದು, ಯಾವ ರಾಜಕಾರಣಿಗಳು ಮನೆ ಮಾರಿ ಕನ್ನಂಬಾಡಿ ಕಟ್ಟೆ ಕಟ್ಟಿಲ್ಲ. ಪ್ರತಿವರ್ಷ ನೀವೇ ಕಾವೇರಮ್ಮಗೆ ಬಾಗಿನ ಅರ್ಪಿಸಬೇಕು. ಈಗಲೂ ದಂಪತಿ ಸಮೇತ ಕಾವೇರಿ ಮಾತೆಗೆ ಪೂಜೆ ಮಾಡಿದರೆ ಕಟ್ಟೆ ತುಂಬುತ್ತದೆ ಎಂದು ರೈತ ಮುಖಂಡರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಒತ್ತಾಯ ಮಾಡಿದರು.

# ತ.ನಾಡಿಗೆ ನೀರು: ಸರ್ಕಾರದ ವಿರುದ್ಧ ಬೈಕ್ ಜಾಥಾ

## ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಸಾಥ್



ಶ್ರೀರಂಗಪಟ್ಟಣ, ಸೆ.10– ತಮಿಳುನಾಡಿಗೆ ನೀರು ಬಿಟ್ಟ ಸರ್ಕಾರದ ಕ್ರಮ ಖಂಡಿಸಿ ರೈತ ಸಂಘದ ಕಾರ್ಯಕರ್ತರು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳು ಪಟ್ಟಣದ ಕುವೆಂಪು ವೃತ್ತದಿಂದ ಬೈಕ್ ರ್‍ಯಾಲಿ ನಡೆಸಿದವು. ರೈತರ ಹೋರಾಟಕ್ಕೆ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಸಾಥ್ ನೀಡಿದರು.

ಬಳಿಕ ಮಾತನಾಡಿದ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಕಾವೇರಿ ನೀರು ಎಲ್ಲರಿಗೂ ಬೇಕು. ಇದರಲ್ಲಿ ಹೋರಾಟದ ಧ್ವನಿ ನಿಲ್ಲಬಾರದು. ಹೋರಾಟದ ಧ್ವನಿ ನಿಂತರೆ ನಮಗೆ ನಾವೇ ಮೋಸ ಮಾಡಿಕೊಂಡಂತೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹೇಳಿದಂತೆ ತಮಿಳುನಾಡಿಗೆ ನೀರು ಹರಿದು ಹೋಗಿದೆ. ಸುಪ್ರೀಂ ಕೋರ್ಟ್ ಹೇಳಿದಂತೆ ಇಲ್ಲಿವರೆಗೆ ಮೌನ ತಾಳಿದ್ದೆವು. ಆದರೆ ಇನ್ನು ಮೌನವಾಗಿರಲು ಆಗುವುದಿಲ್ಲ. ಮಳೆಯಾಗದಿದ್ದರೂ ಜಲಾಶಯ ಭರ್ತಿಯಾಗದೆ ತಮಿಳುನಾಡಿಗೆ ನೀರು ಹರಿದಿದೆ ಎಂದರೆ ಯಾವ ನ್ಯಾಯ ಎಂದು ಪ್ರಶ್ನಿಸಿದರು.

ಇಲ್ಲಿನ ಜನರ ಪರಿಸ್ಥಿತಿ, ಜಲಾಶಯದಲ್ಲಿ ನೀರಿನ ಸಂಗ್ರಹಣೆ ಬಗ್ಗೆ ತಿಳಿದುಕೊಳ್ಳದೆ ಸುಪ್ರೀಂ ಕೋರ್ಟ್ ನಮ್ಮ ರಾಜ್ಯದ ವಿರುದ್ಧ ಮಲತಾಯಿ ಧೋರಣೆ ಅನುಸರಿಸಿದೆ. ಇದನ್ನು ಸಹಿಸಲು ನಾವು ಆಗುವುದಿಲ್ಲ. ಸುಪ್ರೀಂ ಕೋರ್ಟ್ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಏನೇ ತೀರ್ಮಾನ ತೆಗೆದುಕೊಂಡರೂ ನಮ್ಮ ಸರ್ಕಾರ ತಮಿಳುನಾಡಿಗೆ ನೀರು ಬಿಡುವ ಕೆಲಸ ಆಗಬಾರದು. ಇರುವ ನೀರು ಬೆಂಗಳೂರಿಗಲ್ಲ ನಮ್ಮ ಜನರಿಗೆ ಸಾಲುವುದಿಲ್ಲ. ಈಗಿರುವ ಬೆಳೆಗೆ ಕಟ್ಟು ಪದ್ದತಿ ಎಂದರೆ ಇನ್ನು ಮೂರು ಕಟ್ಟು ನೀರು ಕೊಡಬೇಕಾಗಿದೆ ಎಂದರು. ಬೆಳೆ ಮತ್ತು ನಾವು ಕುಡಿಯಲು ನೀರಿನ ಅವಶ್ಯಕತೆ ಇದೆ ಇದರಿಂದ ನಾವು ನೀರು ಬಿಡಲು ಸಾಧ್ಯವಿಲ್ಲ ಕಾವೇರಿ ನೀರಿಗಾಗಿ ರೈತರು, ಕನ್ನಡಪರ ಸಂಘಟನೆಗಳೊಂದಿಗೆ ಹೋರಾಡುವುದು ನನ್ನ ನಿಲುವಾಗಿದೆ ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಮಾತನಾಡಿ, ಸ್ಥಳೀಯ ಶಾಸಕರು ನಮ್ಮ ಹೋರಾಟಕ್ಕೆ ಬೆಂಬಲವಾಗಿ ನಿಂತಿರುವುದು ಸಂತಸ ತಂದಿದೆ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಜನರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು. ಜಾಥಾದಲ್ಲಿ ಅನ್ನದಾತ ಸಂಸ್ಥೆಯ ರುಕ್ಮಾಂಗದ, ಕರವೇ ಮುಖಂಡ ಶಂಕರ್, ಉಗಮ ಟ್ರಸ್ಟಿನ ಪ್ರಿಯಾ ರಮೇಶ್, ಕರವೇ ಸುರೇಶ್, ಒಕ್ಕಲಿಗರ ಸಂಘದ ಅಧ್ಯಕ್ಷ ಚಂದ್ರಶೇಖರ್, ದಲಿತ ಸಂಘಟನೆಯ ರವಿಚಂದ್ರ ಸೇರಿದಂತೆ ಇತರ ಸಂಘಟನೆಗಳ ಮುಖಂಡರು ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಪಟ್ಟಣ ಮುಖ್ಯ ಬೀದಿಯಿಂದ ಹೊರಟು ಶ್ರೀರಂಗನಾಥ ಸ್ವಾಮಿ ದೇವಾಲಯ ಹಾಗೂ ತಾಲೂಕು ಕಚೇರಿ ಮಾರ್ಗವಾಗಿ ರೈತ ಪ್ರತಿಭಟನೆ ಸ್ಥಳದವರೆಗೆ ಬೈಕ್ ಜಾಥಾ ನಡೆಸಲಾಯಿತು.

# ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಕೆಸರುಗದ್ದೆ ಆಟ



ಚಾಮರಾಜನಗರ, ಸೆ.10– ಶ್ರೀಕೃಷ್ಣ ಪ್ರತಿಷ್ಠಾನದ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಮೊಸರು ಮಡಿಕೆ ಒಡೆಯುವ ಉತ್ಸವದ ಅಂಗವಾಗಿ ಜಾಲಹಳ್ಳಿ ಹುಂಡಿ ಹಾಲು ಗೋವಿಂದ ಅವರ ತೋಟದಲ್ಲಿ ಶ್ರೀಕೃಷ್ಣನ ಪೂಜೆ ಹಾಗೂ ಕೆಸರುಗದ್ದೆ ಆಟ ನಡೆಯಿತು.

ಇನ್ನರ್‌ವ್ಹೀಲ್ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಲಕ್ಷ್ಮಿಶಿವಕುಮಾರ ಮಾತನಾಡಿ, ಕೆಸರುಗದ್ದೆ ಆಟ ಮತ್ತು ಸ್ಪರ್ಧೆ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತದೆ. ಅಲ್ಲದೇ ಈ ಆಟದಿಂದ ಒತ್ತಡ ನಿವಾರಣೆಯಾಗಿ ಮಕ್ಕಳಲ್ಲಿ ಚೈತನ್ಯ, ಸ್ಫೂರ್ತಿ, ಶಕ್ತಿ ಹಾಗೂ ಧೈರ್ಯ ಉಂಟು ಮಾಡುತ್ತದೆ ಎಂದರು.

ನಗರಸಭಾ ಸದಸ್ಯೆ ಗಾಯತ್ರಿ ಮಾತನಾಡಿ, ಶ್ರೀಕೃಷ್ಣ ಪ್ರತಿಷ್ಠಾನ ಮೊಸರು ಉತ್ಸವ ಹಮ್ಮಿಕೊಳ್ಳುವ ಮೂಲಕ ಚಾಮರಾಜನಗರದಲ್ಲಿ ಹೊಸ ಸಂಸ್ಕೃತಿ ಮತ್ತು ಪರಂಪರೆ ಆರಂಭಿಸಿದೆ. ಆಧ್ಯಾತ್ಮಿಕತೆಯ ಮೂಲಕ ಯುವಕರಲ್ಲಿ ಜಾಗೃತಿ ಉಂಟು ಮಾಡುತ್ತಿರುವ ಶ್ರೀಕೃಷ್ಣ ಪ್ರತಿಷ್ಠಾನ ಅಭಿನಂದನೆಗೆ ಅರ್ಹರು ಎಂದರು.

ನಗರಸಭಾ ಸದಸ್ಯೆ ಮಮತಾ ಮಾತನಾಡಿ, ಕೆಸರುಗದ್ದೆ ಆಟ ಪ್ರಕೃತಿಯನ್ನು ಹೇಗೆ ಉಳಿಸಬೇಕು. ಪ್ರಕೃತಿ ಮೂಲಕ ದೈವತ್ವವನ್ನು ಕಾಣುವುದು ಹೇಗೆ ಎಂದು ತಿಳಿಸುತ್ತದೆ. ಯುವಕರು, ಮಕ್ಕಳು ಮತ್ತು ಮಹಿಳೆಯರು ಕೆಸರುಗದ್ದೆ ಆಟದಲ್ಲಿ ಪಾಲ್ಗೊಂಡಿರುವುದು ಸಂತಸದ ವಿಚಾರ ಎಂದರು.

ಶ್ರೀಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ, ಕಳೆದ 13 ವರ್ಷಗಳಿಂದ ಶ್ರೀಕೃಷ್ಣ ಜಯಂತಿ ಹಾಗೂ ಮೊಸರು ಮಡಿಕೆ ಹೊಡೆಯುವ ಉತ್ಸವ ಚಾಮರಾಜನಗರ ಜನತೆ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದೆ. ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ಉತ್ಸಾಹ ತುಂಬಲು ಕೆಸರಗದ್ದೆ ಆಟ, ಕಬಡ್ಡಿ ಪಂದ್ಯಾವಳಿ ಸ್ಪರ್ಧೆ ಆಯೋಜಿಸಲಾಗಿದೆ. ಕೆಸರಿನ ಆಟದಿಂದ ದೈಹಿಕ ಮತ್ತು ಮಾನಸಿಕ ಶಕ್ತಿ ಹೆಚ್ಚಾಗಲಿದೆ. ಮಣ್ಣಿನ ಸಂಪರ್ಕ ನವಶಕ್ತಿ ಉಂಟು ಮಾಡುತ್ತದೆ ಎಂದರು.

ಶ್ರೀ ಕೃಷ್ಣ ಪೂಜಾ ಕಾರ್ಯವನ್ನು ಪ್ರತಿಷ್ಠಾನದ ಪ್ರದೀಪ್ ಕುಮಾರ್ ದೀಕ್ಷಿತ್ ನೆರವೇರಿಸಿದರು ಈ ವೇಳೆ ತೋಟದ ಮಾಲೀಕರಾದ ಬಸವರಾಜು, ಹಾಲು ಗೋವಿಂದ, ಜೈ ಹಿಂದ್ ಪ್ರತಿಷ್ಠಾನದ ಕುಸುಮ ಋಗ್ವೇದಿ, ಮಾಲಾ, ಋಗ್ವೇದಿ ಯೂತ್ ಕ್ಲಬ್ ಅಧ್ಯಕ್ಷ ಶರಣ್ಯ, ಝಾನ್ಸಿ ಮಕ್ಕಳ ಪರಿಷತ್ತಿನ ಶ್ರಾವ್ಯ, ಸಾನಿಕ, ಚಂದನ್, ಮಂಜುನಾಥ್, ರಾಮ್ ಪ್ರಸಾದ್ ಶ್ರೀನಿಧಿ ಮಹದೇವ ಇದ್ದರು.

ಇದೇ ವೇಳೆ ನಡೆದ ಕೆಸರುಗದ್ದೆ ಓಟದ ಸ್ಪರ್ಧೆಯಲ್ಲಿ ಯೋಗೇಶ್, ಯಶ್ವಂತ್, ರೋಹಿತ್, ನಾಗೇಂದ್ರ, ಮಹಿಳೆಯರ ವಿಭಾಗದಲ್ಲಿ ಧನಲಕ್ಷ್ಮಿ, ಚೈತ್ರ, ತೆಂಗಿನಕಾಯಿಯನ್ನು ಕೆಸರಿನಲ್ಲಿ ಹುಡುಕುವ ಸ್ಪರ್ಧೆಯಲ್ಲಿ ಪೂಜಾ, ಪ್ರೀತಿ, ಭೂಮಿಕ, ಸಿಂಚನ, ಶಿವು, ಯಶ್, ವಿಷ್ಣು ವಿಜೇತರಾದರು.

ರಮೇಶ್ ಅನುಮಾನಾಸ್ಪದ ಸಾವು ಪ್ರಕರಣ

# ನಿಷ್ಪಕ್ಷಪಾತ ತನಿಖೆಗೆ ಸಂಸದ ಶ್ರೀನಿವಾಸ ಪ್ರಸಾದ್ ಸೂಚನೆ



ಚಾಮರಾಜನಗರ, ಸೆ.10– ನಗರದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟ ತಾಲೂಕಿನ ದಡದಹಳ್ಳಿ ಗ್ರಾಮದ ನಿವಾಸಿ ರಮೇಶ್ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಂತೆ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಡಿವೈಎಸ್ಪಿ ಲಕ್ಷಯ್ಯ ಅವರಿಗೆ ಭಾನುವಾರ ಸೂಚಿಸಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ನಗರಕ್ಕೆ ಆಗಮಿಸಿದ್ದ ಶ್ರೀನಿವಾಸ್ ಪ್ರಸಾದ್, ಪರಿಶಿಷ್ಟ ಜಾತಿಗೆ ಸೇರಿದ ರಮೇಶ್ ಸಾವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಈ ಸಾವು ಅಪಘಾತದಿಂದ ಆಗಿದೆಯೇ ಅಥವಾ ಇದು ಕೊಲೆಯೇ ಎಂಬುದು ಬಹಿರಂಗವಾಗಬೇಕಿದೆ ಇದಕ್ಕಾಗಿ ಪೊಲೀಸ್ ಇಲಾಖೆ ಯಾರ ಮುಲಾಜಿಗೂ ಒಳಗಾಗದೇ ಯಾರಿಗೂ ಹೆದರದೇ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು. ಆ ಮೂಲಕ ಸತ್ಯಾಂಶ ಹೊರತರಬೇಕು ಎಂದು ನಗರದ ಪ್ರವಾಸಿ ಮಂದಿರದಲ್ಲಿ ಡಿವೈಎಸ್ಪಿ ಲಕ್ಷಯ್ಯ ಅವರಿಗೆ ಸೂಚಿಸಿದರು.

ಇದೇ ವೇಳೆ ದಲಿತ ಮುಖಂಡರು ಪ್ರಗತಿಪರ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಸಿ.ಎಂ. ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಹಾಜರಿದ್ದರು.

# ಕಿವಿ, ಮೂಗು, ಗಂಟಲು ತಜ್ಞರ ಸಂಘಕ್ಕೆ ಡಾ.ಎ.ಆರ್.ಬಾಬು ರಾಜ್ಯಾಧ್ಯಕ್ಷ



ಚಾಮರಾಜನಗರ, ಸೆ.10– ಕರ್ನಾಟಕ ರಾಜ್ಯ ಕಿವಿ, ಮೂಗು ಮತ್ತು ಗಂಟಲು ತಜ್ಞರ ಸಂಘದ ರಾಜ್ಯಾಧ್ಯಕ್ಷರಾಗಿ ಡಾ.ಎ.ಆರ್.ಬಾಬು ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ನಡೆದ 40ನೇ ರಾಜ್ಯ ಕಿವಿ, ಮೂಗು ಮತ್ತು ಗಂಟಲು ತಜ್ಞರ ಸಮ್ಮೇಳನದಲ್ಲಿ ಸಂಘದ ರಾಜ್ಯಾಧ್ಯಕ್ಷರಾಗಿ ಡಾ.ಬಾಬು ಆಯ್ಕೆಯಾದರು.

ಡಾ.ಎ.ಆರ್.ಬಾಬು ಅವರು ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಅಂಬಳೆ ಗ್ರಾಮದವರಾಗಿದ್ದು, ಕಳೆದ 24 ವರ್ಷಗಳಿಂದ ಚಾಮರಾಜನಗರದಲ್ಲಿ ಕ್ಲಿನಿಕ್ ತೆರೆದು ಸೇವೆ ಸಲ್ಲಿಸುತ್ತಿದ್ದು ಹಾಗೂ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕಳೆದ 27 ವರ್ಷಗಳಿಂದ ಕಿವಿ, ಮೂಗು ಮತ್ತು ಗಂಟಲು ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೇ ಸದರಿ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ.ಬಾಬು ಇಎನ್‌ಟಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಜಿಲ್ಲೆಗೆ ಕೀರ್ತಿ ತಂದಿದೆ. ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಡಾ.ರವಿ, ಉಪಾಧ್ಯಕ್ಷರಾಗಿ ಡಾ.ಸೋಮಸುಂದರ್, ಖಜಾಂಚಿಯಾಗಿ ಡಾ. ಅನಿಲ್‌ಕುಮಾರ್ ಆಯ್ಕೆಯಾಗಿದ್ದಾರೆ.

# ಗುಂಡ್ಲುಪೇಟೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಗುಂಡ್ಲುಪೇಟೆ, ಸೆ.10– ಪಟ್ಟಣದ ಜೆಎಸ್‌ಎಸ್ ಪದವಿ ಕಾಲೇಜಿನ ಆವರಣದಲ್ಲಿ ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ತಾಲೂಕಿನ ವಿವಿಧ ಗ್ರಾಮಗಳ 400ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ತಜ್ಞ ವೈದ್ಯರು ರೋಗಿಗಳಿಗೆ ಉಚಿತ ತಪಾಸಣೆ ಹಾಗೂ ಸೂಕ್ತ ಸಲಹೆಗಳನ್ನು ನೀಡಿದರು. ಶಿಬಿರಕ್ಕೆ ನ್ಯಾಯಾಧೀಶ ಚಂದ್ರಶೇಖರ್ ತಳವಾರ್ ಭೇಟಿ ನೀಡಿದ್ದರು. ಈ ವೇಳೆ ಪ್ರಾಚಾರ್ಯರಾದ ಪಿ.ಮಹದೇವಪ್ಪ, ಬಸವರಾಜಪ್ಪ, ಶಿಬಿರದ ಸಂಚಾಲಯ ಕೀರ್ತಿಕುಮಾರ್, ಕಾಲೇಜಿನ ಸ್ವಯಂಸೇವಕರು ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.




# ಇಂದು ಶ್ರೀಕೃಷ್ಣ ಜಯಂತಿ

ಚಾಮರಾಜನಗರ, ಸೆ.10– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಸೆ.11ರಂದು ಮಧ್ಯಾಹ್ನ 3.30 ಗಂಟೆಗೆ ನಗರದ ರಥದ ಬೀದಿಯಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ. ಗಣೇಶ್‌ಪ್ರಸಾದ್, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಡಾ. ಡಿ.ತಿಮ್ಮಯ್ಯ, ಮಧು. ಜಿ. ಮಾದೇಗೌಡ, ನಗರಸಭಾ ಸದಸ್ಯ ಅಬ್ರಾರ್ ಅಹಮದ್ ಭಾಗವಹಿಸುವರು. ಶ್ರೀ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ಅವರು ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

# ಮೈಸೂರಲ್ಲಿ ಶಾಮಿಯಾನ ಮಾಲೀಕರ ಮಹಾ ಅಧಿವೇಶನ ಆರಂಭ



ಮೈಸೂರು, ಸೆ.10(ಎಂಟಿವೈ)- ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಮೂರು ದಿನಗಳ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಸಂಸ್ಥೆಗಳ ಮಾಲೀಕರ ರಾಜ್ಯ ಮಟ್ಟದ 3ನೇ ಮಹಾ ಅಧಿವೇಶನ ಭಾನುವಾರ ಆರಂಭವಾಗಿದ್ದು, ವಿವಿಧೆಡೆಯಿಂದ ನೂರಾರು ಮಂದಿ ಶಾಮಿಯಾನ ಸಂಸ್ಥೆಯ ಮಾಲೀಕರು ಆಗಮಿಸಿದ್ದಾರೆ.

ಮೈಸೂರು ಜಿಲ್ಲಾ ಶಾಮಿಯಾನ ಮಾಲೀಕರ ಸಂಘ ಹಾಗೂ ಕರ್ನಾಟಕ ರಾಜ್ಯ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಮ್ಮೇಳನದಲ್ಲಿ ದೆಹಲಿ, ಮುಂಬೈ, ಗುಜರಾತ್, ಕೇರಳ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿರುವ ಡೆಕೋರೇಷನ್ ಮಾರ್ಗದರ್ಶಕರು ಹೊಸ ಹೊಸ ವಿನ್ಯಾಸದ ಅಲಂಕಾರಿಕ ವಸ್ತುಗಳು, ನೂತನ ವಿನ್ಯಾಸದ ಶಾಮಿಯಾನ, ಹೊಸ ತಂತ್ರಜ್ಞಾನದ ಧ್ವನಿವರ್ಧಕ ಪ್ರದರ್ಶನ ಮಾಡುವುದರೊಂದಿಗೆ ವೇದಿಕೆಗಳನ್ನು ಅಲಂಕರಿಸುವ ವಿವಿಧ ಅಲಂಕಾರಿಕ ವಸ್ತುಗಳನ್ನು ಪ್ರದರ್ಶನಕ್ಕಿಟ್ಟು, ಶಾಮಿಯಾನ ಸಂಸ್ಥೆಯ ಮಾಲೀಕರಿಗೆ ಹೊಸ ತಂತ್ರಜ್ಞಾನದ ಮಾಹಿತಿಯನ್ನು ಒದಗಿಸಿದರು.

ಶಾಮಿಯಾನ ಮಾಲೀಕರ ಸಂಘದ ಸಮ್ಮೇಳನದಲ್ಲಿ ಒಟ್ಟು 106 ಮಳಿಗೆಗಳನ್ನು ನಿರ್ಮಿಸಿ ಡೆಕೋರೇಷನ್‌ಗೆ ಬಳಸುವ ವಿದ್ಯುದ್ದೀಪಗಳು, ಕುರ್ಚಿ, ಪೀಠೋಪಕರಣ, ಅಲಂಕಾರಿಕ ವಿದ್ಯುದ್ದೀಪಗಳನ್ನು ಆಕರ್ಷಕವಾಗಿ ಜೋಡಿಸಿಟ್ಟು ಗಮನ ಸೆಳೆದರು.

ಸಮಾವೇಶವನ್ನು ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಯಾವುದೇ ಸಭೆ-ಸಮಾರಂಭ ಸೇರಿದಂತೆ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ, ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕಿನ ಸಂಸ್ಥೆಗಳ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಶಾಮಿಯಾನ ಮಾಲೀಕರ ಸಮ್ಮೇಳನ ನಡೆಯುತ್ತಿರುವುದು ಶ್ಲಾಘನೀಯ. ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಶಾಮಿಯಾನ ಮಾಲೀಕರ ಸಂಘವು ಒತ್ತಾಯಿಸುತ್ತಿರುವುದು ಸಮಂಜಸವಾಗಿದೆ. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ ಇರುತ್ತದೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಮೇಯರ್ ಶಿವಕುಮಾರ್, ಕರ್ನಾಟಕ ರಾಜ್ಯ ಶಾಮಿಯಾನ, ಡೆಕೋರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಆರ್.ಲಕ್ಷ್ಮಣ್, ಮೈಸೂರು ಜಿಲ್ಲಾ ಶಾಮಿಯಾನ ನೌಕರರ ಸಂಘದ ಅಧ್ಯಕ್ಷ ಶಿವಕುಮಾರ್, ವಿವಿಧ ಶಾಮಿಯಾನ ಸಂಸ್ಥೆಯ ಮಾಲೀಕರಾದ ಶಂಕರ್, ಮುನ್ನಾ, ಅಬ್ದುಲ್ ರೆಹಮಾನ್ ವಾಜಿ, ಲಿಂಗರಾಜ್, ತಾಜ್ ಮೊಹಮ್ಮದ್, ಸಂಜರ್ ರೆಹಮಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ ಆಗಮನ



ಮೈಸೂರು, ಸೆ.10(ಜಿಎಲ್‌ಎಸ್)- ಆದಿಚುಂಚನಗಿರಿ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಸೋಮವಾರ) ಮೈಸೂರಿಗೆ ಆಗಮಿಸಲಿದ್ದಾರೆ.

ನಾಳೆ ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಸಿಎಂ ಪ್ರಯಾಣ ಬೆಳಸಲಿದ್ದಾರೆ. ಬೆಳಿಗ್ಗೆ 10.55 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಸಿದ್ದರಾಮಯ್ಯ, ನಗರದ ಹೊಸ್ಸ್ಟಲಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೈಸೂರು ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ತರುವಾಯ ವಿಶೇಷ ವಿಮಾನದ ಮೂಲಕ ಸಂಜೆ ನಾಲ್ಕು ಗಂಟೆಗೆ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ. ಸಿದ್ದರಾಮಯ್ಯ ಅವರು ಭಾಗಿಯಾಗುತ್ತಿರುವ ಆದಿ ಚುಂಚನಗಿರಿ ಮಠದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೂಡ ಪಾಲ್ಗೊಳ್ಳಲಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಮಾತುಕತೆ ನಡೆಯುತ್ತಿರುವ ಇತ್ತೀಚಿನ ರಾಜಕೀಯ ಬೆಳವಣಿಗೆಯ ನಡುವೆ ಇದೇ ಮೊದಲ ಬಾರಿಗೆ ಸಿದ್ದರಾಮಯ್ಯ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾಗುತ್ತಿದ್ದಾರೆ.

ಮೈಸೂರು ಮಿತ್ರ



# ಮೈಸೂರಲ್ಲಿ ರಾಷ್ಟ್ರೀಯ ಜಿಮ್ನಾಷಿಯಂ ಪಟುಗಳಿಗೆ ತರಬೇತಿ ಶಿಬಿರ ಆರಂಭ

● ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸೆ.17ರವರೆಗೂ ತರಬೇತಿ ● ಅ.18ರಿಂದ 20ರವರೆಗೆ ಉಜ್ಬೇಕಿಸ್ತಾನದಲ್ಲಿ ನಡೆಯುವ ಜಿಮ್ನಾಷಿಯಂ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿರುವ ತಂಡ ● ತರಬೇತಿಯಲ್ಲಿ 38 ಜಿಮ್ನಾಷಿಯಂ ಪಟುಗಳು ಭಾಗಿ



ಮೈಸೂರು, ಸೆ.10(ಎಂಟಿವೈ)–ಉಜ್ಬೇಕಿಸ್ತಾನದಲ್ಲಿ ಅ.18ರಿಂದ 20ರವರೆಗೆ ನಡೆಯುವ 13ನೇ ಅಕ್ರೋಬಾಟಿಕ್ ಜಿಮ್ನಾಸ್ಟಿಕ್ಸ್ ಏಷ್ಯನ್ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡದ 38 ಜಿಮ್ನಾಷಿಯಂ ಪಟುಗಳಿಗೆ ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ತರಬೇತಿ ಆರಂಭವಾಯಿತು.

ಜಿಮ್ನಾಸ್ಟಿಕ್ ಅಸೋಸಿಯೇಷನ್ ಆಫ್ ಕರ್ನಾಟಕ, ಕ್ರೀಡಾ ಪ್ರಾಧಿಕಾರ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್, ಜಿಮ್ನಾಸ್ಟಿಕ್ ಫೆಡರೇಷನ್ ಆಫ್ ಇಂಡಿಯಾ ಹಾಗೂ ಕ್ರೀಡಾ ಮತ್ತು ಯುವಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಜಿಮ್ನಾಷಿಯಂ ತಂಡದ ಪಟುಗಳಿಗೆ 8 ದಿನಗಳ ರಾಷ್ಟ್ರೀಯ ತರಬೇತಿ ಶಿಬಿರ ಆಯೋಜಿಸಲಾಗಿದ್ದು, ಈ ಶಿಬಿರದಲ್ಲಿ 14 ವರ್ಷದೊಳಗಿನ ಹಾಗೂ 14 ವರ್ಷ ಮೇಲ್ಪಟ್ಟ ದೇಶದ ವಿವಿಧ ರಾಜ್ಯಗಳಿಂದ ಭಾರತ ತಂಡವನ್ನು ಪ್ರತಿನಿಧಿಸುವ ಜಿಮ್ನಾಷಿಯಂ ಪಟುಗಳು ಪಾಲ್ಗೊಂಡಿದ್ದಾರೆ. ತರಬೇತಿ ಶಿಬಿರದಲ್ಲಿ 17 ಜೂನಿಯರ್ ಜಿಮ್ನಾಸಿಸ್ಟ್‌ಗಳು, 21 ಹಿರಿಯ 21 ಜಿಮ್ನಾಸಿಸ್ಟ್‌ಗಳು, ಇಬ್ಬರು ಕಿರಿಯ ತರಬೇತುದಾರರು ಹಾಗೂ ಇಬ್ಬರು ಹಿರಿಯ ತರಬೇತುದಾರರು ಸೇರಿದಂತೆ 42 ಮಂದಿ ಪಾಲ್ಗೊಂಡಿದ್ದಾರೆ.

ಇಂದಿನಿಂದ ಆರಂಭವಾದ ರಾಷ್ಟ್ರೀಯ ತರಬೇತಿ ಶಿಬಿರ ಸೆ.17ರವರೆಗೆ ನಡೆಯುತ್ತದೆ. ಪ್ರತಿದಿನ ಬೆಳಗ್ಗೆ 6ರಿಂದ 9 ಗಂಟೆ, ಸಂಜೆ 4ರಿಂದ 7 ಗಂಟೆವರೆಗೆ ತರಬೇತಿ ನೀಡಲಾಗುತ್ತದೆ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲೇ ಇರುವ ಕ್ರೀಡಾ ವಿದ್ಯಾರ್ಥಿನಿಲಯದಲ್ಲಿ ಜಿಮ್ನಾಷಿಯಂ ಪಟುಗಳಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಎರಡು ಅವಧಿಯಲ್ಲೂ ಕಠಿಣ ತರಬೇತಿ ನೀಡಲಾಗುತ್ತದೆ. ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಜಿಮ್ನಾಷಿಯಂ ಪಟುಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕಠಿಣ ತರಬೇತಿ ನೀಡಲಾಗುತ್ತಿದೆ. ಈ ಭಾರತ ಪ್ರತಿನಿಧಿಸುವ ತಂಡದಲ್ಲಿ 10 ಮಂದಿ ಕರ್ನಾಟಕ ಜಿಮ್ನಾಷಿಯಂ ಪಟುಗಳಿರುವುದು ವಿಶೇಷ. ಇಲ್ಲಿ ತರಬೇತಿ ಪಡೆದ ಪಟುಗಳು ಅ.18ರಿಂದ 20ರವರೆಗೆ ಉಜ್ಬೇಕಿಸ್ತಾನ್‌ದ ತಾಷ್ಕೆಂಟ್ ನಲ್ಲಿ ಜಿಮ್ನಾಸ್ಟಿಕ್ಸ್ ಏಷ್ಯನ್ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಬೆಳಗ್ಗೆ ಯುವಜನ ಮತ್ತು ಕ್ರೀಡಾ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಚಾಲನೆ ನೀಡಿದರು. ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಉಪಾಧ್ಯಕ್ಷ ಡಾ.ಪ್ರಭಾಕರ್, ಜಿಮ್ನಾಸ್ಟಿಕ್ ಅಸೋಸಿಯೇಷನ್ ಆಫ್ ಕರ್ನಾಟಕ ಗೌರವ ಕಾರ್ಯದರ್ಶಿ ಟಿ.ಪಿ.ಕಿರಣ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸಂತರ ಧರ್ಮ ಸಭೆ

## ಹಿಂದೂ ಧರ್ಮದ ಶಾಸ್ತ್ರ-ಸಂಪ್ರದಾಯ ಮಾನವನ ವಿಕಸನಕ್ಕೆ ಸಹಕಾರಿ: ಮುಕ್ತಿದಾನಂದ ಸ್ವಾಮೀಜಿ ಅಭಿಮತ



ಮೈಸೂರು, ಸೆ.10(ಜಿಎ)–ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದರ ಚಾತುರ್ಮಾಸ್ಯ ವ್ರತ ಸಮಿತಿ, ವಿಶ್ವ ಹಿಂದೂ ಪರಿಷದ್ ಮತ್ತು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಸಹಯೋಗದೊಂದಿಗೆ ಗಣಪತಿ ಆಶ್ರಮದ ನಾದಮಂಟಪ ಸಭಾಂಗಣದಲ್ಲಿ ಭಾನುವಾರ ಸಂತ ಸಮಾವೇಶ ಮತ್ತು ಬೃಹತ್ ಧರ್ಮಸಭೆಯನ್ನು ಆಯೋಜಿಸಲಾಯಿತು.

ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಸಭೆಗೆ ಮೈಸೂರು ಸುತ್ತಮುತ್ತಲಿನ ಮತ್ತು ರಾಜ್ಯದ ವಿವಿಧ ಭಾಗದ ಸ್ವಾಮೀಜಿಗಳು ದೀಪ ಬೆಳಗಿಸಿ ಚಾಲನೆ ನೀಡಿದರು.

### ನಿರ್ಣಯಗಳು

ಇಂದು ನಡೆದ ಸಂತರ ಸಭೆಯಲ್ಲಿ ಗೋಹತ್ಯೆ ಮಸೂದೆ ಮತ್ತು ಮತಾಂತರ ನಿಷೇಧ ಕಾಯ್ದೆಯನ್ನು ಮುಂದುವರಿಸುವ ಬಗ್ಗೆ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬೇಕು. ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಹಿಂಪಡೆಯದೆ ಉಳಿಸಬೇಕು. ಮತಾಂತರಕ್ಕೆ ಒತ್ತಾಯಿಸುವುದನ್ನು ತಡೆಯಬೇಕು ಮತ್ತು ಹಿಂದೂ ಹಬ್ಬ ಹರಿದಿನಗಳು ಮತ್ತು ಧಾರ್ಮಿಕತೆ, ಕವಲುದಾರಿಯಲ್ಲಿರುವ ಭಾರತೀಯ ಕುಟುಂಬ ವ್ಯವಸ್ಥೆ, ಭಾರತದಲ್ಲಿ ಹಿಂದೂ ಧರ್ಮ ಮತ್ತು ಸವಾಲುಗಳು, ಬಾಲ ಸಂಸ್ಕಾರ ಮತ್ತು ಹಿಂದೂ ಯುವ ಜನಾಂಗದ ಜಾಗೃತಿ, ಹಿಂದೂ ಧರ್ಮದ ಬಗ್ಗೆ ರಾಜಕೀಯ ಇಚ್ಛಾಶಕ್ತಿ ಮತ್ತು ರಾಷ್ಟ್ರೀಯತೆ, ಹಿಂದೂ ಧರ್ಮದ ಬಗ್ಗೆ ಒತ್ತಾಯಿಸಿದರು.

ಯುವ ಭವಿಷ್ಯಕ್ಕೆ ಮಾರಕವಾಗುತ್ತಿರುವ ಟಿವಿ ಮತ್ತು ಒಟಿಟಿ ಪ್ಲಾಟ್ ಫಾರ್ಮ್‌ಗಳಲ್ಲಿ ಬಿತ್ತರವಾಗುವ ಧಾರಾವಾಹಿಗಳು, ಜಾಹೀರಾತುಗಳು, ಸಾಕ್ಷ್ಯಚಿತ್ರಗಳು ಮತ್ತು ಇತರ ಕಾರ್ಯಕ್ರಮಗಳಿಗೆ ಸೆನ್ಸಾರ್ ವ್ಯವಸ್ಥೆಯ ಬಗ್ಗೆ, ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದು ಸಂತರು ನಿರ್ಣಯ ತೆಗೆದುಕೊಂಡರು.

ಸಭೆಯಲ್ಲಿ ರಾಮಕೃಷ್ಣ ಪರಮಹಂಸ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಧರ್ಮ ಶಿಕ್ಷಣದ ಕುರಿತು ಮಾತನಾಡಿ, ಹಿಂದೂ ಧರ್ಮವನ್ನು ಅರ್ಥ ಮಾಡಿಕೊಂಡರೆ ಶಾಸ್ತ್ರ ಸಂಪ್ರದಾಯ ಬಳಸಿಕೊಂಡರೆ ಮನುಷ್ಯನ ವಿಕಸನಕ್ಕೆ ಸಹಕಾರಿಯಾಗಲಿದೆ. ಈ ಎಲ್ಲಾ ಅಂಶಗಳು ವೇದ, ಉಪನಿಷತ್ ಮತ್ತು ಗ್ರಂಥದಲ್ಲಿದ್ದು, ಇದು ನಮಗೆ ಮಾತ್ರವಲ್ಲದೆ, ವಿಶ್ವಕ್ಕೆ ಬೇಕಾಗಿದೆ ಎಂದರು.

ಧರ್ಮ ಶಿಕ್ಷಣದಿಂದ ಎಲ್ಲರೂ ವಂಚಿತರಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಧರ್ಮ ಪ್ರಚಾರ ಕಡ್ಡಾಯವಾಗಬೇಕು. ಮಠ, ಶಾಲೆ, ಮನೆಗಳಲ್ಲಿ ಮಾತ್ರವಲ್ಲದೆ, ಗ್ರಾಮಾಂತರ ಪ್ರದೇಶದವರಿಗೂ ಧರ್ಮ ಶಿಕ್ಷಣದ ವ್ಯವಸ್ಥೆ ಆಗಬೇಕು. ಜೊತೆಗೆ ದೇವಸ್ಥಾನ ಮಠ ಮಾನ್ಯದಲ್ಲಿಯೂ ಧರ್ಮ ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು. ಧರ್ಮದ ಅನುಷ್ಠಾನದಿಂದ ಮಾತ್ರರಕ್ಷಣೆ ಸಾಧ್ಯ ಎಂದು ತಿಳಿಸಿದರು.

ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಮಾತನಾಡಿ, ಇಂದು ಸನಾತನ ಧರ್ಮದ ಬಗ್ಗೆ ತಿಳಿಯದವರು ಮಾತನಾಡುತ್ತಾರೆ. ಪರಮೇಶ್ವರ ಎಂದು ಹೆಸರು ಇಟ್ಟುಕೊಂಡಿರುವ ಸಚಿವರೊಬ್ಬರು ನನ್ನ ಧರ್ಮ ಯಾವುದೆಂದು ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ತಮಿಳುನಾಡಿನ ಸಚಿವ ಉದಯ ಎಂಬ ಹೆಸರು ಇಟ್ಟುಕೊಂಡು, ಹಿಂದೂ ಧರ್ಮವನ್ನು ರೋಗಗ್ರಸ್ತ ಧರ್ಮ ಎಂದು ಬೇರೆ ಧರ್ಮವನ್ನು ಒಲಿಸಿಕೊಳ್ಳಲು ಹೀಗೆ ಹೇಳುತ್ತಿದ್ದಾರೆ. ಇದು ಟೂಲ್ ಕಿಟ್‌ನ ಪ್ರದರ್ಶನವಾಗಿದ್ದು, ಇದು ಇಂದು ನೆನ್ನೆಯ ವಿಷಯವಲ್ಲ. ಹಲವಾರು ವರ್ಷಗಳಿಂದ ಈ ರೀತಿಯ ದಾಳಿಗಳು ನಡೆಯುತ್ತಿದೆ. ಇದರ ನಡುವೆ ಸ್ವಾಮೀಜಿಗಳು ಮೀಸಲಾತಿಗಾಗಿ ಹೋರಾಟ ಮಾಡುತ್ತಾರೆ. ಆದರೆ, ಧರ್ಮ ವಿಚಾರ ಬಂದಾಗ ಗಟ್ಟಿಗೊಳಿಸಲು ಎಲ್ಲಾ ಸ್ವಾಮೀಜಿ ಒಟ್ಟಾಗಿ ನಿರಂತರ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಹಿಂದೂ ರಾಷ್ಟ್ರದಲ್ಲಿ ಯಾವುದೇ ಅಸ್ಪೃಶ್ಯತೆ ಇಲ್ಲ. ಅದರ ಬಗ್ಗೆ ನಾವು ನಿರಂತರವಾಗಿ ಹೋರಾಟ ಮಾಡುತ್ತಿದ್ದೇವೆ. ನಾವು ಊಟ ಮಾಡುವ ಪದ್ಧತಿಯನ್ನು ಅಸ್ಪೃಶ್ಯತೆ ಎಂದು ಹೇಳುತ್ತಿದ್ದಾರೆ ಅಷ್ಟೇ. ಸ್ವಾಮೀಜಿಗಳು ನಮ್ಮ ಮಠ ಬೆಳೆಯಬೇಕು, ಮೀಸಲಾತಿ ಬೇಕು ಎಂದರೆ ಏನೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಹಿಂದೂ ಧರ್ಮಕ್ಕೆ ಒಂದು ಗಂಟೆ ಮೀಸಲಿಡಿ ಎಂದರು.

ಸಭೆಯಲ್ಲಿ ಬೆಟ್ಟಪುರದ ಚೆನ್ನಬಸವ ದೇಶಿಕೇಂದ್ರ ಸ್ವಾಮೀಜಿ ಮೀಸಲಾತಿ ಬಗ್ಗೆ ಮಾತನಾಡಿ, ಹಿಂದೂ ಎಂಬುದು ಎಲ್ಲರನ್ನೂ ಒಗ್ಗೂಡಿಸುತ್ತೆ. ಆದರೆ, ಕೆಲವರು ನೀವು ಒಗ್ಗಟಾಗಿಲ್ಲ ಎಂದು ಹೇಳುವುದು ಭ್ರಮೆಯಾಗಿದೆ. ಅನೇಕ ಸಂತರು ತಪಸ್ಸು ಮಾಡಿ ಭರತ ಖಂಡವನ್ನು ಸ್ಥಾಪಿಸಿದ್ದಾರೆ. ದೇಶಕ್ಕೆ ಏಕರೂಪ ಸಂಹಿತೆಯ ಅಗತ್ಯವಿದೆ. ರಾಜಕೀಯ ಇಚ್ಛಾಶಕ್ತಿಗಳು ಕೆಲಸ ಮಾಡಬೇಕಿದೆ. ಸಮಾನವಾದ ಸಂಹಿತೆ ಜೊತೆಗೆ ದೇಶದ ಏಕತೆ ಪ್ರದರ್ಶಿಸಿ, ಏಕರೂಪ ಶಾಸನ ತರಬೇಕು ಎಂದರು.

### ಶ್ರೀರಾಮಮಂದಿರದಿಂದ ರಾಮರಾಜ್ಯ ಕನಸು ನನಸು ; ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಸಭೆಯ ನೇತೃತ್ವ ವಹಿಸಿದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ರಾಮಮಂದಿರ ನಿರ್ಮಾಣ ಆಗಬೇಕೆಂದು ನಮ್ಮದೂ ಕನಸು. ದೇಶದಲ್ಲಿ ಸಾಕಷ್ಟು ರಾಮಮಂದಿರವಿದೆ. ಆದರೆ, ಈ ರಾಮಮಂದಿರದಿಂದ ರಾಮರಾಜ್ಯದ ಕನಸು ನನಸಾಗುತ್ತದೆ. ಪ್ರಜಾರಾಜ್ಯದಲ್ಲಿ ರಾಮರಾಜ್ಯ ನಿರ್ಮಾಣವಾಗಬೇಕು ಎಂದರೆ ಧರ್ಮವನ್ನು ಅಳವಡಿಸಿಕೊಳ್ಳಬೇಕು. ಆದರೆ, ಈ ರಾಮರಾಜ್ಯದಲ್ಲಿಯೂ ರಾವಣರು ಇರುತ್ತಾರೆ. ಅವರನ್ನು ಬಹಿಷ್ಕರಿಸಿ. ನಮ್ಮ ಸಂಸ್ಕೃತಿಯನ್ನು ಧರ್ಮವನ್ನು ಪೋಷಿಸುವವರನ್ನು ಪುರಸ್ಕರಿಸಿ, ಬೇರೆಯವರನ್ನು ಧಿಕ್ಕರಿಸಿ ಎಂದು ಕರೆ ನೀಡಿದರು.

ಇಲ್ಲಿ ಬಂದಿರುವ ಸಂತರು ಮಾತ್ರವಲ್ಲದೇ ಇಡೀ ಭಾರತದಲ್ಲಿ ಅವರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗೇ ಇಂದು ಇಸ್ಕಾನ್, ರವಿಶಂಕರ್ ಗುರೂಜೀ ಅವರ ಆರ್ಟ್ ಆಫ್ ಲಿವಿಂಗ್, ಮಾತಾ ಅಮೃತಾಮಯಿ ಮತ್ತು ಗಣಪತಿ ಸಚ್ಚಿದಾನಂದ ಶ್ರೀಗಳು ಸೇರಿದಂತೆ ಅನೇಕ ಸಂಘ ಸಂಸ್ಥೆ ಮತ್ತು ಸಂತರ ಹಿಂದೆ ವಿದೇಶದ ಜನರು ಬರುತ್ತಿದ್ದು, ನಮ್ಮ ವಿಚಾರಧಾರೆಯನ್ನು ತಿಳಿದುಕೊಳ್ಳುತ್ತಿದ್ದಾರೆ. ಇದರ ಮೂಲಕ ಹಿಂದೂ ಧರ್ಮದ ವಿಜಯ ಸ್ಥಾಪನೆ ಮಾಡುತ್ತಿದ್ದಾರೆ. ಈ ಅಂಶಗಳು ಕೆಲವರಿಗೆ ಎದೆಯಲ್ಲಿ ನಡುಕ ಹುಟ್ಟಿಸಿದ್ದು ಈ ರೀತಿ ವಿಷಯಗಳ ಬಗ್ಗೆ ನಾವು ಜಾಗೃತರಾಗಿರಬೇಕಿದೆ. ಇದರ ಬಗ್ಗೆ ಕುಗ್ಗಬಾರದು. ಅದರ ವಿರುದ್ಧ ಸಮರ್ಥವಾಗಿ ಪ್ರತಿಭಟಿಸಬೇಕು ಎಂದು ಸಲಹೆ ನೀಡಿದರು.


ವಿಶ್ವದಾದ್ಯಂತ ಸಮಸ್ಯೆ ಎಲ್ಲಾ ಕಡೆ ಇದೆ. ದೋಷಗಳನ್ನು ಸರಿಪಡಿಸುವ ಕೆಲಸ ಮಾಡಬೇಕೇ ಹೊರತು ಅದನ್ನು ಕಿತ್ತು ಹಾಕುತ್ತೇವೆಂದು ಹೇಳುವುದು ಸುಲಭವಲ್ಲ. ಇಂದು ಭಾರತದಲ್ಲಿ ಸನಾತನ ಧರ್ಮವನ್ನು ಒಪ್ಪಿಕೊಂಡಿರುವವರು ಹೆಚ್ಚಿದ್ದಾರೋ ಅಥವಾ ಇತರರರು ಹೆಚ್ಚಿದ್ದಾರೋ ಎಂದರೆ ಸನಾತನಿಗಳು ಹೆಚ್ಚಿದ್ದಾರೆ. ಇದರಿಂದ ಸಮಾಜದಲ್ಲಿ ಒಡಕು ಹೆಚ್ಚಿಸುತ್ತಿದ್ದಾರೆ. ಇದರಿಂದ ಮಣಿಪುರದಲ್ಲಿ ಗಲಭೆ ಹೆಚ್ಚಾಗುತ್ತಿದೆ. ಇಂತಹ ಸಮಸ್ಯೆಗಳನ್ನು ಮೂಲದಲ್ಲಿಯೇ ಚಿವುಟಿ ಹಾಕಬೇಕು, ನಮ್ಮಲ್ಲಿಯೂ ಸಮಸ್ಯೆ ಇದೆ. ಅದಕ್ಕೆ ನಾವು ಹಿರಿಯರ ಬಳಿ ಹೋಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಪಕ್ಕದ ಮನೆಯವರ ಹತ್ತಿರ ಹೋದರೆ ಅವರು ಮನೆ ಒಡೆಯುತ್ತಾರೆ ಅಷ್ಟೇ. ಈ ಕಾರಣದಿಂದಲ್ಲೇ ಮನೆಗಳು ಒಡೆಯುತ್ತಿದೆ. ಸರ್ಕಾರಕ್ಕೆ ಸಾಧ್ಯವಾಗದನ್ನು ಸಂತರು ಮಾಡಿದ್ದಾರೆ. ಸಮಾಜಕ್ಕೋಸ್ಕರ ಮಾಡುತ್ತಿದ್ದೇವೆ. ಯಾವುದೇ ಸಮಸ್ಯೆ ಇದ್ದರೂ ಸಂತರ ಬಳಿ ಹೋಗೋಣ ಎಂದರು.

ಚಾಮುಂಡಿ ದಸರಾ ನಡುವೆ ಮಹಿಷ ದಸರಾ ಬಂದಿದೆ ಮುಂದೆ ರಾವಣ, ಕುಸ, ದುಶ್ಯಾಸನ ದಸರಾವೂ ಆಚರಣೆಯಾಗುತ್ತದೆ. ಅದು ನಮಗೆ ಬೇಡ. ಅದನ್ನು ಬಹಿಷ್ಕರಿಸಿದರೆ, ಸಾಕು ಅವರೇ ತೆಪ್ಪಾಗುತ್ತಾರೆ. ನಾವೆಲ್ಲರೂ ಒಗ್ಗಟ್ಟಾಗಿ ಇರೋಣ ಎಂದು ತಿಳಿಸಿದರು.

**25ಕ್ಕೂ ಹೆಚ್ಚು ಸಂತರು ಭಾಗಿ :** ಸಭೆಯಲ್ಲಿ ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಮಹಾರಾಜ್, ಶ್ರೀನೀಲಕಂಠಮಠದ ಸಿದ್ದಮಲ್ಲ ಸ್ವಾಮೀಜಿ, ಆತ್ಮನಿರತಾಮೃತ ಚೈತನ್ಯ ಸ್ವಾಮೀಜಿ, ಅಮೃತಾನಂದಮಯಿ ಆಶ್ರಮದ ಪ್ರಸಾದಾಮೃತ ಚೈತನ್ಯ ಸ್ವಾಮೀಜಿ, ಜೈನ ಆಚಾರ್ಯ ಶ್ರೀ ತೀರ್ಥಭದ್ರ ಸುನೀಜೀ, ಬೆಟ್ಟದಪುರದ ಚೆನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಶರಣ ಸಂಗಮ ಮಠದ ನಾಗರಾಜ ಸ್ವಾಮೀಜಿ, ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ಮೂಡಗಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಿರಕ್ತಮಠದ ಶ್ರೀಕಂಠಸ್ವಾಮೀಜಿ, ಮಾಗಡಿ ಮಠದ ಆದಿಮುನಿ ಲಿಂಗೇಶ್ವರ ಸ್ವಾಮೀಜಿ, ಬಸವೇಶ್ವರ ಮಠದ ಶಿವಾನಂದ ಸ್ವಾಮೀಜಿ, ಗೌತಮ ಕ್ಷೇತ್ರದ ಗಜಾನಂದ ಸ್ವಾಮೀಜಿ, ಕುದುರು ಮಠದ ಗುರುಲಿಂಗ ಸ್ವಾಮೀಜಿ, ಮಡಿವಾಳೇಶ್ವರ ಮಠದ ಇಮ್ಮಡಿ ಮಡಿವ ಬಾಳೇಶ್ವರ ಸ್ವಾಮೀಜಿ, ಚಿತ್ರದುರ್ಗದ ಬಸವ ಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ತ್ರಿಪುರ ಭೈರವಿ ಮಠದ ಕೃಷ್ಣ ಮೋಹನ ನಂದಗಿರಿ ಸ್ವಾಮೀಜಿ ಭಾಗಿಯಾಗಿದ್ದರು.

# ಮಟ್ಟಿ ಮಣ್ಣಿನಲ್ಲಿ ಕಾದಾಡಿದ ಪೈಲ್ವಾನರು

## ರೋಚಕ ಕ್ಷಣಗಳಲ್ಲಿ ತೇಲಿದ ಕುಸ್ತಿ ಅಭಿಮಾನಿಗಳು



ಮೈಸೂರು,ಸೆ.10(ಪಿಎಂ)– ಮಟ್ಟಿ ಮಣ್ಣಿನಲ್ಲಿ ಕಾದಾಡಿದ ಪೈಲ್ವಾನರು ಕುಸ್ತಿ ಅಭಿಮಾನಿಗಳಲ್ಲಿ ರೋಮಾಂಚನ ಉಂಟು ಮಾಡಿದರು. ಮೈಸೂರಿನ ವಸ್ತು ಪ್ರದರ್ಶನ ಮೈದಾನದ ಡಿ.ದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಇಂತಹ ರೋಚಕ ಕ್ಷಣಗಳು ಕುಸ್ತಿ ಅಭಿಮಾನಿಗಳಲ್ಲಿ ಉಸಿರು ಬಿಗಿಹಿಡಿಯುವಂತೆ ಮಾಡಿತು.

ಮೈಸೂರು ಜಿಲ್ಲಾ ಕುಸ್ತಿ ಸಂಘದ ವತಿಯಿಂದ ಸದರಿ ಸಂಘದ ಉದ್ಘಾಟನೆಯೊಂದಿಗೆ ಹಮ್ಮಿಕೊಂಡಿದ್ದ ಈ ಕುಸ್ತಿ ಪಂದ್ಯಾವಳಿಯಲ್ಲಿ 30ಕ್ಕೂ ಹೆಚ್ಚು ಜೊತೆ ನಾಡ ಕುಸ್ತಿ ನಡೆಯಿತು. ಮಾಸೂರ್ ಟಿಪ್ಪು ತಾಲೀಮ್ ದಾದಪೀರ್ ಅವರ ಪಟ್ಟ ಪೈ.ರೋಷನ್ ಮತ್ತು ಪಕೀರ್ ಅಹಮ್ಮದ್ ಸಾಹೇಬರ ಗರಡಿ ಎಂ.ಎನ್.ನಂಜರಾಜಪ್ಪನವರ ಶಿಷ್ಯ ಪೈ.ಮೈಕಲ್‌ರಾಜ್ ನಡುವೆ 2 ನಿಮಿಷ 13 ಸೆಕೆಂಡ್‌ಗಳ ಕಾಳಗ ನಡೆಯಿತು. ಪ್ರಥಮವಾಗಿ ನಡೆದ ಈ ಕುಸ್ತಿಯಲ್ಲಿ ಅಂತಿಮವಾಗಿ ರೋಷನ್ ಕೊರಳಿಗೆ ವಿಜಯ ಮಾಲೆ ಒಲಿಯಿತು.

ಕೊನೆಯಲ್ಲಿ ಮಹದೇವಪುರ ಹತ್ತುಜನಗಳ ಗರಡಿ ರಾಜಣ್ಣ ಅವರ ಪುತ್ರ ಪೈ.ವಿಕಾಸ್ ಮತ್ತು ದಾವಣಗೆರೆ ಪೈ.ಮಲ್ಲಪ್ಪ ಪಾಟೀಲ್ ಅವರ ತಮ್ಮ ಪೈ.ಬಸವರಾಜ ಪಾಟೀಲ್ ನಡುವೆ 1 ಗಂಟೆ 32 ನಿಮಿಷಗಳ ಕಾಲ ಮಾರ್ಫಿಟ್ ಕುಸ್ತಿ ನಡೆಯಿತು. ದಾವಣಗೆರೆಯ ಪೈ.ಬಸವರಾಜ ಪಾಟೀಲ್ ಗೆದ್ದು ಬೀಗಿದರು.


ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಮಾಜಿ ಮೇಯರ್ ಪುರುಷೋತ್ತಮ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಂಘದ ಅಧ್ಯಕ್ಷ ಪೈ.ಚಂದ್ರಶೇಖರ್, ಗೌರವಾಧ್ಯಕ್ಷ ಪೈ.ಫೋಟಾ ರಫೀಕ್, ಪೈ.ಸ್ಟಾರ್ ವೆಂಕಟೇಶ್ ಮತ್ತಿತರರು ಹಾಜರಿದ್ದರು.

# ಆಂಧ್ರ ಮಾಜಿ ಸಿಎಂ ಚಂದ್ರಬಾಬು ನಾಯ್ಡುಗೆ 14 ದಿನ ನ್ಯಾಯಾಂಗ ಬಂಧನ

ಅಮರಾವತಿ(ಆಂಧ್ರ), ಸೆ.10– ತೆಲುಗು ದೇಶಂ ಪಕ್ಷದ (ಟಿಡಿಪಿ) ಅಧ್ಯಕ್ಷ ಎನ್ ಚಂದ್ರಬಾಬು ನಾಯ್ಡು ಅವರನ್ನು ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ನ್ಯಾಯಾಲಯವು ಕೌಶಲ ಅಭಿವೃದ್ಧಿ ನಿಗಮದ ಹಗರಣ ಪ್ರಕರಣದಲ್ಲಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದೆ.

ಮಾಜಿ ಮುಖ್ಯಮಂತ್ರಿ ನಾಯ್ಡು ಅವರನ್ನು 14 ದಿನಗಳ ಕಾಲ ರಾಜಮಂಡ್ರಿ ಕೇಂದ್ರ ಕಾರಾಗೃಹದಲ್ಲಿ ಇರಲಿದ್ದಾರೆ. ಈ ಹಿನ್ನೆಲೆಯಲ್ಲಿ ಜೈಲಿನ ಸುತ್ತ ಸೆಕ್ಷನ್ 144 ಜಾರಿಗೊಳಿಸಲಾಗಿದೆ. ಸಿಐಡಿ ತಂಡವು ಶನಿವಾರ (ಸೆ.9) ಬೆಳಗ್ಗೆ 6 ಗಂಟೆಗೆ ನಂದ್ಯಾಲ್ ನಗರದ ಜ್ಞಾನಪುರಂನಲ್ಲಿರುವ ಆರ್.ಕೆ. ಫಂಕ್ಷನ್ ಹಾಲ್‌ನಿಂದ ಮಾಜಿ ಕೇಂದ್ರ ಸಚಿವ ನಾಯ್ಡು ಅವರನ್ನು ಬಂಧಿಸಿತ್ತು.

ಏತನ್ಮಧ್ಯೆ ಚಂದ್ರಬಾಬು ನಾಯ್ಡು ಅವರ ಪಕ್ಷದ ಟಿಡಿಪಿ, ನಾಯ್ಡು ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಇಡೀ ವಿಷಯದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದೆ. ಅಲ್ಲದೆ ಜನರು ಅವರ ಜೊತೆಗಿದ್ದಾರೆ ಎಂದು ಹೇಳಿದೆ. ಚಂದ್ರಬಾಬು ನಾಯ್ಡು ವಿಚಾರಣೆ ವೇಳೆ ಸಹಕರಿಸಿಲ್ಲ ಎಂದು ಸಿಐಡಿ ಹೇಳಿದೆ. ನಮ್ಮ ಪ್ರಶ್ನೆಗಳಿಗೆ ಅವರು ಅಸ್ಪಷ್ಟ ಉತ್ತರಗಳನ್ನು ನೀಡಿದ್ದಾರೆ. ಅಲ್ಲದೆ ಕೆಲವು ವಿಷಯಗಳು ನೆನಪಿಲ್ಲ ಎಂದು ಹೇಳಿದ್ದಾರೆ. ಈ 'ಕೇಸ್ ಡೈರಿ'ಗೆ ಸಂಬಂಧಿಸಿದ ಸಾಕ್ಷ್ಯದ ಭಾಗವಾಗಿರುವ ಟಿಪ್ಪಣಿ ಫೈಲ್‌ಗಳ ಆಧಾರದ ಮೇಲೆ ನಾಯ್ಡು ಅವರಿಗೆ ಪ್ರಶ್ನೆಗಳನ್ನು ಕೇಳಲಾಗಿತ್ತು.



ಸರ್ಕಾರಿ ಸಲಹೆಗಾರ ಎಸ್ ರಾಮಕೃಷ್ಣ ರೆಡ್ಡಿ ಮಾತನಾಡಿ, ಆರ್ಥಿಕ ಅಪರಾಧ ಪ್ರಕರಣಗಳಲ್ಲಿ ಪೊಲೀಸರು ಬಂಧನಕ್ಕೂ ಮುನ್ನ ನೋಟಿಸ್ ನೀಡುವ ಅಗತ್ಯವಿಲ್ಲ. ಎಫ್‌ಐಆರ್‌ನಲ್ಲಿ ಆರೋಪಿಯ ಹೆಸರು ನಮೂದಿಸದಿದ್ದರೂ ನೋಟಿಸ್ ನೀಡುವ ಅಗತ್ಯವಿಲ್ಲ ಎಂದರು. ಆಂಧ್ರಪ್ರದೇಶ ಪೊಲೀಸರು ನಾಯ್ಡು ಅವರನ್ನು ಕೌಶಲ್ಯಾಭಿವೃದ್ಧಿ ನಿಗಮದ ಹಗರಣದ ಪ್ರಮುಖ ಸಂಚುಕೋರ ಎಂದು ಬಣ್ಣಿಸಿದ್ದಾರೆ. ಈ ಹಗರಣದಿಂದ ರಾಜ್ಯ ಸರ್ಕಾರಕ್ಕೆ 300 ಕೋಟಿ ರೂ. ನಷ್ಟವಾಗಿದೆ ಎಂದು ಆರೋಪಿಸಲಾಗಿದೆ

### ಮನೆ ಬಾಗಿಲು ಮೀಟಿ ಕಳ್ಳತನ


ಮೈಸೂರು, ಸೆ.10(ಬಿಎಲ್‌ಯು)– ಮನೆ ಬಾಗಿಲು ಮೀಟಿರುವ ಕಳ್ಳರು ಚಿನ್ನಾಭರಣ ಸೇರಿದಂತೆ ಮೇಕೆಯನ್ನು ಕದ್ದೊಯ್ದಿರುವ ಘಟನೆ ಮೈಸೂರಿನ ಗೌಡ ಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಬಸವರಾಜು ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಮನೆಗೆ ಬೀಗ ಹಾಕಿ ಮನೆಯವರೆಲ್ಲಾ ಶನಿವಾರ ದೇವ ಸ್ಥಾನಕ್ಕೆ ತೆರಳಿದ್ದರು. ಈ ವೇಳೆ ಮನೆಗೆ ಬಾಗಿಲು ಮೀಟಿರುವ ಕಳ್ಳರು ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ಮೇಕೆಗಳನ್ನು ಕದ್ದೊಯ್ದಿದ್ದಾರೆ. ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮೆಡಿಕಲ್ ಸ್ಟೋರ್‌ನಲ್ಲಿ ಬೆಂಕಿ


ಮೈಸೂರು, ಸೆ.10(ಬಿಎಲ್‌ಯು) ಶಾರ್ಟ್ ಸರ್ಕ್ಯೂಟ್ ನಿಂದ ಮೆಡಿಕಲ್ ಸ್ಟೋರ್‌ಗೆ ಬೆಂಕಿ ಬಿದ್ದಿರುವ ಘಟನೆ ಮೈಸೂರಲ್ಲಿ ಸಂಭವಿಸಿದೆ ನಗರದ ಕೆ.ಆರ್.ಆಸ್ಪತ್ರೆ ಬಳಿಯ ಆರ್.ಕೆ. ಮೆಡಿಕಲ್ಸ್‌ನಲ್ಲಿ ಬೆಂಕಿ ಅನಾಹುತವಾಗಿದೆ. ಇಂದು ಮಧ್ಯಾಹ್ನ 2.40 ಗಂಟೆ ವೇಳೆ ಶಾರ್ಟ್ ಸರ್ಕ್ಯೂಟ್ ನಿಂದ ಮೆಡಿಕಲ್ ಸ್ಟೋರ್‌ನಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಕಂಪ್ಯೂಟರ್, ಔಷಧಿ ಹಾಗೂ ಕೆಲವು ವಸ್ತುಗಳು ಬೆಂಕಿಗಾಹುತಿಯಾಗಿದೆ ವಿಷಯ ತಿಳಿದು ತಕ್ಷಣವೇ ಸ್ಥಳಕ್ಕೆಬಂದ ಅಗ್ನಿಶಾಮಕ ದಳದವರು ಬೆಂಕಿ ನಂದಿಸಿದ್ದಾರೆ.



ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀ ಪಾದರು ಶುಕ್ರವಾರ ಮೈಸೂರಿನ ರಾಜ ರಾಜೇಶ್ವರಿನಗರದ ರಾಜರಾಜೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.



ಚಾಮುಂಡಿಪುರಂನಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಲ್ಲಿ ಇತ್ತೀಚೆಗೆ ಋಗ್ ಉಪಾಕರ್ಮವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರೇತರ ಸದಸ್ಯರಾಗಿ ನೇಮಕಗೊಂಡಿರುವ ಮರಿಸ್ವಾಮಿಗೌಡ ಅವರನ್ನು ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮೈಮುಲ್ ನಿರ್ದೇಶಕ ಬಿ.ಗುರುಸ್ವಾಮಿ, ಕೇರ್ಗಳ್ಳಿ ಬಸವೇಗೌಡ, 58ನೇ ವಾರ್ಡಿನ ರವಿ, ಬಡಗಲಹುಂಡಿ ಪ್ರಕಾಶ್ ಹಾಗೂ ಇತರರು ಅಭಿನಂದಿಸಿದರು.

# ಶಿಷ್ಟಾಚಾರ ಉಲ್ಲಂಘನೆ: ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಬೆಂಗಾವಲು ವಾಹನ ಚಾಲಕನ ಬಂಧನ

ನವದೆಹಲಿ, ಸೆ.10– ವಾಹನ ಚಾಲನೆಯಲ್ಲಿ ನಿರ್ಲಕ್ಷ್ಯ ತೋರಿ, ಶಿಷ್ಟಾಚಾರ ಉಲ್ಲಂಘನೆ ಮಾಡಿದ ಆರೋಪದ ಮೇಲೆ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರ ಬೆಂಗಾವಲು ಪಡೆಯ ವಾಹನವೊಂದರ ಚಾಲಕನನ್ನು ಬಂಧಿಸಲಾಯಿತು. ವಿಚಾರಣೆಯ ಬಳಿಕ ಆತನನ್ನು ಬಿಡುಗಡೆ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಜಿ20 ಶೃಂಗಸಭೆ ನಡೆಯುತ್ತಿರುವುದರಿಂದ ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಅವರು ತಂಗಿದ್ದ ತಾಜ್ ಹೋಟೆಲ್‌ಗೆ ಅಮೆರಿಕ ಅಧ್ಯಕ್ಷರ ಬೆಂಗಾವಲು ಪಡೆಯಿಂದ ಬಂದ ಕಾರೊಂದು ಪ್ರವೇಶಿಸಿದ ನಂತರ ಈ ವಿದ್ಯಾಮಾನ ಜರುಗಿದೆ. ಕಾರನ್ನು ನೋಡುತ್ತಿದ್ದಂತೆ ಸ್ಥಳದಲ್ಲಿದ್ದ ಭದ್ರತಾ ಅಧಿಕಾರಿಗಳು ಎಚ್ಚರಿಕೆ ಸಂದೇಶ ರವಾನಿಸಿದರು.

## ಮೈಸೂರಿನಲ್ಲಿ ಮಹಿಷ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ

# ಸಂವಿಧಾನ ಹಕ್ಕಿನಂತೆ ಮಹಿಷ ದಸರಾ ಆಚರಣೆ

ಮೈಸೂರು, ಸೆ.10(ಬಿಎಲ್‌ಯು)–ಸಂವಿಧಾನ ನೀಡಿರುವ ಹಕ್ಕಿನಂತೆ ನಮಗೆ ಬೇಕಾದ ಮಹಿಷ ದಸರಾ ಆಚರಣೆ ಮಾಡುತ್ತಿದ್ದರೂ ಇವರು ಗದ್ದಲ ಎಬ್ಬಿಸುತ್ತಿದ್ದಾರೆ. ಹಾಗಾದರೆ ನಾವು ಭಾರತೀಯರಲ್ಲವೆ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು ಪ್ರಶ್ನಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲೆಗಳ ಕಾಲೇಜಿನ ಸಭಾಂಗಣದಲ್ಲಿ ಮಹಿಷ ದಸರಾ ಆಚರಣಾ ಸಮಿತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ "ಮಹಿಷ ಮಂಡಲದ ಆದಿ ದೊರೆ ಮಹಿಷಾಸುರ– ಒಂದು ಚಾರಿತ್ರಿಕ ನೋಟ" ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಿಷ ದಸರಾ ಆಚರಣೆಯನ್ನು ವಿರೋಧ ಮಾಡುತ್ತಿರುವ ಅವರು ಒಬ್ಬ ರಾಜಕೀಯ ಭಯೋತ್ಪಾದಕ. ಅವರಿಗೆ ಸರಿಯಾದ ಪಾಠ ಕಲಿಸುತ್ತೇವೆ. ಅವರನ್ನು ಮಟ್ಟ ಹಾಕುತ್ತೇವೆ ಎಂದು ತಿಳಿಸಿದರು.

ಪುರಾಣ ಸುಳ್ಳು, ಇತಿಹಾಸ ಸತ್ಯ. ಹಾಗೆಂಯೇ ಚಾಮುಂಡೇಶ್ವರಿ ಮಿಥ್ಯ, ಮಹಿಷ ಸತ್ಯ. ಆದರೆ ವಾಸ್ತವತೆ ಹಾಗೂ ವಾಸ್ತವ ಸ್ಥಿತಿಯನ್ನು ಮರೆಮಾಚಿ ಸುಳ್ಳಿನ ಸರಮಾಲೆ ಸೃಷ್ಟಿಸಿ ಇನ್ನು ಎಷ್ಟು ಸಾವಿರ ವರ್ಷ ಆಳ್ವಿಕೆ ಮಾಡುತ್ತೀರಾ? ಎಂದು ಪ್ರಶ್ನಿಸಿದ ಪ್ರೊ. ಮಹೇಶ್ ಚಂದ್ರಗುರು, ಈಗ ನಮ್ಮವರನ್ನು ದಾರಿ ತಪ್ಪಿಸಲು ನಿಮಗೆ ಸಾಧ್ಯವಿಲ್ಲ, ಏಕೆಂದರೆ ಈಗ ನಾವಿದ್ದೇವೆ. ಹಳಿ ತಪ್ಪಿಸುತ್ತಿರುವ ನಿಮ್ಮ ವಿರುದ್ಧ ಸೆಟೆದು ನಿಂತು ನಮ್ಮವರನ್ನು ಸರಿದಾರಿಗೆ ತರುತ್ತೇವೆ ಎಂದರು.

### ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು



ಬಹುಸಂಖ್ಯಾತರನ್ನು ಕತ್ತಲೆಯಲ್ಲಿಟ್ಟು, ಗುಲಾಮಗಿರಿ ಪದ್ಧತಿಯನ್ನು ಮುಂದುವರೆಸುತ್ತಾರೆ. ಪುರಾಣದ ವಿಚಾರಗಳನ್ನು ಉಲ್ಲೇಖಿಸಿ ಜೀತದಾಳುಗಳಾಗಿ ಮಾಡಿಕೊಂಡಿದ್ದರು. ಸುಳ್ಳು ಹೇಳುವ ಪುರಾಣ ಅವರ ಪಾಲಿಗೆ ಆಹಾರವಾದರೆ, ನಮಗೆ ವಿಷ ಎಂದು ಪ್ರೊ.ಮಹೇಶ್ ಚಂದ್ರಗುರು ತಿಳಿಸಿದರು.

ಇದೇ ವೇಳೆ ಮಾತನಾಡಿದ ಅಂಬೇಡ್ಕರ್‌ವಾದಿ ಡಾ.ಕೃಷ್ಣಮೂರ್ತಿ ಚಮರಂ, ಇತಿಹಾಸದಲ್ಲಿರುವ ಸತ್ಯವನ್ನು ಹೆಕ್ಕಿ ತೆಗೆಯಬೇಕು. ಅಲ್ಲಿ ನಮ್ಮತನ ಏನಿದೆ ಎಂಬ ಸತ್ಯವನ್ನು ನಮ್ಮ ಬಹುಸಂಖ್ಯಾತರಿಗೆ ತಿಳಿಸಬೇಕು. ಈ ಮೂಲಕ ಜ್ಞಾನವನ್ನು ಅನಾವರಣಗೊಳಿಸಲು ಇತಿಹಾಸದ ಸತ್ಯ ಅರಿಯುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಇತಿಹಾಸ ಎಂಬುವುದು ತಾಯಿಯ ಗರ್ಭ ಇದ್ದ ಹಾಗೆ. ಇತಿಹಾಸವನ್ನು ತಿರುಚಿದರೆ, ತಾಯಿ ಗರ್ಭವನ್ನು ತಿರುಚಿದಂತೆ. ಈ ಹಿನ್ನೆಲೆಯಲ್ಲಿ ಬ್ರಾಹ್ಮಣಶಾಹಿಗಳು ಇತಿಹಾಸ ತಿರುಚಲು ಬಿಡಬಾರದು ಎಂದು ಮೈಸೂರಿನ ಉರಿಲಿಂಗಿ ಪೆದ್ದೀಶ್ವರ ಮಹಾಸಂಸ್ಥಾನ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಕರೆ ನೀಡಿದರು.

ಮಹಿಷನಂತಹ ಮಕ್ಕಳನ್ನು ಬೇಡಲಿ ಎಂದು ಅವರು ಸಲಹೆ ನೀಡಿದ್ದಾರೆ. ಆದರೆ ಮಹಿಷ ನಂತಹ ಮಕ್ಕಳಾಗಲು ನಮಗೆ ಹೆಮ್ಮೆ ಇದೆ ಎಂದು ಹೇಳಿದರು.

ಮಹಿಷನ ಇತಿಹಾಸ ಕುರಿತಂತೆ ಈ ದಿನದ ವಿಚಾರ ಸಂಕಿರಣದ ವಿಚಾರಧಾರೆಗಳು ಸೇರಿದಂತೆ ಮಹಿಷನಿಗೆ ಸಂಬಂಧಿಸಿದ ಹಲವು ವಿಚಾರಗಳನ್ನು ಸಮ್ಮಿಳನಗೊಳಿಸಿ ಅಕ್ಟೋಬರ್ 30 ರಂದು ಪುಸ್ತಕವೊಂದನ್ನು ಹೊರತರಲಾಗುವುದು. ಈ ಮೂಲಕ ಮಹಿಷನ ಬಗ್ಗೆ ಇತಿಹಾಸದಲ್ಲಿರುವ ಸತ್ಯದ ವಿಚಾರಗಳನ್ನು ಜನರಿಗೆ ತಿಳಿಸಲಾಗುವುದು ಎಂದು ಸ್ವಾಮೀಜಿ ತಿಳಿಸಿದರು.

ಚಾಮುಂಡೇಶ್ವರಿ ಹಾಗೂ ಮಹಿಷನ ನಡುವೆ ಬಹಳಷ್ಟು ವ್ಯತ್ಯಾಸವಿದೆ ಮಹಿಷ ದಸರಾ ಆಚರಣೆ ಮೂಲಕ ನಾವು ಸಾಮರಸ್ಯ ಕೆಡಿಸುವುದಿಲ್ಲ ಆದರೆ ಇವರಿಗೆ ಇವರ ದೇವರು ಎಷ್ಟು ಮುಖ್ಯವೋ, ನಮಗೂ ಕೂಡ ನಮ್ಮ ಮಹಿಷ ಅಷ್ಟೇ ಮುಖ್ಯ ಎಂದು ಸ್ವಾಮೀಜಿ ಹೇಳಿದರು.

ಹಿರಿಯ ಲೇಖಕ ಸಿದ್ದಸ್ವಾಮಿ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್, ಪ್ರಾಧ್ಯಾಪಕ ಡಾ.ಶಿವರಾಜ್, ಡಾ.ಚಿನ್ನಸ್ವಾಮಿ ಸೋಸಲೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ನಿವ್ವಳ ಲಾಭದಲ್ಲಿ ತಿ.ನರಸೀಪುರ ಸ್ಫಟಿಕ ಸಹಕಾರ ಸಂಘ



ತಿ.ನರಸೀಪುರ,ಸೆ.10– ಸ್ಫಟಿಕ ವಿವಿಧೋದ್ದೇಶ ಸಹಕಾರ ಸಂಘವು ಪ್ರಸಕ್ತ ಆರ್ಥಿಕ ಸಾಲಿನಲ್ಲಿ 54,179 ರೂಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆದಿದ್ದು, ಸಂಘದ ಸದಸ್ಯರು ಹೆಚ್ಚಿನ ಪ್ರಮಾಣದಲ್ಲಿ ಷೇರುದಾರರನ್ನು ಸಂಘಕ್ಕೆ ನೋಂದಣಿ ಮಾಡಿಸುವ ಮೂಲಕ ಸಂಘವು ಮತ್ತಷ್ಟು ಆರ್ಥಿಕ ಪ್ರಗತಿ ಸಾಧಿಸಲು ಸಹಕಾರ ನೀಡುವಂತೆ ಅಧ್ಯಕ್ಷ ಜಿ.ರಾಜೇಶ್ ಹೇಳಿದರು.

ಪಟ್ಟಣದ ವಿವೇಕಾನಂದ ನಗರದ ಅಖಿಲ ಭಾರತ ವೀರಶೈವ ಮಹಾಸಭಾ ವಿದ್ಯಾರ್ಥಿ ನಿಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸ್ಫಟಿಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ 2022–23ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘವು ಈವರೆಗೆ 12 ಲಕ್ಷ ರೂ.ಗಳ ವಹಿವಾಟು ನಡೆಸಿದೆ. 2024 ರ ಸಾಲಿಗೆ 15 ಲಕ್ಷ ರೂ.ಗಳ ಬಜೆಟ್ ಅಂದಾಜಿಸಲಾಗಿದೆ. ಸದಸ್ಯರ ಸಹಕಾರದಿಂದ ಸಣ್ಣ ಮಟ್ಟದಲ್ಲಿ ಆರಂಭಗೊಂಡ ಸಂಘವು ಅಂಬೆಗಾಲಿಡುತ್ತಾ ಯಶಸ್ವಿಯತ್ತ ಮುನ್ನಡೆಯುತ್ತಿದೆ ಎಂದರು. ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘದಲ್ಲಿ 794 ಷೇರುದಾರರಿದ್ದು,ಇನ್ನೂ ಹೆಚ್ಚಿನ ಸದಸ್ಯತ್ವ ಅವಶ್ಯಕತೆ ಇದೆ. ಸಹಕಾರ ಸಂಘದ ಪ್ರತಿಯೊಬ್ಬ ಷೇರುದಾರರು ತಮ್ಮ ತಮ್ಮ ಗ್ರಾಮಗಳಲ್ಲಿ ಸಂಘದಿಂದ ದೊರಕುವ ಸೌಲಭ್ಯಗಳನ್ನು ಜನರಿಗೆ ತಿಳಿಸಿ ಸಂಘದ ಸದಸ್ಯತ್ವ ಕೊಡಿಸಲು ಮುಂದಾದರೆ ಸಂಘ ಮತ್ತಷ್ಟು ಅಭಿವೃದ್ಧಿ ಸಾಧಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಮಾಜಿ ಅಧ್ಯಕ್ಷರೊಬ್ಬರು 2 ಲಕ್ಷ ರೂ.ಗಳನ್ನು ಸಂಘಕ್ಕೆ ಪಾವತಿಸಬೇಕಿದೆ.ಆದರೆ ಪಡೆದ ಹಣವನ್ನು ಹಿಂದಿರಿಗಿಸದೇ ಬೇಜವಾಬ್ದಾರಿ ವರ್ತನೆ ತೋರುತ್ತಿದ್ದಾರೆ. ಮಾನವೀಯ ದೃಷ್ಟಿಯಿಂದ ಅವರ ಮೇಲೆ ಕಾನೂನು ಕ್ರಮಕ್ಕೆ ಮುಂದಾಗಿಲ್ಲ.ಸಂಘದ ಸದಸ್ಯರು ಅವರ ಮನವೊಲಿಸಿ ಹಣ ಕೊಡಿಸಿದಲ್ಲಿ ಮತ್ತಷ್ಟು ಸದಸ್ಯರಿಗೆ ಸಾಲ ಸೌಲಭ್ಯ ದೊರಕಿಸಿಕೊಡಬಹುದಾಗಿದೆ ಎಂದರು.

ಸಂಘದ ನಿರ್ದೇಶಕ ತೊಂಟೇಶ್ ಮಾತನಾಡಿ, ಈಗ ಪ್ರತಿ ತಿಂಗಳು ಮೂವರು ಸದಸ್ಯರಿಗೆ ತಲಾ 30 ಸಾವಿರ ರೂ.ಗಳ ಸಾಲ ನೀಡಲಾಗುತ್ತಿದೆ. ಸಂಘದ ಬೈಲಾ ಪ್ರಕಾರ 40 ಸಾವಿರಕ್ಕೆ ಸಾಲ ಸೌಲಭ್ಯವನ್ನು ಹೆಚ್ಚಿಸಬಹುದು. ಆದರೆ ನಿಯಮದ ಪ್ರಕಾರ 40 ಸಾವಿರ ರೂ.ಗಳ ಸಾಲಕ್ಕೆ 4 ಸಾವಿರ ರೂ.ಗಳನ್ನು ಡಿಪಾಸಿಟ್ ಇಡಬೇಕಾಗುತ್ತದೆ ಎಂದರು.

ಸಭೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಬಂದ ಲಾಭವನ್ನು ಸದಸ್ಯರ ಒಪ್ಪಿಗೆಯ ಮೇರೆಗೆ ಸಂಘದ ಅಭಿವೃದ್ಧಿಗೆ ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

ಸಂಘದ ಅಭಿವೃದ್ಧಿಗೆ ಶ್ರಮಿಸಿದ ಅಧ್ಯಕ್ಷ ಜಿ.ರಾಜೇಶ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎಸ್.ಪಂಕಜರನ್ನು ಸನ್ಮಾನಿಸಲಾಯಿತು. ಸಂಘದ ಉಪಾಧ್ಯಕ್ಷೆ ಸೌಮ್ಯ ರಾಜಬುದ್ದಿ, ನಿರ್ದೇಶಕರಾದ ಜಿ.ಪರಶಿವಮೂರ್ತಿ (ಐಡಿಯಾ) ಮಹದೇವಸ್ವಾಮಿ, ಬಸವ ಶ್ರೀ ಸ್ಟುಡಿಯೋ ಮಾಲೀಕ ಜಗದೀಶ್, ಎಂ. ಷಡಕ್ಷರಿ (ಬಾಬು) ಉಕ್ಕಲಗೆರೆ ರಾಜು, ಕಾರ್ಯದರ್ಶಿ ಸಿ.ಎಸ್.ಪಂಕಜ ಹಾಜರಿದ್ದರು.



ಹೆಚ್.ಡಿ.ಕೋಟೆ ಶ್ರೀ ವಿನಾಯಕ ವಾಹನ ಚಾಲಕರ ಸಂಘ ಹ್ಯಾಂಡ್‌ಪೋಸ್ಟ್ ಯಾರಳ್ಳಿ ಕಾವಲ್ ಸಂಘದ ಅಧ್ಯಕ್ಷರಾಗಿ ಶಿವಪ್ಪ ಶಿರಮಳ್ಳಿ, ಉಪಾಧ್ಯಕ್ಷರಾಗಿ ಅಲ್ತಾಫ್, ಗೌರವಾಧ್ಯಕ್ಷರಾಗಿ ಕೆ.ಬಿ.ಕಾಶಿಪತಿ, ಪ್ರಧಾನ ಕಾರ್ಯದರ್ಶಿ ಎಚ್.ಜಿ.ಕೃಷ್ಣಮೂರ್ತಿ, ಸಹ ಕಾರ್ಯದರ್ಶಿ ಎನ್.ಕೆ.ಕುಮಾರ್, ಖಜಾಂಚಿ ಮುಸ್ತಾಪ, ನಿರ್ದೇಶಕರುಗಳಾಗಿ ನಾಗರಾಜು ಮಗ್ಗೆ, ನಾಗರಾಜು ಬೀಚನಹಳ್ಳಿ, ನಂಜುಂಡ ನಾಯ್ಕ, ನಾಗೇಶ ನೇರಳೆ, ಸೋಮೇಶ, ಎಲ್.ಲಿಂಗರಾಜು, ಪ್ರಕಾಶ್, ದಸ್ತಗೀರ್, ಮಾದೇವಸ್ವಾಮಿ ಅವರು ಆಯ್ಕೆಗೊಂಡಿದ್ದಾರೆ.

# ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ತಂಡಕ್ಕೆ ಟ್ರ್ಯಾಕ್ ಶೂಟ್



ಹೆಚ್.ಡಿಕೋಟೆ ಸೆ10–ತಾಲೂಕಿನ ಹ್ಯಾಂಡ್ ಪೋಸ್ಟ್ ಯರಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳು ಬಾಲಕಿಯರ ವಿಭಾಗದಲ್ಲಿ ತಾಲೂಕು ಮಟ್ಟದಲ್ಲಿ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು, ತಂಡಕ್ಕೆ ಡಿಆರ್ ಎಸ್‌ಓ ಚಂದನ್ ಮತ್ತು ಜಂಗಮ ಫೌಂಡೇಶನ್ ವತಿಯಿಂದ ಟ್ರ್ಯಾಕ್ ಶೂಟ್ ಅನ್ನು ಉಚಿತವಾಗಿ ವಿತರಿಸಲಾಯಿತು.

ಬಳಿಕ ಮಾತನಾಡಿದ ದೈಹಿಕ ಶಿಕ್ಷಕ ಎಸ್.ಎಲ್.ರವಿ ಅವರು, ನಮ್ಮ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುವುದು ತಾಲೂಕಿಗೆ ಹಾಗೂ ನಮ್ಮ ಶಾಲೆಗೆ ಕೀರ್ತಿ ತಂದಂತಾಗಿದೆ. ಇಂತಹ ಒಂದು ಪ್ರತಿಭೆ ಇರುವ ಮಕ್ಕಳಿಗೆ ಉತ್ತೇಜನ ಕೊಡುವ ನಿಟ್ಟಿನಲ್ಲಿ ಬಡ ಕ್ರೀಡಾಪಟುಗಳು ಕ್ರೀಡಾ ಸಮಾವೇಶಗಳಿಲ್ಲದೆ ಶಾಲಾ ಸಮವಸ್ತ್ರದಲ್ಲಿಯೇ ನಮ್ಮ ಶಾಲೆಗೆ ಪ್ರಥಮ ಸ್ಥಾನ ತಂದು ಕೊಟ್ಟಿದ್ದಾರೆ. ಮತ್ತು ಜಿಲ್ಲಾ ತಂಡಕ್ಕೆ ಮಟ್ಟಕ್ಕೆ ಆಯ್ಕೆ ಆಗಿರುವುದನ್ನು ಮನಗಂಡ ಜಂಗಮ ಫೌಂಡೇಶನ್ ಮತ್ತು ಡಿಆರ್‌ಎಫ್‌ಓ ಚಂದನ್ ರವರಿಗೆ ನಮ್ಮ ಶಾಲೆಯ ಸುಮಾರು 12 ಬಾಲಕಿಯರ ಸದಸ್ಯರನ್ನು ಹೊಂದಿರುವ ವಾಲಿಬಾಲ್ ತಂಡಕ್ಕೆ ಟ್ರ್ಯಾಕ್ ಶೂಟ್ ನೀಡಿರುವುದು ಸಂತೋಷ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ವಿಶ್ವನಾಥ್ ಪ್ರಸಾದ್, ಶಿಕ್ಷಕರಾದ ಮಹದೇವಯ್ಯ, ಶಿಕ್ಷಕ ವೃಂದ ಮತ್ತು ಪುರಸಭೆಯ ಸದಸ್ಯರಾದ ಪ್ರೇಮ್ ಸಾಗರ್, ಪ್ರಕಾಶ್ ಮುಂತಾದವರು ಹಾಜರಿದ್ದರು.

# ಜನತಾ ಚಿತ್ರಮಂದಿರವನ್ನು ಕಲಾ ಭವನವನ್ನಾಗಿ ಪರಿವರ್ತಿಸಿ

## ಡೀಡ್ ಸಂಸ್ಥೆ ನಿರ್ದೇಶಕ ಡಾ.ಶ್ರೀಕಾಂತ್ ಆಗ್ರಹ



ಹುಣಸೂರುಸೆ.10– ನಗರದ ಸೇತುವೆ ಬಳಿ ಹಲವಾರು ವರ್ಷಗಳಿಂದ ಪಾಳು ಬಿದ್ದಿರುವ ಜನತಾ ಚಿತ್ರಮಂದಿರವನ್ನು ಹುಣಸೂರು ಕಲಾ ಭವನವನ್ನಾಗಿ ನಿರ್ಮಾಣ ಮಾಡುವಂತೆ ಡೀಡ್ ಸಂಸ್ಥೆ ನಿರ್ದೇಶಕ ಡಾ.ಶ್ರೀಕಾಂತ್ ಶಾಸಕರಲ್ಲಿ ಮನವಿ ಮಾಡಿದ್ದಾರೆ.

ನಗರಸಭೆ ಅಧೀನದಲ್ಲಿರುವ ಚಿತ್ರ ಮಂದಿರ ಅನೇಕ ವರ್ಷಗಳಿಂದ ಪಾಳು ಬಿದ್ದು ಗಿಡ–ಗಂಟಿಗಳು ಬೆಳೆದು ನಿಂತಿವೆ ಹಾಗೂ ಈ ಹಿಂದೆ ಚಿತ್ರ ಮಂದಿರವನ್ನು ಬಾಡಿಗೆಗೆ ಪಡೆದಿದ್ದ ಗುತ್ತಿಗೆದಾರನಿಂದ ಲಕ್ಷಾಂತರ ರೂಪಾಯಿ ಬಾಡಿಗೆ ಬಾಕಿ ಇದ್ದರು. ಅದರ ವಸೂಲಾತಿಗಾಗಿ ನಗರಸಭೆಯ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗದೆ ಮೌನ ವಹಿಸಿದ್ದಾರೆ ಎಂದು ಅವರು ದೂರಿದ್ದಾರೆ.

ಗುತ್ತಿಗೆ ದಾರನ ವಿರುದ್ಧ ಈ ವರೆವಿಗೂ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಹಾಗೂ ಚಿತ್ರಮಂದಿರವನ್ನು ನಗರಸಭೆ ತಮ್ಮ ವಶಕ್ಕೆ ಪಡೆಯದೆ ಇನ್ನು ಮೀನಾಮೇಷ ಎಣಿಸುತ್ತಿದೆ. ಇದಕ್ಕೆ ಏನಾದರೂ ಕಾನೂನು ತೊಡಕುಗಳಿದ್ದರೆ ನಗರಸಭೆಯ ಕಾನೂನು ಸಲಹೆಗಾರರಿಂದ ಮಾಹಿತಿ ಪಡೆದು ಕಟ್ಟಡವನ್ನು ತಮ್ಮ ವಶಕ್ಕೆ ಪಡೆದು ಬೇರೆಯವರಿಗಾದರೂ ಬಾಡಿಗೆ ನೀಡಿದರೆ ನಗರಸಭೆಗೆ ಲಕ್ಷಾಂತರ ರೂ. ಆದಾಯ ಬರಲಿದೆ. ಇದಕ್ಕೂ ಅಧಿಕಾರಿಗಳು ಮುಂದಾಗುತ್ತಿಲ್ಲ. ಚುನಾಯಿತ ಜನ ಪ್ರತಿನಿಧಿಗಳು ಸಹ ಈ ಬಗ್ಗೆ ಚಕಾರವೆತ್ತದೆ ಮೌನವಹಿಸಿದ್ದಾರೆ ಎಂದು ಅವರು ಆಪಾದಿಸಿದರು. ಈ ಬಗ್ಗೆ ನಗರಸಭೆಯ ಆಡಳಿತಾಧಿಕಾರಿಗಳಾದ ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡು ಪಾಳು ಬಿದ್ದಿರುವ ನಗರಸಭೆಯ ಅಸ್ತಿಯನ್ನು ಮರು ಬಳಕೆಗೆ ಅವಕಾಶ ಮಾಡಿಕೊಡಬೇಕೆಂದು ಡಾ.ಶ್ರೀಕಾಂತ್ ಸಾರ್ವಜನಿಕರ ಪರವಾಗಿ ಮನವಿ ಮಾಡಿದ್ದಾರೆ.



ಮೂಗೂರಿನಲ್ಲಿ ಶ್ರೀ ಶನೇಶ್ವರ ಸ್ವಾಮಿ ದೇವಾಲಯದಲ್ಲಿ 1.40 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ನೂತನ ಪಲ್ಲಕ್ಕಿಯನ್ನು ಭಕ್ತರ ಸಮ್ಮುಖದಲ್ಲಿ ಲೋಕಾರ್ಪಣೆ ಮಾಡಿದ ಬಳಿಕ ಪೂಜೆ ಸಲ್ಲಿಸಿ ಸ್ವಾಮಿಯ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು. ದೇಗುಲದಲ್ಲಿ ಅನ್ನ ಸಂತರ್ಪಣೆ ನಡೆಯಿತು

# ಗುರು ಮಲ್ಲೇಶ್ವರ ಸಹಕಾರ ಸಂಘಕ್ಕೆ ಜಿಲ್ಲಾ ಮಟ್ಟದ ಪ್ರಶಸ್ತಿ



ನಂಜನಗೂಡು, ಸೆ.10– ಆರ್ಥಿಕ ಶಿಸ್ತು, ಕಾರ್ಯ ಚಟುವಟಿಕೆ ಹಾಗೂ ಸಾಮಾಜಿಕ ಸೇವಾ ಕಾರ್ಯವನ್ನು ಪರಿಗಣಿಸಿ 60ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಜಿಲ್ಲಾ ಮಟ್ಟದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿಗೆ ಶ್ರೀ ಗುರು ಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘ ಭಾಜನವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಶ್ರೀ ಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಎಚ್.ಎಂ.ನಂದಿನಿ ಮಹೇಶ್ ಹೇಳಿದರು.

ಮಲ್ಲನಮೂಲೆ ಶ್ರೀ ಗುರುಕಂಬಳೀಶ್ವರ ಮಠದ ಸಭಾಂಗಣದಲ್ಲಿ ಭಾನುವಾರ ನಡೆದ ಶ್ರೀ ಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಸಂಘದ ಕಾರ್ಯ ಚಟುವಟಿಕೆ ಹಾಗೂ ಆರ್ಥಿಕ ಶಿಸ್ತಿನಿಂದ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಭಾಜನರಾಗುವ ಹಿಂದೆ ಪ್ರತಿಯೊಬ್ಬ ಸದಸ್ಯರ ಸಹಕಾರವನ್ನು ಮರೆಯುವಂತಿಲ್ಲ. ಮಹಿಳೆಯರು ದೃಢಸಂಕಲ್ಪದೊಂದಿಗೆ ಹೆಜ್ಜೆ ಇಟ್ಟರೇ ಯಾವ ಸಾಧನೆಯೂ ಅಸಾಧ್ಯವಲ್ಲ ಎಂಬುದಕ್ಕೆ ನಮ್ಮ ಸಂಘ ನಿದರ್ಶನವಾಗಿದೆ. ಕಳೆದ 9 ವರ್ಷಗಳಿಂದಲೂ ಸಂಘವು ಆರ್ಥಿಕವಾಗಿ ಲಾಭದತ್ತ ಮುನ್ನಡೆಯುತ್ತಿದ್ದು, 2022–23ನೇ ಸಾಲಿನಲ್ಲಿ 1.06 ಕೋಟಿ ರೂ. ವಹಿವಾಟು ನಡೆಸಿ 11.18 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಇನ್ನು ಸಂಘಕ್ಕೆ ಸ್ವಂತ ನಿವೇಶನ ಖರೀದಿಸುವ ನಿಟ್ಟಿನಲ್ಲಿ ಈಗಾಗಲೇ ಪ್ರಯತ್ನ ನಡೆಸಿದ್ದು, ಮಹದೇಶ್ವರ ಲೇಔಟ್‌ನಲ್ಲಿ ಸಿಎ ನಿವೇಶನಕ್ಕೆ ಮುಡಾದಲ್ಲಿ ಅರ್ಜಿ ಹಾಕಿದ್ದು, ಸಂಘಕ್ಕೆ ನಿವೇಶನ ಗುರುತಿಸಲಾಗಿದೆ. ಕೆಲವು ತಾಂತ್ರಿಕ ಕಾರಣಗಳಿಂದಾಗಿ ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಮುಂಬರುವ ದಿನಗಳಲ್ಲಿ ಸಂಘಕ್ಕೆ ನಿವೇಶನ ನೋಂದಣಿ ಮಾಡಿಸಿಕೊಂಡು ಕಟ್ಟಡ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದರು.

ಬೆಂಗಳೂರಿನ ಇನ್ಸ್‌ಪೈರ್ ಫುಡ್ ಇಂಡಸ್ಟ್ರಿ ಮಾಲೀಕರಾದ ಪ್ರಣ್ಮ್ಯ ಮಾತನಾಡಿ, ಮಹಿಳೆಯರ ಸಬಲೀಕರಣದ ಮೇಲೆ ದೇಶದ ಜಿಡಿಪಿ ಅವಲಂಬಿಸಿದೆ. ನಂಜನಗೂಡಿನಲ್ಲಿ ಮಹಿಳೆಯರೇ ಸೇರಿ ಸಹಕಾರ ಸಂಘವನ್ನು ಆರ್ಥಿಕವಾಗಿ ಮುನ್ನಡೆಸುವ ಮೂಲಕ ಮಾದರಿಯಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕೂಡ್ಲಾಪುರ ಗ್ರಾಮದ ವಿದ್ಯಾರ್ಥಿನಿ ವಿದ್ಯಾ ಅವರ ಉನ್ನತ ವ್ಯಾಸಂಗಕ್ಕಾಗಿ ಸಂಘದ ವತಿಯಿಂದ ಆರ್ಥಿಕ ನೆರವು ನೀಡಲಾಯಿತು. ಇದೇ ಸಂದರ್ಭ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಲಾಯಿತು.

ಮಲ್ಲನಮೂಲೆ ಗುರುಕಂಬಳೀಶ್ವರ ಮಠದ ಕಿರಿಯ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಸಂಘದ ಕಾರ್ಯದರ್ಶಿ ನೇತ್ರಾವತಿ ಸೋಮಣ್ಣ, ಉಪಾಧ್ಯಕ್ಷೆ ಉಷಾ, ನಿರ್ದೇಶಕರಾದ ಕೋಮಲ ಮಹಾಲಿಂಗಸ್ವಾಮಿ, ಭ್ರಮರಾಂಬಿಕೆ, ಸುಜಾತ, ಗುಣವತಿ, ಚೈತ್ರ, ಶ್ರೀಧರಿ, ಮಲ್ಲಮ್ಮಣಿ, ಶಿವಮ್ಮ, ಭಾಗ್ಯ ಉಪಸ್ಥಿತರಿದ್ದರು.

## ಪುಟ್ಟಮಾದಪ್ಪ ನಿಧನ



ಸರಗೂರು, ಸೆ10– ಪಟ್ಟಣದ 11ನೇ ವಾರ್ಡ್ ಬಿಡಗಲು ನಿವಾಸಿ ವೀರಶೈವ ಸಮಾಜದ ಯಜಮಾನರಾದ ಪುಟ್ಟಮಾದಪ್ಪ (ಪಾಪಣ್ಣ) ಶನಿವಾರ ರಾತ್ರಿ ನಿಧನರಾಗಿದ್ದಾರೆ. ದಿವಂಗತರಿಗೆ 52 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ತಾಲೂಕು ವೀರಶೈವ ಸಮಾಜ ಸೇರಿದಂತೆ ಎಲ್ಲಾ ಸಮುದಾಯದ ಬಂಧುಗಳು ದಿವಂಗತರ ಅಂತಿಮ ದರ್ಶನ ಪಡೆದರು. ಇವರ ಅಂತ್ಯಕ್ರಿಯೆಯನ್ನು ಮೃತರ ಜಮೀನಿನಲ್ಲಿ ಭಾನುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಕೇಬಲ್ ವೆಂಕಟಪ್ಪ



**ಸರಗೂರು:** ಪಟ್ಟಣದ 10ನೇ ವಾರ್ಡ್‌ನ ನಿವಾಸಿ ಕೇಬಲ್ ವೆಂಕಟಪ್ಪ ಎಸ್.ವಿ. (58) ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ಭಾನುವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಎಂ.ಕೆ.ಕೃಷ್ಣ



**ಹೆಚ್.ಡಿ.ಕೋಟೆ:** ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿಯಾದ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಎಂ.ಕೆ.ಕೃಷ್ಣ(73) ಭಾನುವಾರ ನಿಧನರಾಗಿದ್ದಾರೆ.

ಮೃತರು ಪತ್ನಿ, ಮೂವರು ಪುತ್ರಿಯರು, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಸೋಮವಾರ 12 ಗಂಟೆಗೆ ಬೀಚನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

**ಸಂತಾಪ:** ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಶಾಸಕ ಅನಿಲ್ ಚಿಕ್ಕಮಾದು, ಮೈಸೂರು ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಕೋಟೆ, ಸರಗೂರು, ಕಾಂಗ್ರೆಸ್ ಪಕ್ಷದ ಮುಖಂಡರುಗಳು, ತಾಲೂಕು ಗುತ್ತಿಗೆದಾರರು ಸಂತಾಪ ಸೂಚಿಸಿದ್ದಾರೆ.

# ಶೀಘ್ರದಲ್ಲೇ ಮೈಮುಲ್‌ನಿಂದ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯ ಉದ್ಘಾಟನೆ



ಬೆಟ್ಟದಪುರ, ಸೆ.10– ಉನ್ನತ ವ್ಯಾಸಂಗ ಮಾಡುತ್ತಿರುವ ಹಾಲು ಉತ್ಪಾದಕರ ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಮೈಮುಲ್ ವತಿಯಿಂದ ಮೈಸೂರಿನಲ್ಲಿ ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯವನ್ನು ಕೆಲವೇ ತಿಂಗಳುಗಳಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಮೈಮುಲ್ ಅಧ್ಯಕ್ಷ ಪಿಎಂ ಪ್ರಸನ್ನ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದ ತುಂಗ ಹಾಲು ಉತ್ಪಾದಕ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಿಂದ ರಾಜ್ಯದಲ್ಲೇ ಅತಿ ಹೆಚ್ಚು ಹಾಲಿನ ದರವನ್ನು ನೀಡುತ್ತಿರುವ ಮೈಮುಲ್ ಮುಂದಿನ ದಿನಗಳಲ್ಲಿ ಒಕ್ಕೂಟದ ಹಿತದೃಷ್ಟಿಯಿಂದ ಖರೀದಿ ದರವನ್ನು ಕಡಿಮೆ ಮಾಡುವ ಸಂಭವವಿದೆ ಎಂದರು.

ಉತ್ತಮ ಹಾಲು ಸರಬರಾಜು ಮಾಡುವುದರಿಂದ ನಿಮ್ಮ ಸಂಘವು ಅಭಿವೃದ್ಧಿಯಾಗುತ್ತದೆ. ಅಲ್ಲದೆ ಮೈಸೂರು ಒಕ್ಕೂಟವು ಕೂಡ ಅಭಿವೃದ್ಧಿಯತ್ತ ಸಾಗುತ್ತದೆ. ಒಕ್ಕೂಟವು ಹೆಚ್ಚು ಲಾಭಾಂಶ ಗಳಿಸಿದಲ್ಲಿ ಅದರ ಉಪಯೋಗ ಪ್ರತಿ ಹಾಲು ಉತ್ಪಾದಕರಿಗೂ ತಲುಪುತ್ತದೆ ಎಂದರು.

ಸಂಘದ ಅಧ್ಯಕ್ಷ ಟಿ.ನಟರಾಜ್, ನಿರ್ದೇಶಕರಾದ ಗೋಪಾಲರಾಜೆ ಅರಸ್, ಕರೀಗೌಡ, ಸೂರೇಗೌಡ, ಪುಟ್ಟರಾಜೇ ಅರಸ್, ಸತೀಶ್ ರಾಜೆ ಅರಸ್, ಕೆ.ರಾಮೇಗೌಡ, ರಶ್ಮಿ, ಎಂ.ಮಹೇಶ್, ಜವರಯ್ಯ, ಮೈಮುಲ್ ನಿವೃತ್ತ ವ್ಯವಸ್ಥಾಪಕ ಡಾ.ಸಣ್ಣ ತಮ್ಮೇಗೌಡ, ಸಹಾಯಕ ವ್ಯವಸ್ಥಾಪಕ ಡಾ. ಎಮ್.ಸಿ. ಸತೀಶ್, ವಿಸ್ತರಣಾಧಿಕಾರಿ ನಿಶ್ಚಿತ್, ಸತೀಶ್, ನಂದಿನಿ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ರವಿ, ಸಂಘದ ಸಿಇಓ ಸವಿತಾ, ಹಾಲು ಪರೀಕ್ಷಕ ಶಾಂತಕುಮಾರ್ ಹಾಗೂ ಸಿಬ್ಬಂದಿ ಸೇರಿದಂತೆ ಸದಸ್ಯರುಗಳು ಹಾಜರಿದ್ದರು.

## ಸೆ.13ಕ್ಕೆ ವಾರ್ಷಿಕ ಮಹಾಸಭೆ

ಮಲ್ಕುಂಡಿ, ಸೆ.10– ಸಮೀಪದ ಹುರ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸೆ.13 ರಂದು ಸಂಘದ ಆವರಣದಲ್ಲಿ ಏರ್ಪಡಿಸಲಾಗಿದ್ದು, ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಬೇಕೆಂದು ಸಿಇಓ ನಾಗರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಕಿಕ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಜೈಲರ್(ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಜವಾನ್ (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕಥಾ ಚಿತ್ರ (ಕ) | 4 ಪ್ರದರ್ಶನಗಳು |
| **ಗಾಯತ್ರಿ** | |
| ಸಪ್ತಸಾಗರದಾಚೆ ಎಲ್ಲೋ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಜವಾನ್ (ಹಿ) | 4 ಪ್ರದರ್ಶನಗಳು |
| **ಸಂಗಂ** | |
| ಜವಾನ್ (ಹಿ) | 4 ಪ್ರದರ್ಶನಗಳು |
| **ಲಿಡೋ** | |
| ಖುಷಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಜವಾನ್ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ನಮೋ ಭೂತಾತ್ಮ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.20ಕ್ಕೆ, ಮ.1.10ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ, ಜವಾನ್ (ಹಿಂ): ಸಂ.4ಕ್ಕೆ. |
| ಸ್ಕ್ರೀನ್ 2 | ಲೂಸಿಯಾ (ಕ): ಬೆ.10.05ಕ್ಕೆ, ಜೈಲರ್ (ಕ): ಮ.12.45ಕ್ಕೆ, ಜೈಲರ್ (ತ): ಮ.3.55ಕ್ಕೆ, ಖುಷಿ (ತೆ): ರಾ.7.10ಕ್ಕೆ, ಜವಾನ್ (ಹಿಂ): ರಾ.10.25ಕ್ಕೆ. |
| ಸ್ಕ್ರೀನ್ 3 | ದಿ ನನ್ 2 (ಇಂ): ಬೆ.10.55ಕ್ಕೆ, ರಾ.10.10ಕ್ಕೆ, ಟೋಬಿ (ಕ): ಮ.1.10ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಸಂ.4.05ಕ್ಕೆ, ಜವಾನ್ (ಹಿಂ): ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ಸಂ.6.55ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ. |
| ಸ್ಕ್ರೀನ್ 2 | ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ. |
| ಸ್ಕ್ರೀನ್ 3 | ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 4 | ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 2 | ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ. |
| ಸ್ಕ್ರೀನ್ 3 | ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 4 | ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಗೋದಾಮು ನಿರ್ಮಾಣಕ್ಕೆ ಗುದ್ದಲಿ ಪೂಜೆ

ಹಿರೀಕ್ಯಾತನಹಳ್ಳಿ, ಸೆ.10– ಹುಣಸೂರು ತಾಲೂಕಿನ ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ವತಿಯಿಂದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಎಂಎಸ್‌ಸಿ ಯೋಜನೆಯ ಗಾವಡಗೆರೆ ಗ್ರಾಮದಲ್ಲಿ 1.17 ಕೋಟಿ ವೆಚ್ಚದಲ್ಲಿ 1000 ಎಂಟಿ ಸಾಮರ್ಥ್ಯದ ಗೋದಾಮು ನಿರ್ಮಾಣಮಾಡಲು ಸಂಘದ ಅಧ್ಯಕ್ಷ ಆರ್.ಶಂಕರಪ್ಪ ಭೂಮಿ ಪೂಜೆ ನೆರವೇರಿಸಿದರು.

ಉಪಾಧ್ಯಕ್ಷ ಶಿವಶಂಕರ್ ನಿರ್ದೇಶಕರಾದ ಹೊನ್ನಪ್ಪ ರಾವ್ ಕಾಳಿಂಗೆ, ಲೋಕನಾಥ ರಾವ್, ಬಿ.ಎಂ.ತಾರಕೇಶ್ವರಿ , ಚಂದ್ರಕಲಾ, ಜಯಮ್ಮ, ಅಪ್ಪಾಜಿಗೌಡ, ತಿಮ್ಮನಾಯಕ, ಮುಕುಂದ.ಕೆ, ಶ್ರೀಕಂಠ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆನಂದ್.ಎನ್. ಮತ್ತು ಸಿಬ್ಬಂದಿವರ್ಗ ಹಾಜರಿದ್ದರು.


ಶ್ರೀ ಎಲ್.ನಾಗೇಂದ್ರ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು